START

START

MICRO FILMED
BY

KARNATAKA STATE
ARCHIVES
1991

MICRO FILMED
BY

KARNATAKA STATE
ARCHIVES
1991

ARS. 15. APP. 90

ಜೀವನ ಶಾಸ್ತ್ರ" - ಕನ್ನಡ ಶಾಲಾ ಉ

ಪುಸ್ತಕ

ಸಂಪುಟ 1906- ಪುಟ ೨೦೦-೨೦೧

(ಆಗಸ್ಟ್ 1906)

ಅಂದ ಮುಂದು ವರಿಸುಲಾಗದೆ.

ಆತುರ ಪ್ರಕೃತಿಯವನ ಶರೀರದ ಲಕ್ಷಣ— ಇವನ ಸ್ನಾಯುಕೋಶಗಳು ಪೂರ್ಣವಾಗಿ ಬೆಳೆದವು ಇರುತ್ತವೆ. ಇವನ ಕೂದಲು ಕೆಂಪು, ಕಣ್ಣು ನೀಲಿ ಬಣ್ಣದವು. ತ್ವಚೆಗಳ ವರ್ಣ-ಮಾರಿಯು ಉಲ್ಲಾಸ ಕಳೆಯುಳ್ಳದ್ದು. ತೀವ್ರ ಉತ್ತೇಜನ ಹೊಂದುವಂಥಾದ್ದು. ಪ್ರೇರಣೆ ತೀವ್ರ ಆಗುವದು. ಅದು ಸ್ಥಿರವಾಗಿರುವದಿಲ್ಲ. ಇವನ ಭಾವನೆಗಳು ಘನವಾದವುಗಳಿರುತ್ತವೆ.

(೨) ಸಿಟ್ಟಿನ ಪ್ರಕೃತಿಯ ಶರೀರದ ಲಕ್ಷಣ— ಇವನ ಸ್ನಾಯುಗಳು ಪೂರ್ಣ ಬಲಪಟ್ಟಂಥವು. ಕಣ್ಣು ಮತ್ತು ಕೂದಲೂ ಕಪ್ಪು. ಮುಖವರ್ಣ ಬಹಳ ಮಾಡಿ ಸಾದಗಪ್ಪು ಮುಖಮುದ್ರೆ ಸಪ್ಪಗೆ ಮೇಲಿನವನಿಗಿಂತ ಕಡಿಮೆ ಜಾಗ್ರತೆಯುಳ್ಳವನು ಇವನ ಮೇಲೆ ಪರಿಣಾಮ ತಡವಾಗಿ ಆಗಿ ಬಹುಕಾಲ ನಿಲ್ಲುತ್ತವೆ. ಇವನಲ್ಲಿ ನಿಶ್ಚಯ, ಸ್ವಾವಲಂಬನ, ತನ್ನಲ್ಲಿ ತನ್ನ ನಂಬಿಗೆ, ಮುಂತಾದ ಗುಣಗಳಿರುವವು.

(೩) ಶಾಂತ ಸ್ವಭಾವದವನ ಶರೀರದ ಲಕ್ಷಣ—ದುಂಡನ್ನ ಮೋರೆ, ನಿಸ್ತೇಜ ಮುಖ, ದಪ್ಪ ತುಟಿ, ಶರೀರವು ಉದ್ಯೋಗ ಮಾಡಲಿಕ್ಕೆ ಒಲ್ಲದ್ದು. ಶರೀರಸ್ಥೂಲ, ಇವನ ಮನಸ್ಸು ಯಾವಾಗಲೂ ಜಡವಿರುವದು. ಮಂದ ಬುದ್ಧಿ, ತಾಳ್ಮೆಯಿಂದ ಕೆಲಸ ಮಾಡುವವನು. ಸ್ವಂತ ಅವಲಂಬನೆ ಇರುವದು.

(೪) ಭಾವನಾ ಪ್ರಕೃತಿಯವನ ಶರೀರದ ಲಕ್ಷಣ— ಸತೇಜಮೋರೆ, ಕಣ್ಣು ದೊಡ್ಡವಾಗಿ ತೇಜವುಳ್ಳವು. ಇವನು ಬಡಕನಾಗಿದ್ದು ನಾಜೂಕ ಇರುವನು. ತೀವ್ರ ನಡಿಗೆ, ದೊಡ್ಡತಲೆ. ಇವನ ಮನವು ಗಾಯನ, ಕವಿತೆ ಇವುಗಳ ಕಡೆಗೆ ಇರುವದು ಸೃಷ್ಟಿ ಚಮತ್ಕಾರವಿಷಯಕ್ಕೆ ಪ್ರೀತಿ ಬಹಳ. ವ್ಯವಹಾರದಲ್ಲಿ ಲಕ್ಷವಿಲ್ಲದವನು ಈ ಪ್ರಕಾರವಿರುತ್ತದೆ

ಮಾಸ್ತರನಿಗೆ ತನ್ನ ವರ್ಗದಲ್ಲಿರುವ ಹುಡುಗರನ್ನು ಮೇಲೆ ವಿವರಿಸಿದ ನಾಲ್ಕು ವರ್ಗಗಳಲ್ಲಿ ಯಾವ ವರ್ಗದಲ್ಲಿ

ಹಾಕಬೇಕೆಂಬುವದು ತಿಳಿಯುವದು ಕಠಿಣವು. ಒಂದೇತೆರದ ಸ್ವಭಾವದವರು ಸಿಗುವದಿಲ್ಲ. ಮಿಶ್ರಸ್ವಭಾವದ ಮೇಲೆ ಆಗುವ ಪರಿಣಾಮವಾದರೂ ವಯಸ್ಸು, ಕುಲ, ಲಿಂಗಭೇದ ಇವುಗಳನ್ನು ಅವಲಂಬಿಸಿರುವದು. ಹೆಂಗಸರು ೧ನೇ ಮತ್ತು ೪ನೇ ಸ್ವಭಾವದವರಿರುವರು. ಗಂಡಸರು ೨ನೇ, ೩ನೇ ಸ್ವಭಾವದವರಿರುವರು. ಚಿಕ್ಕವರು ಆತುರ ಸ್ವಭಾವದವರಿರುತ್ತಾರೆ. ಆಯರ್ಗರು ಮತ್ತು ಇವರ ಭಾಗದವರು ೧ನೇ ಮತ್ತು ೪ನೇ ಸ್ವಭಾವದವರು. ಟ್ಯೂಟಾನಿಕ ಕುಲದವರು ೨ನೇ ಮತ್ತು ೩ನೇ ಕುಲದವರಿರುತ್ತಾರೆ. ಪ್ರತಿಯೊಬ್ಬ ಮಾಸ್ತರನಿಗೆ ಪ್ರತಿಯೊಬ್ಬ ಹುಡುಗನ ಸ್ವಭಾವ ಅರಿತುಕೊಳ್ಳುವದು ಮಹತ್ವವದೆ. ಯಾಕಂದರೆ ಚತುರನಾದ ಒಕ್ಕಲಿಗನು ತನ್ನ ಹೊಲದ ಲಕ್ಷಣವನ್ನು ತಿಳಿಕೊಂಡು ಹ್ಯಾಗೆ ಬೆಳೆ ಮಾಡಿಕೊಳ್ಳುವನೋ ಹಾಗೇ ಚತುರನಾದ ಶಿಕ್ಷಕನು ಹುಡುಗರ ಮನಸಿನ ಸ್ವಭಾವ ತಿಳಿಕೊಂಡು ಯಾವ ರೀತಿಯಿಂದ ತಿದ್ದಬೇಕೆಂಬದನ್ನು ಅರಿತುಕೊಳ್ಳಲಿಕ್ಕೆ ಬರುವದು. ಪೂರ್ಣಸ್ವಭಾವದವನಿದ್ದರೆ ತಿಳಿದುಕೊಳ್ಳಲಿಕ್ಕೆ ತೊಂದರೆ ಇಲ್ಲ. ಮಿಶ್ರಸ್ವಭಾವದವನಿದ್ದರೆ ಅವನ ಸ್ವಭಾವ ತಿಳಿದುಕೊಳಲಿಕ್ಕೆ ತೊಂದರೆಯಾಗುತ್ತದೆ ೧ನೇ ಮತ್ತು ನಾಲ್ಕನೇ ಪ್ರಕೃತಿಯುವರನ್ನು ತಿದ್ದುವದು. ವಯ ಮತ್ತು ಸ್ಥಿರತ್ವ ಇವುಗಳಿಂದ ತಿದ್ದಬಹುದು. ೨ನೇ ೩ನೇ ಪ್ರಕೃತಿಯುವರನ್ನು ತಿದ್ದುವದು ಕಠಿಣವು. ಇವರನ್ನು ತಿದ್ದಲಿಕ್ಕೆ ಜಾಣನಾದ ಮಾಸ್ತರನು ಬೇಕು. ಅಯೋಗ್ಯ ಮಾಸ್ತರನು ಇವರನ್ನು ಕೆಡಿಸುತ್ತಾನೆ. ಇಂಥವರ ಸಂಗಡ ವಾದಹಾಕಬಾರದು. ಅದರಲ್ಲಿ ಜಯ ಬರುವದಿಲ್ಲ. ಬಂದರೂ ಶ್ರಮಬಹಳವಾಗಿ ಪರಿಣಾಮವು ಅಗದಿ ಸ್ವಲ್ಪ ಆಗುತ್ತದೆ. ಇವರನ್ನು ತಿದ್ದಲಿಕ್ಕೆ ತಾಳ್ಮೆಯು ಬಹಳ ಬೇಕು. ೩ನೇ ಸ್ವಭಾವದ ಹುಡುಗನಿಗೆ ಬಹಳ ಕೆಲಸ ಮಾಡಹಚ್ಚುವ ಮಾಸ್ತರನು ಆತುರ ಸ್ವಭಾವದವನಿದ್ದರೆ ಅದನ್ನು ನೋಡುವವರಿಗೆ ನಗೆ ಬಾರದೆ ಇರದು. ೧ನೇ ಸ್ವಭಾವದ ಹುಡುಗನಿಗೆ ಉತ್ತೇಜನ ಬಹಳ ಬೇಡ. ಅದರ

ಪರಿಣಾಮವು ಅವನಲ್ಲಿ ಬಹಳ ಹೊತ್ತು ನಿಲ್ಲುವದಿಲ್ಲ. ಆದ್ದರಿಂದ ಇವನಿಗೆ ಸತತೋದ್ಯೋಗದ ಚಟ ಹಚ್ಚಬೇಕು. ೪ನೇ ವರ್ಗದ ಹುಡುಗನಿಗೆ ವ್ಯವಹಾರಿಕ ಕೆಲಸಗಳನ್ನು ಸ್ವಲ್ಪ ಹಚ್ಚಬೇಕು. ೫ನೇ ಮೂರನೇ ವರ್ಗದವರಿಗೆ ಕೆಲಸ ಮಾಡುವ ಚಟ ಹಚ್ಚುವದು ಕಠಿಣ. ಹಚ್ಚಿದ ನಂತರ ಅವರು ಬಿಡದೆ ಮಾಡುತ್ತಾರೆ.

ಜಗತ್ತಿನಲ್ಲಿ ಆದ ಮಹತ್ವದ ಕೆಲಸಗಳು ಆವೇಶದಿಂದ ಮಾಡುವದರಿಂದ ಆಗಿಲ್ಲ. ಆದರೆ ವ್ಯವಹಾರಿಕ ಗಂಡಸರೂ ಹೆಂಗಸರೂ ಇರುವದರಿಂದಲೇ ಆಗಿವೆ. ಮನಸ್ಸು ಪ್ರಕೃತಿಕ ರೂಪದಿಂದ, ಮಾನಸಿಕ ರೂಪದಿಂದ, ಶಿಕ್ಷಣ ರೂಪದಿಂದ ಬೆಳೆಯುತ್ತದೆ.

THE HISTORY OF RAJASTHAN.

ರಾಜಾಸ್ಥಾನದ ಇತಿಹಾಸವು

ಅದರಂತೆ ಊರಸಿಂಗನು ಚಿತ್ತೋಡದ ಸಿಂಹಾಸನದಲ್ಲಿ ಮರುದಿವಸ ವಿರಾಜಮಾನನಾಗಿ ಅಲ್ಲಾಉದ್ದೀನನೊಡನೆ ಸಮರ ಮಾಡಿ ರಣದಲ್ಲಿ ದೇಹವಿಟ್ಟನು. ಮರುದಿವಸ ಅಜಯಸಿಂಗನ ಪಾಳಿಯು ಬಂದಿತು ಆದರೆ ಇವನ ಮೇಲೆ ಅರಸನ ಲೋಭವು ವಿಶೇಷವಿದ್ದುದರಿಂದ ಅವನು ಮಗನಿಗೆ-ಮಗನೇ, ಉಳಿದ ನಿನ್ನ ಸಹೋದರರು ರಾಜ್ಯಲಕ್ಷ್ಮಿಯ ಕ್ಷಣಿಕ ಸುಖವನ್ನುಂಡು ವೈರಿಯೊಡನೆ ಹೋರಾಡಿ ಕೀರ್ತಿ ಸಂಪಾದನಾ ಕಾರ್ಯದಲ್ಲಿ ಅವರ ಅವಸ್ಥೆಯೇನಾಗುತ್ತದೆಂಬದನ್ನು ಮನಗಂಡ ಬಳಿಕ ನೀನು ರಣ ಬಲಿಗೆ ಸಿದ್ಧನಾಗು. ಅಲ್ಲಿಯ ವರೆಗೂ ತಡೆ ಎಂದು ಹೇಳಿದ್ದರಿಂದ ಅಜಯಸಿಂಗನು ಪಟ್ಟದೊಡೆತನವನ್ನು ತನ್ನ ಕನಿಷ್ಠ ಬಂಧುಗಳಿಗೆ ಅನುಭೋಗಿಸಲೊಡಂಬಟ್ಟನು ಬಳಿಕ ಅಜಯಸಿಂಗನ ಬೆನ್ನ ಮೇಲಿನವನು ಪಟ್ಟವೇರಿ ರಣದಲ್ಲಿ ಬಿದ್ದನು ಇದರಂತೆ ಲಖಮಸಿಯ ಹನ್ನೊಂದು ಮಕ್ಕಳು ಸಮರ ಕುಂಡಕ್ಕೆ ಆಹುತಿಯಾದರು. ದೇವಿಯ ವಚನದಂತೆ ಇನ್ನೊಂದು ಆಹುತಿ

ಯು ಬೇಕಾಗಿತ್ತು. ಅದಕ್ಕಾಗಿ ಲಖುಮಸಿಯು ತನ್ನ ಪ್ರಿಯಮಗನಾದ ಅಜಯಸಿಂಗನ ವ್ಯಾಮೋಹದಲ್ಲಿ ಶಿಲುಕಿ ತಾನೇ ಹನ್ನೆರಡನೇ ಬಲಿಯಾಗಬೇಕೆಂದು ಬಗೆದು, ಜನಗಳನ್ನು ನೆರಸಿ ಕೂಡಿದ ಯಾವತ್ತೂ ವೀರರ ಮುಂದೆ- ಎಲೈ ಚಿತ್ತೋಡದ ಪಟ್ಟವನ್ನೂ, ನನ್ನನ್ನೂ, ಪದ್ಮಿನಿಯನ್ನೂ ಪವಿತ್ರವಾದ ಕ್ಷತ್ರಿಯ ಕುಲವನ್ನೂ ಕುರಿತು ಅಭಿಮಾನ ಪಡುವ ವೀರಾಗ್ರಣಿಗಳೇ, ಮಂತ್ರಿಗಳೇ, ಇಂದಿಗೆ ನನ್ನ ಹನ್ನೊಂದು ಮಂದಿ ಪುತ್ರರು ಕಾಳಗದ ಕಣದಲ್ಲಿ ಅಸುದೊರೆದರು ಆದರೂ ನಮ್ಮ ಉದ್ದಿಷ್ಟ ಕಾರ್ಯವು ಕೈಗೂಡಲಿಲ್ಲ ಇಷ್ಟೇ ಅಲ್ಲ; ಅದು ಕೈಗೂಡುವ ಲಕ್ಷಣವು ಕೂಡ ತೋರಲೊಲ್ಲದು ಆದ್ದರಿಂದ ನಮ್ಮ ಕುಲಪರಂಪರಾಗತವಾಗಿ ನಡೆದು ಬಂದ ಜೋಹಾರವನ್ನು ಮಾಡಿ, ನಿಃಸ್ಸಂಗರಾಗಿ ಧಾರಾ ತೀರ್ಥದಲ್ಲಿ ಮಿಂದು ಮೋಕ್ಷವನ್ನು ಪಡೆಯುವದೇ ಲೇಸೆಂದೆಣಿಸುತ್ತೇನೆ ಇದಕ್ಕೆ ಅನುಮೋದನವುಂಟೋ? ಅಥವಾ ಬೇರೊಂದೇನಾದರೂ ಉಪಾಯವನ್ನು ಯೋಚಿಸುವಿರೋ? ಹೇಳಿರಿ ಎಂದು ಕೇಳಿದನು

ಅದಕ್ಕೆ ಅಭಿಮಾನಿಗಳಾದ ರಜಪೂತರು—ಒಡೆಯಾ, ನಾವು ಕ್ಷತ್ರಿಯರು ಮರಣಕ್ಕಂಜುವದು ನಮ್ಮ ಶೀಲವಲ್ಲ. ಇನ್ನು ಜಯದಾಶೆಯಂತೂ ಸಫಲವಾಗುವ ಲಕ್ಷಣ ತೋರುವದಿಲ್ಲ. ಆದ್ದರಿಂದ ನಮ್ಮ ಸ್ತ್ರೀವರ್ಗದ ಅಭಿಮಾನವನ್ನು ರಕ್ಷಿಸುವ ಭಾರವನ್ನು ಅಗ್ನಿ ನಾರಾಯಣನ ಮೇಲೆ ಹೊರಿಸಿ ನಾವು ವೀರಸ್ವರ್ಗವನ್ನು ಐದುವದೇ ಲೇಸೆಂದು ಬಿನ್ನಹ ಮಾಡಿದರು. ಅದಕ್ಕೆ ಅರಸನು ಒಡಂಬಟ್ಟು ಕೋಟೆಯೊಳಗಿರುವದೊಂದು ಗವಿಯನ್ನು ಈ ಕೃತ್ಯಕ್ಕೆಂದು ಆರಿಸಿ ತೆಗೆದು ಅದರಲ್ಲಿ ಕುಳ್ಳು ಕಟ್ಟಿಗೆಗಳನ್ನು ಒಟ್ಟಿಸಿದನು. ಬಳಿಕ ಯಾವತ್ತೂ ರಜಪೂತ ಸ್ತ್ರೀಯರು ರಾಣಿಯಾದ ಪದ್ಮಿನಿಯು ಸಹಿತ ಆ ಗುಹೆಯ ಸ್ಥಳಕ್ಕೆ ಬಂದ ಬಳಿಕ ಚಿತೆಯನ್ನು ಹೊತ್ತಿಸಿದರು. ನಾಲ್ಕೂ ದಿಕ್ಕುಗಳಲ್ಲಿ ತನ್ನ ಏಳೂ ನಾಲಿಗೆಗಳನ್ನು ಚಾಚಿ ಪ್ರಜ್ವಲಿಸುತ್ತಿರುವ ಅಗ್ನಿ ನಾರಾಯಣನಿಗೆ ಆ ಹೆಂಗಳೆಯರೆಲ್ಲರು ನಮಸ್ಕರಿಸಿ—ಎಲೈ ಪವಿತ್ರ

ಮೂರ್ತಿಯೋ ತಮ್ಮ ಕುಲ—ರಾಷ್ಟ್ರ—ಧರ್ಮಗಳನ್ನು ರಕ್ಷಿಸುವ ಹೊರೆಯು ನಿನ್ನದೇ ಇರುತ್ತದೆಂದು ಅಂದು ಒಬ್ಬರ ಹಿಂದೊಬ್ಬರು ಆ ಕಿಚ್ಚಿನಲ್ಲಿ ಪ್ರವೇಶಿಸಿದರು. ಆ ಕಾಲದ ರಾಜಪುತ್ರ ಸ್ತ್ರೀಯರ ಪಾತಿವ್ರತ್ಯವನ್ನೂ ಪವಿತ್ರತೆಯನ್ನೂ ಬಣ್ಣಿಸುವದು ಈ ಕಾಲದ ಮನುಷ್ಯನಿಗೆ ಯೋಗ್ಯವಲ್ಲವೆಂದು ಹೇಳತಿಕ್ಕೆ ಅಡ್ಡಿಯಿಲ್ಲ.

ಈ ಮೇರೆಗೆ ಸ್ತ್ರೀಯರ ತೊಡಕನ್ನು ಪರಿಹರಿಸಿಕೊಂಡ ಬಳಿಕ ರಾಣಾ ಲಖಮಸಿಯು, ತನ್ನ ವಂಶದ ಸುರಕ್ಷತೆಯನ್ನು ಕುರಿತು ಆಲೋಚಿಸ ತೊಡಗಿದನು. ಉಳಿದೊಬ್ಬ ಮಗನಾದ ಅಜಯಸಿಂಗನು ಹ್ಯಾಗೆ ಜೀವದಿಂದ ಉಳಿದಾನು? ಅವನನ್ನು ಎಲ್ಲಿಡಬೇಕು? ಎಂದು ಕೆಲಹೊತ್ತು ಯೋಚಿಸಿ ಕಡೆಗೆ ಅವನು ಕೆಲವು ಜನ ಜೀವಕ್ಕೆ ಜೀವ ಕೊಡುವಂಥರೊಂದಿಗೆ ಕೇಳವಾಡವೆಂಬ ಅರವಲೀ ಗುಡ್ಡದೊಳಗಿನ ದುರ್ಗದಲ್ಲಿರಬೇಕೆಂದು ನಿಶ್ಚಯಿಸಿ ಕೂಡಲೆ ಅವನನ್ನು ಅಲ್ಲಿಗೆ ಕಳಿಸಿದನು. ಅಜಯಸಿಂಗನು ತಾನು ಸುರಕ್ಷಿತವಾಗಿ ಕೇಳವಾಡ ದುರ್ಗವನ್ನು ಸೇರಿದೆನೆಂದು ತಂದೆಗೆ ನಿರೋಪ ಕಳಿಸಲು, ಲಖಮಸಿಂಹನು ಬಲೆಯಿಂದ ಪಾರಾದ ಸಿಂಹದಂತೆ ನಿಶ್ಚಿಂತನಾಗಿ ಎಳ್ಳೆ ಪಟುಭಟರೇ, ಇನ್ನು ನಮಗೆ ಹೆಂಡರು ಮಕ್ಕಳ ಅಭಿಮಾನದ ಚಿಂತೆಯಿಲ್ಲ. ಮುಂದೆ ಚಿತ್ತೋಡದ ಗಾದಿಯು ಹ್ಯಾಗೆ ನಡೆದೀತೆಂಬ ಕಾಳಜಿಯೂ ಇಲ್ಲ. ನಮ್ಮ ಇಷ್ಟ ಕಾರ್ಯವು ಕೈಗೂಡಿದ್ದರಿಂದ ಮನಸು ಶಾಂತವಾಗಿದೆ. ರಾಷ್ಟ್ರಾಭಿಮಾನದಿಂದಲೂ ಕುಲಾಭಿಮಾನದಿಂದಲೂ ಭರಿತರಾದ ನಮಗೆ ಕಾಳಗದ ಹೊರ್ತು ಮತ್ತೊಂದರ ಗೊಡವೆಬೇಡ. ಕಾಳಗದಲ್ಲಿ ಗೆದ್ದರಂತೂ ಉತ್ತಮವೆ. ಜಯಲಕ್ಷ್ಮಿಯ ಪಾಣಿಗ್ರಹಣವು ಘಟಿಸುವದು. ಸೋಲುವ ಪ್ರಸಂಗವು ಒದಗಲು ಸಮರವಿಮುಖರಾಗದೆ ಕಾಳಗದ ಕಣದಲ್ಲಿ ಹೋರಾಡಿ ಮಡಿಯೋಣ. ಅದರಿಂದ ವೀರಸ್ವರ್ಗವು ಕೈಗೂಡುವದು. ಎಂದು ಮಾತಾಡಿ ಎಲ್ಲರೊಡನೆ ದುರ್ಗವನ್ನಿಳಿದು ಪಠಾಣರ ಪಾಳ್ಯವನ್ನು ಹೊಕ್ಕು ಯುದ್ಧ ಮಾಡತೊಡಗಿದರು. ಕಡುಗಲಿಗಳು

ಜೀವದ ಹಂಗುದೊರೆದು ಕಾದುತ್ತ ಅಲ್ಲಾ ಉದ್ದೀನನ ಕಡೆಯ ಅನೇಕ ಜನ ವೀರರನ್ನೂ ಸಂಹರಿಸಿದರು. ಆದರೆ ಮುಸಲ್ಮಾನರ ದಂಡು ದೊಡ್ಡದು. ಅದರ ಮುಂದೆ ಇವರ ಆಟ ನಡೆಯಲಿಲ್ಲ. ಕಡೆಗೆ ಅವರ ಸಂಕೇತದಂತೆ ಪ್ರತಿ ಒಬ್ಬ ರಜಪೂತ ವೀರನು ರಣದಲ್ಲಿ ಬೀಳುವವರೆಗೂ ಕಾದಿ ವೀರಸ್ವರ್ಗವನ್ನು ಪಡೆದನು. ಅಲ್ಲಾ ಉದ್ದೀನನಿಗೆ ಜಯವಾಯಿತು. ಅವನು ಕೂಡಲೆ ಕೋಟೆಯನ್ನು ಏರಿ ಒಳಹೊಕ್ಕು ನೋಡಲು, ಒಂದಾದರೂ ಮಾನವ ಪ್ರಾಣಿಯು ಅವನಿಗೆ ಕಾಣಲಿಲ್ಲ. ದೊಡ್ಡದೊಂದು ಜ್ವಾಲೆಯು ಮಾತ್ರ ಗೋಚರವಾಯಿತು. ಇಂಥ ಭಯಂಕರವಾದ ಸ್ಥಿತಿಯನ್ನವಲೋಕಿಸಿ ಪಾಷಾಣ ಹೃದಯನಾದ ಅಲ್ಲಾ ಉದ್ದೀನನಿಗೂ ವಿಷಾದವಾಗಿರಬಹುದು. ಯಾವ ಸುಂದರಿಯ ಸಲುವಾಗಿ ಅನೇಕ ಜನರ ಸಂಹಾರ ಕೃತ್ಯವನ್ನು ಕೈಕೊಂಡನೋ ಆ ಸುಂದರಿಯು ಕೈಸೇರುವದೊತ್ತಟ್ಟಿಗಿರಲಿ, ಆವಳ ದರ್ಶನವು ಕೂಡ ಅಭಾವವಾಯಿತೆಂದು ಅವನು ಹಳಹಳಿಸಿದನು. ರಜಪೂತರು ಲಕುಮಸಿಯ ಸ್ತ್ರೀ ಯಜ್ಞ ವಿಧಿಯ ದಿವಸವನ್ನೂ, ಆ ಗುಹಾರೂಪ ಯಜ್ಞ ವೇದಿಯನ್ನೂ ಪವಿತ್ರವೆಂದು ಇಂದಿಗೂ ಪೂಜಿಸುತ್ತಾರೆ. ಈ ಗುಹೆಯು ಇಂದಿಗೂ ಪ್ರಾಚೀನ ಕಾಲದ ರಜಪೂತ ಸ್ತ್ರೀಯರ ಕುಲಧರ್ಮಗಳ ಅಭಿಮಾನವನ್ನು ಜಗಕ್ಕೆಲ್ಲ ಸಾರುತ್ತ ನೆಲಸಿರುತ್ತದೆ. ಇದರೊಳಗೆ ಪ್ರವೇಶ ಮಾಡಲಿಕ್ಕೆ ಯಾವ ಎದೆಗಾರನಿಗೂ ಧೈರ್ಯ ಸಾಲುವದಿಲ್ಲ. ಯಾವನಾದರೂ ಗಟ್ಟಿತನದಿಂದ ದೀಪ ತಕ್ಕೊಂಡು ಒಳಹೋಗಲು ಯತ್ನಿಸಲು, ಬಾಗಿಲಲ್ಲಿರುವ ದೊಡ್ಡದೊಂದು ಸರ್ಪವು ತನ್ನ ಫೂತ್ಕಾರದಿಂದ ದೀಪವನ್ನಾರಿಸಿ ಅವನ ಮೈಮೇಲೆ ಬರುತ್ತದಂತೆ. ಇರಲಿ, ಈ ಸಂಗತಿಯು ಸನ್ ೧೩೦೩ನೇ ವರುಷ ವರ್ತಿಸಿತೆಂದು ಇತಿಹಾಸದಿಂದ ತಿಳಿಯುವದು.

ಅಲ್ಲಾ ಉದ್ದೀನನು ಮೊಗಲರಲ್ಲಿ ದುಷ್ಟ ಶಿರೋಮಣಿಯಾದ ಅವರಂಗಜೇಬನಂತೆ ಪಾಪಿಷ್ಠನಿದ್ದನು. ಇವನು ತಾನು ಎರಡನೇ ಜಯಶಾಲಿಯಾದ ಸಿಕಂದರನಿರುವೆನೆಂದು ಬಗೆ

ಯುವನು- ಇದೇ ಗರ್ವದಿಂದ ತನಗೆ ಸಿಕಂದರಸಾನಿ ಎಂಬ ಬಿರುದನ್ನಿಟ್ಟುಕೊಂಡು, ಇದೇ ಬಿರುದಿನ ನಾಣ್ಯಗಳನ್ನು ಮುದ್ರಿಸಿದನು. ಇವನು ಅನ್ಹಿಲಪುರ, ಪಟ್ಟಣ, ಧಾರಾ, ನಗರ, ಅವಂತಿಕಾ, ಮಂಡೋಡ, ದೇವಗಿರಿ ಮುಂತಾದ ಕ್ಷತ್ರಿಯರ ರಾಜಧಾನಿಗಳನ್ನು ತಕ್ಕೊಂಡು ಅವುಗಳಲ್ಲಿ ಆಳುತ್ತಿದ್ದ ಸೋಳಂಕೀ, ಪ್ರಮಾರ, ಪರಿಹಾರ ಜಾಧವ ಮುಂತಾದ ಕ್ಷತ್ರಿಯ ರಾಜರ ವಂಶವನ್ನು ನಿರ್ಮೂಲ ಮಾಡಿದನು. ಅದೇ ಮೇರೆಗೆ ಜಸಲಮೀರ, ಗಾಗ್ರೋನ ಬುಂದೀ ಮುಂತಾದ ರಾಜಧಾನಿಗಳೂ ಇವುಗಳಲ್ಲಿ ಆಳುತ್ತಿದ್ದ ಭಾಟೀ, ಬೀಚಿ, ಹಾಡಾ ಮುಂತಾದ ರಾಜವಂಶಗಳೂ ಈ ಬಾದಶಹನ ದಾಳಿಗೆ ಗುರಿಯಾಗಿ ನಿರ್ನಾಮವಾದವು. ಮಾರವಾಡದ ರಾಠೋಡ ಮನೆತನವೂ ಅಂಬೇರದ ಕಚ್ಛವಾಹ ಮನೆತನವೂ ಮಾತ್ರ ನಿರ್ನಾಮವಾಗಲಿಲ್ಲ. ಆದರೂ ಇವೆರಡೂ ಅಲ್ಲಾಉದ್ದೀನನ ಸಸೇಮಿರಾದಿಂದ ಅಲಿಪ್ತವಾಗಿದ್ದವೆಂದು ತಿಳಿಯಲಾಗದು. ಈ ಮಹತ್ವಾಕಾಂಕ್ಷಿಯು ಇವೆರಡನ್ನೂ ನಾಮಶೇಷ ಮಾಡುವದಕ್ಕೆ ಬದ್ಧ ಕಂಕಣನಾಗಿ ಯತ್ನ ನಡಿಸಿದ್ದನು.

ಅಲ್ಲಾಉದ್ದೀನನು ಚಿತೋಡವನ್ನು ತಕ್ಕೊಂಡ ಬಳಿಕ ಆ ಕೋಟೆಯಲ್ಲಿ ಕೆಲವು ದಿವಸ ನಿಂತು ಅದರೊಳಗಿರುವ ಅನೇಕ ಇಮಾರತಿಗಳನ್ನು ಕುಂಟೀ ಕಟ್ಟಿ ಹರಗಿಸಿದನು. ದೇವಾಲಯಗಳನ್ನು ನೆಲಸಮ ಮಾಡಿಸಿದನು. ಕಡೆಗೆ ಝಾಲವಾಡದ ಮಾಲದೇವನೆಂಬವನಿಗೆ ಆ ಕೋಟೆಯ ಸರದಾರನನ್ನು ನೇಮಿಸಿ ತಾನು ದಿಲ್ಲಿಗೆ ಹೋದನು. ಅಲ್ಲಾಉದ್ದೀನನು ಕೋಟೆಯೊಳಗಿನ ಅನೇಕ ಇಮಾರತಿಗಳನ್ನು ಹಾಳು ಮಾಡಿದರೂ, ಪದ್ಮಿನಿಯೂ ಭೀಮಸಿಂಗನೂ ವಾಸಿಸುತ್ತಿದ್ದ ರಂಗಮಹಲನ್ನು ಮಾತ್ರ ಕೆಡವಿಸಲಿಲ್ಲ. ಇದನ್ನು ಕೆಡವಿಸದಿರುವ ಕಾರಣವನ್ನು ಬೇರೆ ಬೇರೆ ಜನರು ಬೇರೆ ಬೇರೆ ಬಗೆಯಾಗಿ ಹೇಳುವರು. ಒಬ್ಬರು, ರಜಪೂತ ಸ್ತ್ರೀಯರು ತಮ್ಮ ಕುಲಧರ್ಮಾಭಿಮಾನವನ್ನು ಕಾಯ್ದುಕೊಂಡ ಬಗ್ಗೆ ಇದು ಪ್ರಮಾಣವಾಗಿರಲೆಂಬ ಭಾವದಿಂದ ಇದನ್ನು ಉ

ಳಿಸಿದನೆಂತಲೂ ಬೇರೊಬ್ಬನು ಪದ್ಮಿನಿಯು ತನಗೆ ಪ್ರಾಪ್ತವಾಗದಿದ್ದರೂ ಅಗ್ನಿಗೆ ನೋಡಿ ಆನಂದ ಬಡಲಿಕ್ಕೆ ಆಕೆಯ ಸ್ಮಾರಕರೂಪವಾಗಿ ಈ ಮಂದಿರವು ಇರಲೆಂದು ಉಳಿಸಿದನೆಂತಲೂ ಬರೆದಿರುವರು. ಅದು ಹ್ಯಾಗೇ ಇರಲಿ, ಆ ಸಾಧ್ವೀಮಣಿಯ ಮಂದಿರವು ಅಲ್ಲಾಉದ್ದೀನನ ಕ್ರೋಧಾಗ್ನಿಗೆ ಆಹುತಿಯಾಗಲಿಲ್ಲೆಂಬದು ನಿಜವು.

CONSCIENCE.

ನಿರ್ಣಯ-ಶಕ್ತಿಯು.

(ಬರೆದು ಬಂದದ್ದು)

ಪ್ರಾಣಿಮಾತ್ರರು ಆವದೊಂದು ಕೆಲಸ ಮಾಡಬೇಕಾದರೆ ಬಹುತರವಾಗಿ ಮೊದಲು ಕಲ್ಪನೆಯನ್ನೂ, ಮುಂದೆ ಆಕಲ್ಪನೆಗೆ (ವಿಚಾರಕ್ಕೆ) ಸರಿಯಾಗಿ ಕಾರ್ಯವನ್ನೂ ನಡಿಸುತ್ತಾರೆ. ಒಟ್ಟಿಗೆ ಮೊದಲು ವಿಚಾರ, ಬಳಿಕ ಆಚಾರ; ಈ ವಿಚಾರ ಆಚಾರಗಳು ಜಗತೀ ತಲದ ಮೇಲಿರುವ ಎಲ್ಲ ಪ್ರಾಣಿಗಳ ಮೇಲೂ ತಮ್ಮ ಅಮಲು ನಡೆಯಿಸಿ ಅವುಗಳನ್ನು ತಮ್ಮಾಧೀನ ಮಾಡಿಕೊಂಡು, ಅವರವರ ವಿಚಾರಾಚಾರಗಳಿಗೆ ತಕ್ಕಂತೆ ಸುಖ ದುಃಖಗಳನ್ನಿತ್ತು ಸೂತ್ರ ಬೊಂಬೆಯಂತೆ ಕುಣಿಸುತ್ತಿರುವವು. ವ್ಯಕ್ತಿಯ ಸಂಬಂಧದ ಕಲ್ಪನೆಗಳೂ ತದನುಗುಣವಾದ ಆಚರಣೆಗಳೂ ತನ್ನ ಸುಖ ದುಃಖಕ್ಕೆ ಮಾತ್ರವಲ್ಲದೆ ತನ್ನ ಕುಟುಂಬದ ಇಲ್ಲವೆ ಸಮಾಜದ ಸುಖ ದುಃಖಗಳಿಗೂ ಕಾರಣೀಭೂತವಾಗಿರುತ್ತವೆ. ಕುಟುಂಬದಲ್ಲಿ ಒಬ್ಬನು ಕೆಟ್ಟವನಾದರೆ, ಆ ಕುಟುಂಬಕ್ಕಿಷ್ಟೇ ಅಲ್ಲ, ಸಮಾಜಕ್ಕೂ ಕುಂದು ಬರುತ್ತದೆ. ತಾತ್ಪರ್ಯವೇನಂದರೆ,—ವ್ಯಕ್ತಿಯ ವಿಚಾರ—ಆಚಾರಗಳಿಂದ ಸಂಭವಿಸಿದ ಸುಖ ದುಃಖಗಳು ಆ ವ್ಯಕ್ತಿಗೂ, ಅದರ ಕುಟುಂಬಕ್ಕೂ ಸಮಾಜಕ್ಕೂ ಬಳಿಕ ರಾಷ್ಟ್ರಕ್ಕೂ ಒದಗುತ್ತವೆ ಸುವಿಚಾರ ಸಂಪನ್ನತೆಯಿಂದ ಸುಖವೂ, ಕುವಿಚಾರದಿಂದ ದುಃಖವೂ ಉಂಟಾಗುವದು. ನಮ್ಮನ್ನಾಳುವ ಆಂಗ್ಲೇಯರ ವರ್ಚಸ್ಸು ಇಷ್ಟು ಪ್ರಾಬಲ್ಯ ಸ್ಥಿತಿಗೆ

ಬರಬೇಕಾದರೆ, ಅವರಲ್ಲಿರುವ ಉದ್ಯೋಗಾಭಿರುಚಿ, ಸತತ ಪ್ರಯತ್ನ, ನಿಯಮಿತತ್ವ, ಸುವ್ಯವಸ್ಥೆ, ಸ್ವಪ್ರೀತಿ ಮುಂತಾದ ಸುವಿಚಾರ ಪ್ರೇರಿತವಾದ ಸುಗುಣಗಳೇ ಕಾರಣವಾಗಿರುವವು. ವ್ಯಕ್ತಿಯು ಮೇಲಾಗಲೀ ರಾಷ್ಟ್ರದ ಮೇಲಾಗಲೀ ಎಲ್ಲಿಯವರೆಗೆ ಸುವಿಚಾರದ ಕಾವಲು ಜಾಗರೂಕವಾಗಿ ಇರುವದೋ ಅಲ್ಲಿಯವರೆಗೆ ತ್ರಾಸ, ಭೀತಿ, ಅನರ್ಥಗಳ ಅಂಜಿಕೆಯಿಲ್ಲ! ಮರಾಟರ ಉತ್ಕರ್ಷವು ಅವರ ಸುವಿಚಾರ ಸದಾಚಾರಗಳಿಂದಲೇ ಉಂಟಾಗಿತ್ತು. ಸುವಿಚಾರ ಸೂರ್ಯನು ಕೆಳಗೆ ಇಳಿಯ ಹತ್ತಿ ಕೊನೆಗೆ ಅಸ್ತಾಚಲಕ್ಕೆ ಬರಬೇಕಾದರೆ ಅದೇ ಮರಾಟರೇ ತಂತಮ್ಮೊಳಗೆ ಬಡಿದಾಡ ಹತ್ತಿ ಒಬ್ಬರನ್ನೊಬ್ಬರು ಮುಳುಗಿಸಬೇಕೆಂಬ ಕುವಿಚಾರಪರವಶರಾದುದೇ ಕಾರಣವು. ರೋಮ ರಾಜ್ಯದ ಹಾಡಾದರೂ ಹೀಗೆಯೇ ಆಯಿತು. ಮುಖ್ಯವಾಗಿ,—

ಸುವಿಚಾರ ರೂಪವಾದ ಮೃಗೇಂದ್ರನು ಜಾಗ್ರತೆಯಿಂದ ಇರುವನಕ ಪ್ರತಿಯೊಂದು ವ್ಯಕ್ತಿಗೂ ರಾಷ್ಟ್ರಕ್ಕೂ ಉತ್ಕರ್ಷೋನ್ನತಿಗಳು ನೆಲೆಗೊಂಡು ನಿಂತು, ಅನರ್ಥ, ಭೀತಿ ಮುಂತಾದ ಮತ್ತ ಮಾತಂಗಗಳಿಗೆ ಸಹ ಅನುವು ದೊರೆಯುವದಿಲ್ಲ. ಅದೇ ಸುವಿಚಾರ ಸಿಂಹವು ಸುಪ್ತಾವಸ್ಥೆಯಲ್ಲಿದ್ದರೆ ತದ್ವಿರುದ್ಧವಾದ ಅಪಕರ್ಷಾಯೋಗ್ಯತೆಗಳು ಬೆಂಬಳಿಸುವವು. ಉದಾತ್ತ ವಿಚಾರಗಳ ಪ್ರಕಾಶದಿಂದ ಅಜ್ಞಾನ ತಿಮಿರವು ತೊಲಗಿ ಸುಜ್ಞಾನ ಸುಖವನ್ನು ಅನುಭವಿಸುವದೂ, ಕುವಿಚಾರ ಲಂಪಟಿಯಾಗಿ ಅಜ್ಞಾನ ಪಂಕದಲ್ಲಿ ಮಗ್ನನಾಗಿ ದುಃಖೋದಧಿಯಲ್ಲಿ ಮುಳುಗುವದೂ, ಮನುಷ್ಯನಲ್ಲಿರುವ ಸುವಿಚಾರ—ಕುವಿಚಾರಗಳ ಕರ್ತವ್ಯದ ಫಲವಾಗಿದೆ. ಸುವಿಚಾರಿಯೇ ಧನ್ಯನು! ಮಾನ್ಯನು!! ಕರ್ತವ್ಯಪ್ರವೃತ್ತನಾಗಿ ಸುಖವನ್ನು ಪಡೆಯಲಿಕ್ಕೆ ಸುವಿಚಾರವೂ, ಕರ್ತವ್ಯಪರಾಙ್ಮುಖನಾಗಿ ದುಃಖವನ್ನು ಅನುಭವಿಸಲಿಕ್ಕೆ ಕುವಿಚಾರವೂ ಕಾರಣವೆಂದು ಸ್ಪಷ್ಟವಾಗಿ ತಿಳಿದ ಬಳಿಕಾದರೂ ತಮ್ಮ ಮನಸ್ಸನ್ನು ಸುವಿಚಾರ ಸಂಪನ್ನದ್ದಾಗಿ ಮಾಡಿಕೊಳ್ಳದಿದ್ದರೆ ಇಲ್ಲವೆ ದುಷ್ಟ ವಿಚಾರಗಳ ಮೂಲೋ

ತ್ಪಾಟನೆ ಅಥವಾ ಶಕ್ಯವಾದಷ್ಟು ಕೊರತೆಯನ್ನು ಮಾಡಿ ಕೊಳ್ಳದಿದ್ದರೆ ಪ್ರತಿಯೊಬ್ಬನ ಅಜ್ಞಾನತನದ ಪರಮಾವಧಿ ಯಾಯಿತೆಂದು ತಿಳಿಯಬೇಕಾಗುವದು.

೬. ಸುವಿಚಾರ ಕುವಿಚಾರಗಳಾವವೆಂಬದಕ್ಕೆ ನಿರ್ಣಯ ಸಾಧನಗಳು. ಹುಟ್ಟಿದಾಗ ಮನುಷ್ಯನ ಮನಸ್ಸು ಬಿಗೆದ ವಸ್ತ್ರದಂತೆ ನಿರ್ಮಲವಾಗಿಯೂ ತೆರವುಳ್ಳದ್ದಾಗಿಯೂ ಇರುವದು. ಆಗಿನ ಕಾಲವು ಜ್ಞಾನ ಸಂಗ್ರಹಕ್ಕೆ ತಕ್ಕದ್ದಾಗಿದ್ದರೂ, ಮನುಷ್ಯನು ಅದೇ ಜಗತ್ತಿನಲ್ಲಿ ಬಂದುದರಿಂದ ಹೊಸಬನೂ ಪರಕೀಯನೂ ಆಗಿ ಎಲ್ಲಾ ಬಗೆಯಿಂದ ಅಪರಿಚಿತನಿರುತ್ತಾನೆ. ಶರೀರ ಪೋಷಣೆಗೆ ಅನುಕೂಲವಾದ ವ್ಯಾಪಾರಗಳನ್ನು ಸಾಗಿಸತಕ್ಕಂತಹ ಜ್ಞಾನವು ಹುಟ್ಟು ಎಲ್ಲರಲ್ಲಿಯೂ ಕಂಡು ಬರುತ್ತದೆ. ಶಿಶುವು ಹುಟ್ಟಿದ ಕೂಡಲೆ ಅಳುತ್ತದೆ. ತಾಯಿಯ ಮೊಲೆಯುಣ್ಣುತ್ತದೆ. ತನ್ನಿಷ್ಟಕ್ಕೆ ತಾನೇ ನಗುತ್ತದೆ, ಈ ಬಗೆಯ ಜ್ಞಾನವನ್ನು ಅದಕ್ಕೆ ಯಾರು ಕೊಟ್ಟರು! ಈ ವಿದ್ಯೆಯನ್ನು ಯಾರು ಕಲಿಸಿದರು? ಈ ಮೊದಲಾದವುಗಳನ್ನು ವಿಚಾರ ಮಾಡಿ ನೋಡಿದರೆ, ಜಗನ್ನಿಯಾಮಕನ ಅತರ್ಕ್ಯವಾದ ಲೀಲೆಯೂ, ಪ್ರಾಣಿಗಳ ಮೇಲಿನ ಅನುಪಮೇಯವಾದ ಮಮತ್ವವೂ ಕಂಡು ಬರುತ್ತದೆ. ಮನುಷ್ಯನು ಸೃಷ್ಟ್ಯವಲೋಕನವನ್ನು ಹೇಗೆ ಹೇಗೆ ಹೆಚ್ಚಿಗೆ ಮಾಡುವನೋ ಹಾಗೆ ಹಾಗೆ ಅವನಲ್ಲಿ ಜ್ಞಾನ ಸಂಗ್ರಹವು ಹೆಚ್ಚಾಗುತ್ತ ಹೋಗುತ್ತದೆ. ಸಂಸರ್ಗವು ಹೆಚ್ಚಾದಂತೆ ಜ್ಞಾನ ಗ್ರಹಣದ ಆಸ್ಥೆಯೂ ಬೆಳೆಯುತ್ತ ಹೋಗುವದು. ಜ್ಞಾನದ ಬೆಳೆಗೆಯು ಪ್ರತಿಯೊಬ್ಬನ ಮಾನಸ ಶಕ್ತಿಯನ್ನು ಅವಲಂಬಿಸಿರುತ್ತದೆ. ಮಾನಸ ಶಕ್ತಿಯಾದರೂ ಬೇರೆ ಬೇರೆ ಮನುಷ್ಯರಲ್ಲಿ ಹೆಚ್ಚು ಕಡಿಮೆಯ ಮಾನದಿಂದಲೇ ಇರುತ್ತವೆ. ಗ್ರಾಹಕಶಕ್ತಿ, ಕಲ್ಪನಾಶಕ್ತಿ, ಸ್ಮರಣಶಕ್ತಿ, ವಿವೇಕಶಕ್ತಿ, ಮೊದಲಾದವುಗಳು ಮಾನಸಶಕ್ತಿಯ ಭಾಗಗಳೇ! ಇವುಗಳಿಗೆ ಮಿದುಳಿನಲ್ಲಿ ಬೇರೆ ಬೇರೆ ಸ್ಥಳಗಳು ಗೊತ್ತು ಮಾಡಿಕೊಡ

ಲ್ಪಟ್ಟಿರುತ್ತವೆಂದು ಮಾನಸ ಶಾಸ್ತ್ರಜ್ಞರು ಹೇಳುವರು. ಈಶ್ವರ ನಿರ್ಮಿತ ಸೃಷ್ಟಿಯಲ್ಲಿ ಇರತಕ್ಕ ಅನೇಕ ಪದಾರ್ಥಗಳಲ್ಲಿ ಸಾಮ್ಯ ವೈಷಮ್ಯಗಳು ಇದ್ದೇ ಇರುತ್ತವೆ. ಸೃಷ್ಟ ಪದಾರ್ಥಗಳ ವರ್ಗೀಕರಣ ಮಾಡಿದ ಬಳಿಕ ಪ್ರತಿಯೊಂದು ವರ್ಗದಲ್ಲಿಯೇ ಎರಡೆರಡು ವ್ಯಕ್ತಿಗಳನ್ನು ತೆಗೆದುಕೊಂಡು ಒಂದನ್ನೊಂದು ಸೂಕ್ಷ್ಮ ದೃಷ್ಟಿಯಿಂದ ಪರೀಕ್ಷಿಸುತ್ತ ಹೋದರೆ, ಪರಸ್ಪರ ಭಿನ್ನತ್ವವು ಆಗಲೇ ಕಂಡು ಬರುವದು ಇಬ್ಬರು ಮನುಷ್ಯರು ಒಂದೇ ಹೊಟ್ಟೆಯಿಂದ ಹುಟ್ಟಿದವರಾದರೂ ಕೂಡ ಅವರ ಬಾಹ್ಯಚಿನ್ಹಗಳಲ್ಲಿ ಹೆಚ್ಚು ಕಡಿಮೆ ಇರುವದಲ್ಲದೆ ಅವರ ಮನೋವ್ಯಾಪಾರಗಳಲ್ಲಿಯೂ ಮಹದಂತರವು ಕಂಡು ಬರುತ್ತದೆ. ಪರಮಾತ್ಮನು ಎಲ್ಲ ಮನುಷ್ಯರಲ್ಲಿಯೂ ಸಮನಾದ ಯೋಗ್ಯತೆಯು ಮಾನಸಶಕ್ತಿಯನ್ನು ಕೊಟ್ಟಿರುತ್ತಾನೆಂತಲೂ, ಉಪಾಧಿಯ ಸಂಸರ್ಗದಿಂದ ಇಲ್ಲವೆ ಕಾರಣ ಪರತ್ವದಿಂದ ಮಾನಸಶಕ್ತಿಯು ಗುಣಧರ್ಮಗಳಲ್ಲಿ ಹೆಚ್ಚು ಕಡಿಮೆಯಾಗುತ್ತದೆಂತಲೂ ಹಲವರು ಹೇಳುತ್ತಾರೆ. ಭರ್ತೃಹರಿಯು 'ಪ್ರಾಯೇಣಾಧಮ ಮಧ್ಯಮೋತ್ತಮಗುಣಾಃ ಸಂಸರ್ಗತೋ ಜಾಯತೇ' ಎಂದು ಹೇಳಿರುವದರಿಂದ ಮೇಲಿನ ಮತಕ್ಕೆ ಪುಷ್ಟಿ ಬರುವದು ನಿಜವು ಆದರೆ ಕಾರಣ ಪರತ್ವದಿಂದ ಮಾನಸಶಕ್ತಿಯು ಗುಣಧರ್ಮಗಳಲ್ಲಿ ಹೆಚ್ಚು ಕಡಿಮೆಯಾಗಬಹುದೆಂಬ ಸಿದ್ಧಾಂತಕ್ಕೆ ಒಂದು ವೇಳೆ ಒಪ್ಪಿಕೊಂಡರೂ ಸಕಲರಲ್ಲಿ ಮಾನಸಶಕ್ತಿಯು ಸರಿಯಾದ ಯೋಗ್ಯತೆಯುದಿರುವದೆಂದು ಸ್ಥಾಪಿಸಲಾಗದು ಯಾಕಂದರೆ—ಒಂದೇ ಪರಿಸ್ಥಿತಿಯೊಳಗೆ ಬೆಳೆದ ಒಂದೇ ಮನೆತನದ ಇಬ್ಬರು ಹುಡುಗರಿಗೆ ಒಬ್ಬನೇ ಗುರುವು ಕಲಿಸುತ್ತಿರಲು, ಒಬ್ಬನು ಜಾಣನೂ ಇನ್ನೊಬ್ಬನು ದಡ್ಡನೂ ಆಗಲು ಕಾರಣವೇನು? ಅವರಲ್ಲಿರುವ ಮಾನಸಶಕ್ತಿಯು ಹೆಚ್ಚು ಕಡಿಮೆಯೇ ಸರಿ. ಮಹಾ ಕವಿಯಾದ ಭವಭೂತಿಯು ಬರೆದಿರುವದೇನಂದರೆ:—

वितरति गुरुः प्राज्ञे विद्यां यथैव तथा जडे ।
नतु खलु तयो ज्ञाने शक्तिं करोत्यपहन्तिवा ॥
भवतिच पुनर्भूयान् भेदः फलंप्रति तद्यथा ।
प्रभवति मणिर्बिंबोद्ग्राहे शुचिर्नमृदांचयः ॥ १ ॥

ದಡ್ಡ ಮತ್ತು ಜಾಣ ಓದಾಳಿಗಳಲ್ಲಿ ಈ ಭೇದವು ತೋರುವದು ಸ್ವಾಭಾವಿಕವಾದ ಸಂಗತಿಯಾಗಿದೆ. ಹುಟ್ಟಿಗೆ ಮಾನಸಶಕ್ತಿಯಲ್ಲಿ ನೈಸರ್ಗಿಕ ಭಿನ್ನತ್ವವು ತೋರುತ್ತದೆ. ಬಾಲ್ಯಾವಸ್ಥೆಯ ಆದಿಭಾಗದಲ್ಲಿ ಸುಮಾರು ೧೮ ತಿಂಗಳುಗಳವರೆಗೆ ಜ್ಞಾನಗ್ರಹಣವು ಅಲ್ಪಾಂಶದಿಂದಲೂ ಬಳಿಕ ೩೦ ತಿಂಗಳುಗಳ ವರೆಗೆ ಅತಿ ಬಿತ್ತರದಿಂದಲೂ ನಡೆಯುವದು. ಶಿಶು ಇದೇ ಮೊತ್ತ ಮೊದಲು ಜಗತ್ತಿನಲ್ಲಿ ತಾನು ಅವತರಿಸಿರುವದರಿಂದ ತನಗಾದ ಆನಂದ, ಆಶ್ಚರ್ಯಜಿಜ್ಞಾಸೆಗಳ, ಮೂಲಕವಾಗಿ ಜ್ಞಾನಾಮೃತವನ್ನು ಗಟ್ ಗಟಾ ಕುಡಿಯುತ್ತದೆಯೋ ಏನೋ ಎಂಬಂತೆ ಆಗ ಕಾಣದು. ೧೮ ತಿಂಗಳ ವಯಸ್ಸಿನನಿಂದ ೩೦ ತಿಂಗಳ ವಯಸ್ಸಿನ ವರೆಗೆ ಸಂಪಾದಿಸಿದ ಜ್ಞಾನದ ಅಳತೆಯು ಅಸಾಧ್ಯವಾದದ್ದೆಂತಲೂ, ಇಡೀ ಜನ್ಮದಲ್ಲಿ ಸಂಗ್ರಹಿಸಿದ ಜ್ಞಾನಕ್ಕಿಂತ ಹೆಚ್ಚು ಜ್ಞಾನವನ್ನು ಈ ಅಲ್ಪ ಕಾಲದಲ್ಲಿ ಕೂಡ ಹಾಕುವನೆಂತಲೂ ಮಾನಸ ಶಾಸ್ತ್ರಜ್ಞರು ಹೇಳುವರು. ಹೀಗೆ ಜ್ಞಾನ ಸುಧಾಪ್ರಾಶನವು ಭರದಿಂದ ಸಾಗಿದ್ದರೂ ಅದರಲ್ಲಿ ಹುರುಳಿಲ್ಲ. ಯಾಕಂದರೆ ಆಗ ಸಾರಾಸಾರ ವಿಚಾರ ಇಲ್ಲವೆ ತಾರತಮ್ಯ ಜ್ಞಾನ, ಒಳಿತು ಹೀನ, ಸಟೆ ದಿಟಗಳ ನಿರ್ಣಯ ಮೊದಲಾದ ನ್ಯಾಯ ಬುದ್ಧಿಯ ಧರ್ಮಗಳು ಇನ್ನೂ ಅಂಕುರಿಸಿರುವದಿಲ್ಲ. ಅಂಕುರಿಸಿದರೂ ತೀರ ಬಾಲ್ಯಾವಸ್ಥೆಯಲ್ಲಿಯೇ ಇರುವವು. ಜ್ಞಾನ ಮತ್ತು ಅನುಭವ ಇವುಗಳ ಅಪಕ್ವಸ್ಥಿತಿಯಲ್ಲಿ ಉದಯಿಸಿದ ನಿರ್ಣಯ ತಾಣವು ಅಪಕ್ವದೆಸೆಯಲ್ಲಿಯೇ ಇರುವದು ಸ್ವಾಭಾವಿಕವಾಗಿದೆ. ಈಗ ಮಾನಸ ರಾಜ್ಯವು ಭಿನ್ನವಾದ ಮನೋವೃತ್ತಿಗಳ ಸ್ವಾಧೀನಕ್ಕೊಳಗಾಗಿರುತ್ತದೆ. ಭೀತಿ, ರತಿ, ಲಜ್ಜೆ, ಜಿಜ್ಞಾಸೆ, ಸ್ನೇಹ ಮೊದಲಾದ ಆ

ನೇಕ ಮನೋವೃತ್ತಿಗಳು ತಮ್ಮೊಳಗೆ ತಾವೇ ಜಗಳಾಡುತ್ತ ಬಲಿಷ್ಠವಾದದ್ದೇ ಸಾಮ್ರಾಜ್ಯದ ಪದವಿಯನ್ನು ಅನುಭವಿಸುತ್ತ ಹೋಗುವದು ಯಾಕಂದರೆ, ಎಲ್ಲಾ ಮನೋವೃತ್ತಿಗಳನ್ನು ತಲೆಯೆತ್ತದಂತೆ ಮಾಡುವ ಶಕ್ತಿಯು ಆವದೊಂದು ವಿಶಿಷ್ಟವಾದ ವೃತ್ತಿಯಲ್ಲಿ ಇನ್ನೂ ಬಂದಿರುವದಿಲ್ಲ. ಸರ್ವಸಾಧಾರಣವಾದ ನಿಯಂತ್ರವು ಇನ್ನೂ ಪ್ರಗಲ್ಭದೆಸೆಗೆ ಬಂದಿರುವದಿಲ್ಲ. ಆದರೆ ಮನಸ್ಸಿನ ಸಾಧಾರಣ ಧರ್ಮವಾದ ಆನಂದವೃತ್ತಿಯು ಸ್ಥಿರವಾಗಿರುತ್ತದೆಂದು ಹೇಳಲಕ್ಕೆ ಇಲ್ಲ. ತಾತ್ಪರ್ಯವೇನಂದರೆ—ವಿವೇಕ ಬುದ್ಧಿಯು ಇನ್ನೂ ಅಪ್ರಗಲ್ಭ ಸ್ಥಿತಿಯಲ್ಲಿಯೇ ಇರುವದರಿಂದ ಮಾನಸ ರಾಜ್ಯದ ಕಾರಭಾರವು ಮನೋವೃತ್ತಿಗಳ ಸ್ವಾಧೀನಕ್ಕೊಳಪಟ್ಟಿರುತ್ತದೆ. ಕೆಲಕಾಲದ ಮೇಲೆ ಈ ಅಜಾಗ್ರತೆಯ ಸ್ಥಿತಿಯು ದೂರವಾಗಿ ನಿರ್ಣಯ ಶಕ್ತಿಯು ಮೆಲ್ಲಮೆಲ್ಲನೆ ಪ್ರೌಢದೆಸೆಗೆ ಬರುತ್ತದೆ.

CORRESPONDENCE
ಪತ್ರವ್ಯವಹಾರ

ಎರಡು ಸಂಖ್ಯೆಗಳ ವರ್ಗಗಳ ಬೇರೀಜು ಅವೇ ಸಂಖ್ಯೆಗಳ ಬೇರೀಜಿಗೆ ಸರಿ ಇದ್ದರೆ, ಆ ಸಂಖ್ಯೆಗಳು,—"ಬೇಕಾದ ಎರಡು ಅಂಕೆಗಳ ವರ್ಗಗಳ ಬೇರೀಜಿಗೆ, ಅವುಗಳ ಘನಗಳ ಬೇರೀಜಿನಿಂದ ಭಾಗಿಸಿ ಬಂದ ಭಾಗಾಕಾರಕ್ಕೆ ಮೂಲ ಅಂಕೆಗಳಿಂದ ಗುಣಿಸಿ ಬಂದ ಗುಣಾಕಾರಗಳೇ ಇರುವವು ಎಂಬದನ್ನು ಸಪ್ರಮಾಣ ಸಿದ್ಧಮಾಡಿರಿ.

ಸಿದ್ಧತೆಯು— ಸಮಪೂರ್ಣ ಅಂಕೆಗಳ ವರ್ಗಗಳು ತಮ್ಮ ತಮ್ಮ ಘನಗಳಿಗಿಂತ ದೊಡ್ಡವಿರುತ್ತವೆ. ಮತ್ತು ಒಂದು ಈ ಪೂರ್ಣ ಅಂಕೆಯು ಹೊರ್ತು ಉಳಿದ ಪೂರ್ಣ ಅಂಕೆಗಳ ಅಥವಾ ವಿಷಮ ಅಪೂರ್ಣ ಅಂಕೆಗಳ ವರ್ಗಗಳು ತಮ್ಮ ತಮ್ಮ ಘನಗಳಿಗಿಂತ ಸಣ್ಣವಿರುತ್ತವೆ. ಲೆಕ್ಕದ ಮೇಲಿಂದ ವಿಚಾರಿಸಲು ಎರಡೂ ಸಂಖ್ಯೆಗಳು ಪೂರ್ಣಾಂಕ ಇಲ್ಲವೆ ಅಪೂರ್ಣಾಂಕಗಳುಳ್ಳ ಸಂಖ್ಯೆಗಳಿರಲಾರವು ಅವು

ಗಳಲ್ಲಿ ಒಂದು ಸಮಪೂರ್ಣಾಂಕ, ಮತ್ತೊಂದು ವಿಷಮ ಇವರ ಬೆಲೆಯು ೧ಕ್ಕಿಂತ ಹೆಚ್ಚು ೨ಕ್ಕಿಂತ ಕಡಿಮೆ ಅಪೂರ್ಣಾಂಕಗಳುಳ್ಳ ಸಂಖ್ಯೆಗಳಿರಬೇಕಾಯಿತು.

ಸಮ ಮತ್ತು ವಿಷಮ ಅಪೂರ್ಣಾಂಕ ಸಂಖ್ಯೆಗಳಲ್ಲಿ ಒಂದೊಂದು ಸಂಖ್ಯೆ ಕೇವೊಂದು ನಿಯಮಿತ ಪಟ್ಟು ಅಥವಾ ಪಾಲಿನ ಅರ್ಧ ಘನಾದಿಗಳು ಹೆಚ್ಚುತ್ತ ಅಥವಾ ಕಡಿಮೆಯಾಗುತ್ತ ಹೋಗಿ ಆವೆರಡು ಸಂಖ್ಯೆಗಳ ವರ್ಗಗಳ ಬೇರೀಜು, ಅವೇ ಸಂಖ್ಯೆಗಳ ಘನಗಳ ಬೇರೀಜಿಗೆ ಸರಿಯಾಗಬೇಕಾದರೆ ೮ ಪಟ್ಟು ಅಥವಾ ಪಾಲು ಆ ಯುಗ್ಮ ಸಂಖ್ಯೆಯ ಗುಣೋತ್ತರವಾಯಿತು.

ಆ ಯುಗ್ಮದ ಸಮ ಅಪೂರ್ಣಾಂಕ ಸಂಖ್ಯೆ ಅಗ್ರಸರ ಅಂಶವಾಗಿಯೂ, ವಿಷಮ ಅಪೂರ್ಣಾಂಕ ಸಂಖ್ಯೆ ಉಪಾಗ್ರಸರ ಭೇದವಾಗಿಯೂ ಇರಲು, ಆ ಯುಗ್ಮದ ಅಗ್ರಸರ ಉಪಾಗ್ರಸರಗಳಲ್ಲಿರುವ ಸಾಧಾರಣ ಗುಣಕವು ಛೇದಿಸಲ್ಪಟ್ಟು ಬರುವ ಭಾಗಾರವು,— ಆ ಯುಗ್ಮದ ಗುಣೋತ್ತರವು. (ಗುಣೋತ್ತರವು ಅಪೂರ್ಣಾಂಕದಿಂದ ತೋರಿಸಲ್ಪಡುವದು.)

ಇನ್ನು ಲೆಕ್ಕದಲ್ಲಿ ಹೇಳಿದಂತೆ ಆ ಯುಗ್ಮ ಸಂಖ್ಯೆಯ ವರ್ಗಗಳ ಬೇರೀಜು ಅಂಶವಾಗಿಯೂ ಘನಗಳ ಬೇರೀಜು ಛೇದವಾಗಿಯೂ ಇಡಲು ಅವುಗಳೊಳಗಿನ ಸಾಧಾರಣ ಗುಣಕಗಳು ಛೇದಿಸಲ್ಪಟ್ಟು ಬರುವ ಭಾಗಾಕಾರವು,— ಆ ಯುಗ್ಮದ ಗುಣೋತ್ತರದ ವರ್ಗಗಳ ಬೇರೀಜು ಅಂಶವಾಗಿಯೂ, ಘನಗಳ ಬೇರೀಜು ಛೇದವಾಗಿಯೂ ಇಡಲು ಬರುವ ಸಂಖ್ಯೆಯೇ ಇರುವದು. ಈ ಸಂಖ್ಯೆಯೇ ಆ ಯುಗ್ಮದ ದೃಢ ಭಾಜಕವು. ಈ ದೃಢ ಭಾಜಕಕ್ಕೆ ಗುಣೋತ್ತರದ ಅಂಶದಿಂದ ಗುಣಿಸಲು ಅಗ್ರಸರವೂ, ಛೇದದಿಂದ ಗುಣಿಸಲು ಉಪಾಗ್ರಸರವೂ ಬರುವವು; ಈ ಅಗ್ರಸರ, ಉಪಾಗ್ರಸರಗಳೇ ಇಚ್ಛಿತ ಸಂಖ್ಯೆಗಳು.

ಆದುದರಿಂದ ಬೇಕಾದ ಎರಡು ಅಂಕಗಳ (ಗುಣೋತ್ತರ ಪದಗಳ) ವರ್ಗಗಳ ಬೇರೀಜಿಗೆ ಅವುಗಳ ಘನಗಳ ಬೇರೀಜ

ನಿಂದ ಭಾಗಿಸಿ ಬಂದ ಭಾಗಾಕಾರಕ್ಕೆ (ದೃಢಭಾಜಕಕ್ಕೆ) ಮೂಲ ಅಂಕೆಗಳಿಂದ (ಗುಣೋತ್ತರದ ಬೇರೆ ಬೇರೆ ಅಂಕೆಗಳಿಂದ) ಗುಣಿಸಿ ಬಂದ ಗುಣಾಕಾರಗಳ ವರ್ಗಗಳ ಬೇರೀಜು ಅವುಗಳ ಘನಗಳ ಬೇರೀಜಿಗೆ ಸರಿ ಇರುವದು. ಇದೇ ಸಿದ್ಧ.

ಪೃಥಕ್ಕರಣವು:— ಯುಗ್ಮ ಸಂಖ್ಯೆಯು ಅ : ಬ ಗುಣೋತ್ತರದ ಪದಗಳು:— $\frac{\text{ಅ}^{3} + \text{ಬ}^{3}}{\text{ಅ}^{2} + \text{ಬ}^{2}}$ ಯುಗ್ಮ ಸಂಖ್ಯೆಯು ದೃಢಭಾಜಕವು. $\text{ಅ}\left(\frac{\text{ಅ}^{3} + \text{ಬ}^{3}}{\text{ಅ}^{2} + \text{ಬ}^{2}}\right) : \text{ಬ}\left(\frac{\text{ಅ}^{3} + \text{ಬ}^{3}}{\text{ಅ}^{2} + \text{ಬ}^{2}}\right)$ ಇವು ಇಚ್ಛಿತ ಸಂಖ್ಯೆಗಳು. (ಅ : ಬ ಗಳ ಬದಲಾಗಿ ಅಂಕೆಗಳು ಹಿಡಿಯಬಹುದು.

ಶಾಳಾ ನವಲೂರ ತಾ. ಧಾರವಾಡ. ತಾ. ೧೫—೭—೧೯೦೬ ಇ.	ಮಲ್ಲಿಕಾರ್ಜುನ ಸೆಟ್ಟ ವಾಜೀ ನಾಮದೇವ ಸ್ಕೂಲ ಮಾಸ್ತರ.

DEPARTMENTAL NOTICE.

ನೋಟೀಸುಗಳು.

ಧಾರವಾಡ ಟ್ರೇನಿಂಗಕಾಲೇಜದ ಪ್ರವೇಶ ಪರೀಕ್ಷೆಯು ಬರುವ ನವಂಬರ ತಿಂಗಳ ೧೪ನೇ ತಾರೀಖು ೧೯೦೬ನೇ ಇಸವಿ ದಿವಸ ಕಾರ್ತೀಕ (ವದ್ಯ ೧೩) ಕನ್ನಡ ೭ನೇ ಇಯತ್ತೆಯಂತೆ ಆಗುವದು. ಪರೀಕ್ಷೆಗೆ ಬರುವವರು ೨ನೇ ಅಥವಾ ೩ನೇ ಗ್ರೇಡ ಮುಲ್ಕೀ ಸರಟೀಫಿಕೇಟ ಪಡೆದವರು ಇಲ್ಲವೆ ಯುನಿವ್ಹರ್ಸಿಟಿ ಪರೀಕ್ಷೆಯಲ್ಲಿ ಪಾಸಾದವರು (ಅಂದರೆ ಫಾಯನಲ್ ಮೆಟ್ರಿಕ್ಯುಲೇಶನ್ ಪರೀಕ್ಷೆಯನ್ನು ಕೊಟ್ಟವರು) ಸಶಕ್ತರೂ, ವ್ಯಂಗ ರಹಿತರೂ ತಕ್ಕ ಮಟ್ಟಿಗೆ ಎತ್ತರ ಇರುವಂಥವರೂ, ೧೬ರ ಮೇಲೆ ೨೨ರ ಒಳಗೆ ವಯಸ್ಸುಳ್ಳವರೂ ಇರಬೇಕು. ಅವರು ವಯಸ್ಸಿನ ದಾಖಲೆಯನ್ನೂ ಮುಲ್ಕೀ ಸರ್ಟಿಫಿಕೇಟನ್ನೂ ಸಂಗಡ ತೆಗೆದುಕೊಂಡು

ತಾರೀಖು ೧೫ನೇ ನವಂಬರದ ಒಳಗಾಗಿ ನಮ್ಮ ಕಡೆಗೆ ಬಂದು ಹಾಜರಾಗಬೇಕು. ಪರೀಕ್ಷೆಗೆ ಬರುವವರು ಅಸಿಸ್ಟಂಟರೇ ಇರಲಿ ಉಮೇದವಾರರೇ ಇರಲಿ ಅವರಲ್ಲಿ ಉತ್ತಮ ರೀತಿಯಿಂದ ಪಾಸಾದ ಜನರನ್ನು ವಿದ್ಯಾರ್ಥಿಗಳಾಗಿ ತೆಗೆದುಕೊಳ್ಳುವೆವು.

ಪರೀಕ್ಷೆಗೆ ಬರುವ ಎಲ್ಲ ಉಮೇದವಾರರು ಬಿನ್ ಇಯತ್ತೆಯು ಅಂಕಲಿಪಿ ಮೊದಲ್ಗೊಂಡು ೭ನೇ ಇಯತ್ತೆಯು ವರೆಗೆ ಇರುವ ಯಾವತ್ತೂ ಪುಸ್ತಕಗಳನ್ನು ಚೆನ್ನಾಗಿ ಓದಿ ಮನನ ಮಾಡಿಕೊಂಡು ಬರಬೇಕು. ಕಾಲೇಜದಲ್ಲಿ ಸೇರಿಸಿಕೊಳ್ಳಲ್ಪಟ್ಟವರು ದಸ್ತೈವಜಗಳನ್ನು ಬರಕೊಡಬೇಕಾಗುತ್ತದಷ್ಟೇ ಅದಕ್ಕೆ ೧೫೦ ರೂಪಾಯಿ ಲಾಯಖಿವುಳ್ಳ ಇಬ್ಬರು ಜಾಮೀನದಾರರು ಬೇಕಾಗುವರು. ಅವರನ್ನು ಸಹ ಗೊತ್ತು ಮಾಡಿಕೊಂಡು ಬರಬೇಕು. ಅಂದರೆ ಕಾಲೇಜದಲ್ಲಿ ಸೇರಿಸಿಕೊಂಡ ಕೂಡಲೆ ಕಾಲೇಜದ ನಿಯಮುಗಳಿಗನುಸರಿಸಿ ಕರಾರ ಪತ್ರ ಬರೆಕೊಡುವದಕ್ಕೆ ಅನುಕೂಲವಾಗುವದು. ಕಾಲೇಜದಲ್ಲಿ ನಿಂತವರು ಕಾಲೇಜದ ನಿಯಮದಂತೆ ಅಡವಾನ್ಸು ೧೦ ರೂಪಾಯಿ ಸ್ಟಾಂಪಿಗಾಗಿ ೧-೮-೦ ಡ್ರಾಯಿಂಗ ಸಾಮಾನಕ್ಕಾಗಿ ೧ ರೂ. ಇಷ್ಟು ಹಣವನ್ನು ಕೊಡಬೇಕಾಗುವದು. ಈ ಹಣವನ್ನೂ ತಮ್ಮ ಖರ್ಚು ವೆಚ್ಚಕ್ಕಾಗಿ ಬೇಕಾಗುವ ಹಣವನ್ನೂ ತೆಗೆದುಕೊಂಡು ಬರಬೇಕು.

೨ ಹೊದ್ದುಕೊಳ್ಳಲಿಕ್ಕೂ ಹಾಸಿಕೊಳ್ಳಲಿಕ್ಕೂ ತರುವ ಅರಿವೆಗಳಲ್ಲಿ ೨ ಬೆಚ್ಚಗಾದ ಉಣ್ಣೀ ಅಂಗಿಗಳೂ ೧ ಜಡವಾದ ಹಚ್ಚಡವೂ ೨ ಕಂಬಳಿಗಳೂ ಅವಶ್ಯವಾಗಿ ಇರಬೇಕು. ಉಣ್ಣೀ ಅಂಗಿಗಳನ್ನು ಬೇಕಾದರೆ ನಾವು ಇಲ್ಲಿ (ಅದರ ಯೋಗ್ಯ ಖರ್ಚು ಕೊಟ್ಟಲ್ಲಿ) ಮಾಡಿಸಿ ಕೊಡುವೆವು. ಅವರಿಗೆ ಕ್ಲಾಸಿನಲ್ಲಿ ಹಾಕಲಿಕ್ಕೆಯೋಗ್ಯವಾದ ಪೋಷಾಕು ಇರಬೇಕು. ಖರ್ಚು ಕೊಟ್ಟರೆ ಇಂಥ ಪೋಷಾಕುಗಳನ್ನು ಮಾಡಿಸಿಕೊಡುವೆವು ತಿಳಿಯುವದು.

ಟ್ರೇನಿಂಗ ಕಾಲೇಜ
ಧಾರವಾಡ ತಾ. ೨೦ನೇ
ಆಗಸ್ಟ ೧೯೦೬ ಇಸ್ವಿ.

S. K. RODDA.
Principal Trainig
College Dharwar.

II

ಹೆಣ್ಣು ಮಕ್ಕಳ ಟ್ರೇನಿಂಗ ಸ್ಕೂಲ ಪ್ರವೇಶ ಪರೀಕ್ಷೆಯು ಬರುವ ನವಂಬರ ತಿಂಗಳ ೧೫ನೇ ತಾರೀಖಿಗೆ ಪ್ರಾರಂಭವಾಗುವದು ಪರೀಕ್ಷೆಗೆ ಬರಲಪೇಕ್ಷಿಸುವ ಹೆಣ್ಣು ಮಕ್ಕಳು ೫ನೇ ಇಯತ್ತೆಯ ಅಭ್ಯಾಸವನ್ನು ಮುಗಿಸಿದವರೂ, ಸಶಕ್ತರೂ, ವ್ಯಂಗ ರಹಿತರೂ, ೧೪ ವರ್ಷ ಮೀರಿದವರೂ ಕುಲೀನ ಮನೆತನದವರೂ ಇರಬೇಕು. ಸಧವೆಯರು ತಮ್ಮ ಗಂಡಂದಿರ ಸಮ್ಮತಿಯನ್ನೂ ವಿಧವೆಯರೂ ಅವಿವಾಹಿತರೂ ತಮ್ಮ ಪಾಲಕರ ಸಮ್ಮತಿಯನ್ನು ಪಡೆಕೊಂಡಿರಬೇಕು.

ಕಾಲೇಜದಲ್ಲಿ (ಟ್ರೇನಿಂಗ ಸ್ಕೂಲಿನಲ್ಲಿ) ಸೇರಿಸಿಕೊಳ್ಳಲ್ಪಟ್ಟವರು ದಸ್ತೈವಜಗಳನ್ನು ಬರೆಕೊಡಬೇಕಾಗುತ್ತದಷ್ಟೇ ಅದಕ್ಕೆ ನೂರು ರೂಪಾಯಿ ಅಸಾಮಿಯುಳ್ಳ ಇಬ್ಬರು ಜಾಮೀನದಾರರು ಬೇಕಾಗುವರು. ಅವರನ್ನು ಸಹ ಗೊತ್ತು ಮಾಡಿಕೊಂಡು ಬರಬೇಕು. ತಿಳಿಯುವದು.

ಧಾರವಾಡ ಟ್ರೇನಿಂಗ ಕಾಲೇಜ
ತಾರೀಖು ೨೦-೮-೧೯೦೬

S K. RODDA.
Principrl Trainig College Dharwar

III

ಈ ನೋಟೀಸಿನ ದ್ವಾರಾ ಯಾವತ್ತು ಮುನಸಿಪಲ ಮತ್ತು ಲೋಕಲ ಬೋರ್ಡ ಶಾಲಾ ಮಾಸ್ತರರಿಗೆ ತಿಳಿಸುವದೇನಂದರೆ ಸುಧಾರಿಸಿದ ಕನ್ನಡ ಕ್ರಮಿಕ ಪುಸ್ತಕಗಳ ಪೈಕಿ ೫ನೇ ಪುಸ್ತಕವು ಸರಕಾರದವರಿಂದ ಮಂಜೂರ ಮಾಡಲ್ಪಟ್ಟದೆ. ಕಾರಣ ಇವತ್ತಿನವರೆಗೆ ೫ನೇ ಇಯತ್ತೆಯಲ್ಲಿ ಉಪಯೋಗಿಸಲ್ಪಟ್ಟ ಹಳೇ ಕ್ರಮಿಕ ಪುಸ್ತಕದ ಬದಲಾಗಿ ಈ ಹೊಸ ಪುಸ್ತಕವನ್ನು ಇಲಾಖೆಯೊಳಗಿನ ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಇನ್ನು ಮುಂದೆ ಉಪಯೋಗಿಸತಕ್ಕದ್ದು.

ಪ್ರತಿ, ಡಾಯರೆಕ್ಟರ ಆಫ್
ಪಬ್ಲಿಕ್ ಇನ್ಸ್ಟ್ರಕ್ಶನ್ ಸಾ-
ಹೇಬರವರ ಕಚೇರಿ.
ತಾ. ೩-೭-೧೯೦೬.

(*Sd*) ಇ. ಜಾಯಿಲ್ಸ,
ಡಾಯರೆಕ್ಟರ ಆಫ್ ಪಬ್ಲಿಕ್,
ಇನ್ಸ್ಟ್ರಕ್ಶನ್.

ಹುಲಬು!   ಹುಲಬು!!   ಹುಲಬು!!!

ಸನ್ನತ್ರಾಯಿ.

ಈ ಗ್ರಂಥದ ಎರಡನೇ ಆವೃತ್ತಿಯು, ಬಲ್ಲವರ ಸೂಚನೆಗೆ ಸರಿಯಾಗಿ ತಿದ್ದಿ, ಎಷ್ಟೋ ಹೊಸ ಸಂಗತಿಗಳೊಡನೆ ಬೆಳೆಯಿಸಲ್ಪಟ್ಟು ಅಚ್ಚಾಗಿದೆ. ಇದು ಎಂತಹ ಪುಸ್ತಕವೆಂಬದು ಈ ಬೋಧ...ನ್ನ ಎಷ್ಟೋ ದೇಶ ಬಾಂಧವರಿಗೆ ಗೊತ್ತಿರುವದು. ಆದರೂ "ಇದು ಅತ್ಯಂತ ಮನೋಹರ ಮತ್ತು ನೀತಿ ಪದವಾದ ಚಿಕ್ಕ ಹಾಡುಗಳಿಂದಲೂ ಕಥೆಗಳಿಂದಲೂ ಕೂಡಿದ್ದು, ಬಾಲಕರಿಗೆ ತಿಳಿಯುವಂತಹದಿರುವದರಿಂದ ಪ್ರತಿಯೊಬ್ಬ ತಾಯಿ ತಂದೆಗಳು ಈ ಪುಸ್ತಕವನ್ನು ತಮ್ಮ ಚಿಕ್ಕ ಮಕ್ಕಳ ಕೈಯಲ್ಲಿ ಅವಶ್ಯವಾಗಿ ಕೊಡತಕ್ಕದ್ದು." ಹೀಗೆ ರಾ. ಸಾ. ಶ್ರೀನಿವಾಸರಾವ ರೋದ್ದ ಮುಂತಾದ ದೊಡ್ಡ ದೊಡ್ಡ ವಿದ್ವಜ್ಜನರು ಅಭಿಪ್ರಾಯ ಕೊಟ್ಟಿರುತ್ತಾರೆಂದು, ಮತ್ತಿನ್ನು ಸಕಲರ ತಿಳುವಳಿಕೆಗಾಗಿ ಇಲ್ಲಿ ಬರೆಯುತ್ತೇ

ಪುಸ್ತಕಗಳು ಧಾರವಾಡ, ಹುಬ್ಬಳ್ಳಿಗಳಲ್ಲಿಯು ಎಲ್ಲಾ ಪುಸ್ತಕವ್ಯಾಪಾರಿಗಳಲ್ಲಿ ಮತ್ತು ಗ್ರಂಥಕರ್ತರಲ್ಲಿ ದೊರೆಯುವವು.

...ಡು-ಧಾರವಾಡ } ತಿ. ಸೋ. ಕುಲಕರ್ಣಿ.
ಶಿಕ್ಷಣಾಲಯ } ಶಾಲಾಗುರು ನಗಳೂರು ತಾ. ಕರಜಗಿ

REGISTERED No. B. 19.

ಸೌದಾಗರ ಬುಕ್‌ಡಿಪೋ.

ಎಲ್ಲ ಶಾಲೆಗಳ ಸರಕಾರಿ, ಹೊಸಕ್ರಮಿಕ ಪುಸ್ತಕಗಳೂ ಖಾಸಗಿ, ಅರ್ಥಗಳೂ, ಮಾರ್ಸಡನ್ ಇತಿಹಾಸವೂ, ಕಥೆಗಳೂ, ಪುರಾಣ ಗೋಖಲೆ ಗಣೀತ (ಗಣಿತಉಪಪತ್ತಿ) ವಗೈರೆ ಪು. ಗಳು ಅವೆ. ಶೋಭೆಯುಳ್ಳ ಮಿಾಸಿಗಳ ಬೆಳವಣಿಗೆಯ ತೈಲು. ಹೊಸ ಪುಸ್ತಕಗಳ ಹೊರ್ತಾಗಿ ಕಮಿಶನ್ ರು. ೧ಕ್ಕೆ ೧ ಆಣೆ ಪ್ರಕಾರ.

ಧಾರವಾಡ. } ಮಹಮ್ಮದ ವ. ಅಬ್ದುಲ್ ಹಮೀದ ಸಾ॥ ಸೌದಾಗರ.

ಪ್ರಕಟನೆ.

ಯಾವತ್ತು ಮುಲ್ಕಿ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸೋಯಿಯಾಗುವಂತೆ ಕೆಳಗಿನ ಪುಸ್ತಕಗಳನ್ನು ಮಾರಾಟಕ್ಕೆ ಇಟ್ಟದ್ದೇವೆ. ಪ್ರತಿಗಳು ತೀರ ಸ್ವಲ್ಪ ಅವೆ.

ಪರೀಕ್ಷೆಯ ಪ್ರಶ್ನೆ ... ೧ ರು. ನಿಬಂಧರತ್ನಾಕರ ೧೦ ಆಣೆ
ಆರನೇ ಪುಸ್ತಕದ ಸಾರಾಂಶ ೬ ಆಣೆ ಸಂಕ್ಷಿಪ್ತ ಛಂದಃಸಾರ ೩ ಆಣೆ

ಈ ನಾಲ್ಕೂ ಪುಸ್ತಕಗಳನ್ನು ಒಮ್ಮಿಗಲೆ ತೆಗೆದುಕೊಂಡರೆ ೧।ಲಕ್ಕೆ ಕೊಡುವೆವು. ಇದರ ಹೊರ್ತು ನಾಟಕ, ಕಾದಂಬರೀ ಕಥೆಗಳು, ವೀರಶೈವ ಮತದ ಪುಸ್ತಕಗಳು, ಗಣಿತಚಂದ್ರಿಕೆ, ವಡಿವೆಪಾತ ಮುಂತಾದವುಗಳು ಯೋಗ್ಯ ಕಿಮ್ಮತಿಗೆ ದೊರೆಯುತ್ತವೆ. ಹೆಚ್ಚಿಗೆ ಪ್ರತಿಗಳನ್ನು ತೆಗೆದುಕೊಳ್ಳುವವರಿಗೆ ಭರಪೂರ ಕಮಿಶನ್ನ ಸಿಗುವದು.

ಖಾನೋಲಕರ ಮತ್ತು ಕಂಪನಿ. ಧಾರವಾಡ.

ಕನ್ನಡ ಶಾಲಾಪತ್ರ.

KANARESE
SCHOOL PAPER.

ಪುಸ್ತಕ ೪೨] ಅಕ್ಟೋಬರ ೧೯೦೬. [ಸಂಖ್ಯೆ ೧೦.

ಅನುಕ್ರಮಣಿಕೆ. ಪುಟ.

೧. ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು ೨೧೭-೨೨೧

೨. ಮಾನಸಶಾಸ್ತ್ರ ೨೨೧-೨೨೪

೩. ರಾಜಸ್ಥಾನದ ಇತಿಹಾಸವು ೨೨೪-೨೩೨

೪. ನಿರ್ಣಯ ಶಕ್ತಿಯು ೨೩೨-೨೩೮

೫. ಪತ್ರವ್ಯವಹಾರ. ೨೩೮-೨೪೦

೬. ನೋಟೀಸುಗಳು ೨೪೦

CONTENTS.

1. Educational Intelligence and Useful Notes 217-221

2. Psychology 221-224

3. The History of Rajasthan 224-232

4. Conscience. 232-238

5. Correspondence 238-240

6. Departmental Notices. 240

DHARWAR:

PRINTED AT THE KARNATIC BOOK DEPOT PRESS,

1906.

REGISTERED No. B. 19.

ವ್ಯಾಪಾರಕ್ಕೆ ಸಿದ್ಧವವೆ.

ಪ್ರೊ॥ ಗೋಖಲೆ ಗಣಿತದ ಕನ್ನಡ ಭಾಷಾಂತರ ೨ನೇ ಭಾಗ. (೫ ನೆ, ೬ ನೆ, ೭ ನೆ ಇಯತ್ತೆಯ ಹಾಗು ಟ್ರೇನಿಂಗಕಾಲೇಜದ ವಿದ್ಯಾರ್ಥಿಗಳಿಗಾಗಿ) ೧-೨-೦

ಗಣಿತ ಉಪಪತ್ತಿ—(ರಾ. ಶ್ರೀ. ಕುಲಕರ್ಣಿಕೃತ) ೧-೦-೦

ನಿಬಂಧಮಾಲೆ—(ಶಾಲಾಖಾತೆಯ ಸಲುವಾಗಿ ಮಂಜೂರಾದದ್ದು) ೦-೧೨-೦

ಪದ್ಯಾರ್ಥಬೋಧಿನಿ—೬ ನೆ ಯತ್ತೆ (ಶಿ. ಸೊ. ಕುಲಕರ್ಣಿ) ೦-೬-೬

ಮೇಲ್ಕಂಡ ಎರಡೂ ಪುಸ್ತಕ ಒಮ್ಮೆಲೆ ... ೦-೧೪-೦

ಇವುಗಳಲ್ಲದೆ ಹೊಸತರದ ಕ್ರಮಿಕ ಪುಸ್ತಕಗಳೂ ಇತಿಹಾಸ ಮುಂತಾದವೂ ಸಿಗುವವು.

ಶ್ರೀನಿವಾಸ ವಾಸುದೇವ ಹುಯಿಲಗೋಳ,
ಬುಕ್‌ಸೆಲರ ಬೆಳಗಾವ.

ಪ್ರಕಟನೆ.

ಪ್ರೊಫೆಸರ ಗೋಖಲೆ ಕೃತ.

ಅಂಕಗಣಿತ ೨ನೆಯ ಭಾಗ.

ಬೆಲೆ. ೧ ರೂ. ೨ ಆಣೆ.

ಇದರಲ್ಲಿ ಕನ್ನಡ ೬ನೆಯ ೭ನೆಯ ಇಯತ್ತೆಗಳಲ್ಲಿಯೂ ಟ್ರೇನಿಂಗ ಕಾಲೇಜದಲ್ಲಿಯೂ ಕಲಿಸುವ ವಿಷಯಗಳ ಸಮಾವೇಶವಾಗಿರುತ್ತದೆ. ಇದು ಮುಲಕೀ ಪರೀಕ್ಷೆಯ ವಿದ್ಯಾರ್ಥಿಗಳಿಗೆ ವಿಶೇಷ ಉಪಯೋಗವುಳ್ಳದ್ದು.

ಈ ಪುಸ್ತಕಗಳು ಬೆಳಗಾವ ಧಾರವಾಡದ ಬುಕ್ಕಸೇಲರರ ಕಡೆಗೆ ಮಾರಲಿಕ್ಕೆ ಸಿಗುವವು.

ಕೃಷ್ಣಾಜಿ ಗೋವಿಂದ ಗೆಜ್ಜಿ ಬಿ. ಎ.
ಬಸವಣಗಲ್ಲಿ, ಬೆಳಗಾವ

ಶಾಲಾಪತ್ರಕ.

ಪದ್ಯಂ

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಕೋತ್ಕರ್ಷವಂ
ಬಯಸುತ್ತಂ ಪ್ರತಿಮಾಸದೊಳಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ ।
ಬಯಸುಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್ ॥

ಪುಸ್ತಕ ೪೨.] ಅಕ್ಟೋಬರ ೧೯೦೮. ಸಂಚಿಕೆ ೧೦

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು

ಈ ಸಾರೆಯ ಮುಲ್ಕಿ ಪರೀಕ್ಷೆಗೆ ಒಟ್ಟಿಗೆ ಮುನ್ನೂರರ ಮೇಲೆ ಹುಡುಗರು ಕೂತಿದ್ದರು. ಅವರಲ್ಲಿ ಗಣಿತದಲ್ಲಿ ಸುಮಾರು ನೂರಾಇಪ್ಪತ್ತು ಹುಡುಗರು ನಾಪಾಸಾದರೆಂದು ತಿಳಿಯುವದು. ಈ ಸಾರೆಯ ಗಣಿತಕಾಗದವೂ ಬೇರೆ ವಿಷಯದ ಪ್ರಶ್ನ ಕಾಗದಗಳೂ ವಿದ್ಯಾರ್ಥಿಗಳ ಯೋಗ್ಯತೆಗೆ ಸರಿಯಾಗಿದ್ದವೆಂದು ಎಲ್ಲರೂ ಹೇಳುತ್ತಿರುವರು.

ಕಾಲೇಜದ ವಾರ್ಷಿಕ ಪರೀಕ್ಷೆಗಾಗಿ ಬೆಳಗಾವ, ವಿಜಾಪೂರಗಳ ಡಿಪೂಟಿಯವರೂ ಅಸಿಸ್ಟಂಟ ಡಿಪೂಟಿಯವರೂ ಕಾನಡಾದ ಡಿಪೂಟಿಯವರೂ ಬಂದಿರುವರು.

ಮೊಹಬಾರ್ನ್ ಎಜ್ಯುಕೇಶನಲ್ ಇನಸ್ಪೇಕ್ಟರ ಸಾಹೇಬರೂ ಕಾಲೇಜದ ಪ್ರಿನ್ಸಿಪಾಲರೂ ಪ್ರಣೆಯ ಕಾನ್‌ಫರನ್ಸಿಗೆ ಹೋಗಿದ್ದರು. ಕಾಲೇಜುಗಳ ಅಭ್ಯಾಸಕ್ರಮದ ವಿಚಾರಣೆಯು ಸಭೆಯಲ್ಲಾಯಿತೆಂದು ತಿಳಿಯುವದು,

ಬೆಳಗಾವಿಯ ಹೈಸ್ಕೂಲ ಮಾಸ್ತರರು ಪುಣೆಗೆ ಹೋದ್ದ ರಿಂದ ಆ ಸ್ಥಳಕ್ಕೆ, ಧಾರವಾಡ ಹೈಸ್ಕೂಲ ಹೆಡ್‌ಮಾಸ್ತರರಾದ ರಾ. ಸಾ. ಕರಂದೀಕರರೂ ಇವರಸ್ಥಳಕ್ಕೆ, ರಾ. ಸಾ. ಜಠಾರಭಾಸ್ಕರರಾಯರೂ ನೇಮಿಸಲ್ಪಟ್ಟಂತೆ ಅವರವರು ಆಯಾ ಸ್ಥಳದ ಅಧಿಕಾರವನ್ನು ಕೈಕೊಂಡರು.

ಕಪ್ಪುರವು— ಪೇಟೆಯಲ್ಲಿ ಎರಡು ಜಾತಿಯ ಕಪ್ಪುರವು ಮಾರಲಿಕ್ಕೆ ಸಿಗುತ್ತದೆ. ಒಂದು ಉಂಡಿಕಪ್ಪುರವು, ಮತ್ತೊಂದು ಹಲಿಗೆಕಪ್ಪುರವು ಇವೆರಡು ಬೇರೆ ಬೇರೆ ಜಾತಿಯ ಗಿಡದಿಂದ ಉಂಟಾಗುತ್ತವೆ. ಬೋರ್ನಿಪೋ, ಸುಮಾತ್ರ, ಲಾಬುಆನ ನಡುಗಡ್ಡೆಗಳಲ್ಲಿ ಒಂದು ಜಾತಿಯ ಕಪ್ಪುರದ ಗಿಡಗಳುಂಟು. ಮತ್ತೊಂದು ಜಾತಿಯಕಪ್ಪುರದ ಗಿಡಗಳು ಚೀನ ಜಪಾನ ದೇಶಗಳಲ್ಲಿ ಬೆಳೆಯುತ್ತವೆ. ಫೋರ್ಮೋಸಾ ನಡುಗಡ್ಡೆಯಲ್ಲಂತೂ ಕಪ್ಪುರದ ಗಿಡಗಳ ದೊಡ್ಡ ದೊಡ್ಡ ತೋಟಗಳುಂಟು ಒಳಗಡೆಯಲ್ಲಿ ಬೇರೆ ಬೇರೆ ನಾಡವರು ತಮ್ಮ ತಮ್ಮ ದೇಶಗಳಲ್ಲಿ ಕಪ್ಪುರದ ಸಾಗುವಳಿಯನ್ನು ಮಾಡತೊಡಗಿದ್ದಾರೆ. ಆದರೆ ಅದರಿಂದ ವಿಶೇಷ ಲಾಭವಾಗುವಂತೆ ಕಾಣುವದಿಲ್ಲ. ಈ ಎರಡು ಕಪ್ಪುರಗಳಲ್ಲಿ ಒಂದಕ್ಕೆ ಚೀನದ ಕಪ್ಪುರವೆಂತಲೂ ಮತ್ತೊಂದಕ್ಕೆ ಬೋರ್ನಿಪೋದ ಕಪ್ಪುರವೆಂತಲೂ ಹೆಸರು. ಈಗ ಪೇಟೆಯಲ್ಲಿ ಸಾಧಾರಣವಾಗಿ ಚೀನದ ಕಪ್ಪುರವೇ ಮಾರಲ್ಪಡುವದು.

ಚೀನದ ಕಪ್ಪುರವು— ಈ ದೇಶದಲ್ಲಿರುವ ಕಪ್ಪುರದ ಗಿಡಗಳ, ಬೇರು, ಬೊಡ್ಡೆ, ಟೊಂಗಿ, ಎಲೆ ಮುಂತಾದವುಗಳಲ್ಲಿಯೂ ಕಪ್ಪುರವಿರುವದು. ಇದನ್ನು ತೆಗೆಯುವ ಕೃತಿಯು ಹ್ಯಾಗಂದರೆ— ಮೊದಲು ಕಪ್ಪುರದ ಗಿಡದ ಎಲೆ, ಕೊಂಬೆ, ಕಟ್ಟಿಗೆ, ಬೇರುಗಳನ್ನು ಸಣ್ಣಾಗಿ ಕಡಿದು ಒಂದು ದೊಡ್ಡ ಕೊಪ್ಪರಿಗೆಯಲ್ಲಿ ನೀರೊಡನೆ ಕುದಿಯಹಾಕುವರು; ಆ ಕೊಪ್ಪರಿಗೆಯ ಮೇಲೆ ಮತ್ತೊಂದು ಮಣ್ಣಿನ ಕೊ

ಪ್ಪರಿಮುಂಥ ಆಕಾರದ ಪಾತ್ರೆಯನ್ನು ಡಬ್ಬುಹಾಕುವರು. ಈ ಡಬ್ಬು ಹಾಕಿದ ಪಾತ್ರೆಯ ಒಳಪೈಯಲ್ಲಿ ಎಲೆ, ಸಣ್ಣ ಸಣ್ಣ ಎಲೆಗಳ ಗೊಂಚಲು ಹುಲ್ಲಿನಹೆಂಡೆಗಳನ್ನು ಜೋತು ಬಿಟ್ಟಿರುವರು. ಇವೆರಡೂ ಪಾತ್ರೆಗಳು ಕೂಡಿದ ಸಂದ ನ್ನು ಜಿಗಟುಮಣ್ಣಿನಿಂದ ಮೆತ್ತಿ ಉಗಿಯು ಕೂಡ ಹೊರಗೆ ಹೋಗದಂತ ಬಂದು ಮಾಡುವರು. ಬಳಿಕ ತಳದ ಉರಿ ಯು ಹೆಚ್ಚಾದಂತೆ ಒಳಗಿನ ಕಪ್ಪುರದ ಗಿಡದ ಅವಯವ ಗಳು ಕುದಿಯ ತೊಡಗಲು, ಅವುಗಳೊಳಗಿದ್ದ ಕಪ್ಪುರದ ಅಂಶವು ಉಗಿಯ ರೂಪದಿಂದ, ಮೇಲಿನ ಪಾತ್ರೆಯ ಪೊಳ್ಳಿ ನೊಳಗೆ ಬರುವದು. ಅಲ್ಲಿ ಎಲೆ ಮುಂತಾದ ತಂಪಾದ ವಸ್ತುಗಳಿರುವದರಿಂದ ಆ ಉಗಿಯು ಘನವಾಗಿ, ಅದರೊಳ ಗಿನ ನೀರಿನ ಅಂಶವು ಮರಳಿ ದ್ರವರೂಪದಿಂದ ಕೆಳಗಿನ ಪಾತ್ರೆಯಲ್ಲಿ ಬೀಳುವದು, ಕಪ್ಪುರದ ಅಂಶವು ಆ ಎಲೆ ಮುಂತಾದವುಗಳ ಸಂದುಗಳಲ್ಲಿ ಘನರೂಪದಿಂದ ಅಂಟಿಕೊಂ ಡು ನಿಲ್ಲುವದು. ಬಳಿಕ, ಮೇಲಿನ ಮಣ್ಣಿನಪಾತ್ರೆಯನ್ನು ಕಡೆಗೆ ತೆಗೆದು, ಆ ಹುಲ್ಲು ಎಲೆಗಳ ಸಂದುಗಳಲ್ಲಿ ಮೆತ್ತಿ ಕೊಂಡಿದ್ದ ಕಪ್ಪುರದ ಕಣಗಳನ್ನು ಕೆದರಿಕೊಳ್ಳುವರು. ಇದಕ್ಕೆ ಅಶುದ್ಧ ಕಪ್ಪುರವೆನ್ನುವರು. ಬಳಿಕ ಇದನ್ನು ಮೇಲೆ ವರ್ಣಿಸಿದಂತೆ ಎರಡು ಗಡಿಗೆಗಳನ್ನು ತಕ್ಕೊಂಡು ಒಂದರಲ್ಲಿ ಈ ಅಶುದ್ಧ ಕಪ್ಪುರವನ್ನು ಹಾಕಿ ಮೇಲೆ ಮ ತ್ತೊಂದನ್ನು ಡಬ್ಬುಹಾಕಿ ಒಲೆಯಮೇಲಿಡುವರು ಕೆಳ ಗಿನ ಪಾತ್ರೆಗೆ ಉಷ್ಣತೆಯನ್ನು ಕೊಡಲು ಅಶುದ್ಧ ಕಪ್ಪುರ ವು ಉಗಿಯಾಗಿ ಮೇಲಿನ ಪಾತ್ರೆಯ ತಳಕ್ಕೆ ಹೂ ಹೂವಾ ಗಿ ಮೆತ್ತಿಕೊಳ್ಳುವದು. ಇದೇ ಶುದ್ಧ ಕಪ್ಪುರವು. ಬಳಿ ಕ ಇದನ್ನು ಮಾರಾಟಕ್ಕೆ ಕಳಿಸುವರು.

ಬೋರ್ನಿಯೋದಲ್ಲಿ ಕಪ್ಪುರ ಮಾಡುವ ಬಗೆಯು ಹ್ಯಾ ಗಂದರೆ—ಈ ದೇಶದ ಕಪ್ಪುರದ ಗಿಡಗಳಲ್ಲಿ ಕಪ್ಪುರವು ಬಹ್ವಂಶದಿಂದ ಶುದ್ಧ ಸ್ಥಿತಿಯಲ್ಲಿಯೇ ದೊರಕುತ್ತದೆ. ಮೊ

ದೆಲು ಕಪ್ಪುರದ ಗಿಡಕ್ಕೆ ತೂತುಮಾಡಿ ಇದರೊಳಗೆ ಕಪ್ಪೂರವು ವಿಶೇಷವಾಗಿ ದೊರಕುತ್ತದೋ ಇಲ್ಲವೋ ಎಂಬುದನ್ನು ನೋಡುವರು. ಕಪ್ಪುರದ ಗಿಡದ ಹೊಟ್ಟೆಯಲ್ಲಿ, ಪೊಳ್ಳು ಪ್ರದೇಶದಲ್ಲಿ ಕಪ್ಪುರವು ಉಂಡಿಗಟ್ಟಿಕೊಂಡಿರುತ್ತದೆ. ಕಪ್ಪುರ ಶಿಗುವ ಸಂಭವವು ಹೆಚ್ಚೆಂಬುದನ್ನು ಮನಗಂಡ ಬಳಿಕ ಆ ಗಿಡವನ್ನು ಕಡಿಯುವರು. ಆ ಮೇಲೆ ಒಂದೊಂದು ಮೊಳ ಉದ್ದವಾಗುವಷ್ಟು ಅದರಲ್ಲಿ ತುಂಡುಗಳನ್ನು ಮಾಡುವರು. ಬಳಿಕ ಆ ತುಂಡುಗಳನ್ನು ಉದ್ದಕ್ಕೆ ಸೀಳಿ ಅದರ ಹೊಟ್ಟೆಯಲ್ಲಿದ್ದ ಕಪ್ಪುರವನ್ನು ತೆಗೆದುಕೊಳ್ಳುವರು. ಅಲ್ಲಿಂದ ಅದನ್ನು ತೊಳೆದು ಸ್ವಚ್ಛ ಮಾಡುವರು. ಆ ಕಟ್ಟಿಗೆಯ ಸೀಳುಗಳಲ್ಲಿ ಒಂದು ಬಗೆಯ ಎಣ್ಣೆ ಇರುವದು. ಅದನ್ನು ಬೋಳಿದುಕೊಂಡು ಅದನ್ನು ಅಟ್ಟಿಸಿ ಸ್ಫಟಿಕೀಭವನಕ್ರಿಯೆಯಿಂದ ಹಲಿಕೆಗಳನ್ನು ತಯಾರಿಸುವರು. ಆದರೆ ಇದೇನು ಅಷ್ಟು ಚಲೋ ಕಪ್ಪುರವೆಂದು ಹೇಳಲಾಗದು. ಒಂದು ಗಿಡದಿಂದ ಸುಮಾರು ಐದು ಐದೂವರೆ ಶೇರಿಗಿಂತ ಹೆಚ್ಚು ಕಪ್ಪುರವು ಉತ್ಪನ್ನವಾಗುತ್ತದೆ. ಇಪ್ಪತ್ತು ಮೂವತ್ತು ಮಂದಿಯು ಮೂರು ತಿಂಗಳುಗಳ ವರೆಗೆ ದುಡಿದರೆ ಅಜಮಾಸು ಹದಿನೈದು ಇಪ್ಪತ್ತು ಮಣ ಕಪ್ಪುರವು ಸಿದ್ಧವಾಗುತ್ತದೆ. ಈ ಪ್ರಾಂತದಲ್ಲಿ ಹುಟ್ಟುವ ಕಪ್ಪುರವು ಆ ದೇಶದ ಅರಸನ ಪ್ರೀತ ಸಂಸ್ಕಾರಕ್ಕೆ ವೆಚ್ಚವಾಗುವದರಿಂದ ಪರನಾಡುಗಳಿಗೆ ಹೋಗುವದು ಕಡಿಮೆ.

ಧರ್ಮ—ಶುದ್ಧಮಾಡಿದ ಕಪ್ಪುರವು ಬೆಳ್ಳಗೂ, ಘನವಾಗಿಯೂ ಅರ್ಧಪಾರದರ್ಶಕವಾಗಿ ಇಲ್ಲವೆ ಪ್ರಕಾಶಭೇದ್ಯವಾಗಿಯೂ ಇರುವದು. ಇದು ಸಹಜ್ಜಾಗಿ ಪುಡಿಯಾಗುವದಿಲ್ಲ. ಆದರೆ ಮದ್ಯಾರ್ಕದ ಅಥವಾ ಎಣ್ಣೆಯದೊಂದು ಹನಿಹಾಕಿದರೆ ಸುಲಕು ಕೈಲಿ ತಿಕ್ಕಿದರೂ ಪುಡಿಯಾಗುವದು. ಇದು ನೀರಮೇಲೆ ತೇಲುವದು. ಕಪ್ಪುರದ ವಾಸನೆಯು ಉಗ್ರವಾದಾಗ್ಯೂ ಸುಗಂಧವುಳ್ಳದ್ದಿರುವದು. ರುಚಿಯು

ತುಸು ಮಟ್ಟಿಗೆ ಕಹಿ ಇರುವದು. ಟರಪೆಂಟಾಯಿಲಿ ದಂಥ ಹಾರಿಹೋಗುವ ಎಣ್ಣೆಗಳಲ್ಲಿ ಬಹು ಬೇಗ ಕರಗುವ ದು. ಹೀಗೆ ವಿದ್ರುತವಾದ ಕಪ್ಪುರದ ದ್ರವವನ್ನು ನೀರೊಳಗೆ ಸುರವಲು ಮರಳಿ ಘನವಾಗಿ ನೀರಮೇಲೆ ಹಲಿಗೆಗಟ್ಟಿ ನಿಲ್ಲುವದು.

ಉಪಯೋಗ— ಕಪ್ಪುರದ ಉಗ್ರವಾಸನೆಯನ್ನು ಕ್ಷುದ್ರ ಕೀಟಕಗಳು ತಾಳಲಾರವು ಅದರಿಂದ ಅರಿವೆ, ಪುಸ್ತಕಾ ಮುಂತಾದ ಸಾಮಾನುಗಳ ಮಧ್ಯದಲ್ಲಿ ಕಪ್ಪುರದ ತುಂಡುಗಳನ್ನಿಟ್ಟರೆ, ಅವುಗಳಿಗೆ ಹುಳಹತ್ತುವದಿಲ್ಲ ಅದರಂತೆ ದನಗಳಿಗೆ ಹುಳಬಿದ್ದರೆ ಆ ಗಾಯವನ್ನು ತೊಳಿದು ಕಪ್ಪುರವನ್ನು ತುಂಬುವರು. ನಾವು ಕಪ್ಪುರವನ್ನು ತಿಂದರೆ ನಮಗೆ ಮೊದಲು ಒಂದು ಬಗೆಯ ಉತ್ತೇಜಕ ಅವಸ್ಥೆಯುಂಟಾಗುವದು. ಆದರೆ ಹಿಂದುಗಡೆ ಗ್ಲಾನಿಬರುವದು. ಮಹಾಮಾರಿ ಮುಂತಾದ ಸಾಂಸರ್ಗಿಕ ರೋಗವು ಹಬ್ಬಿದಾಗ ಇದನ್ನು ಜನರು ತನ್ನ ಹತ್ತರ ಇಟ್ಟುಕೊಳ್ಳುವ ಪರಿಪಾಠವುಂಟು. ಆದರೆ ಹೀಗೆ ಇಟ್ಟುಕೊಳ್ಳುವದರಿಂದ ಗುಣವಾಗುವದಕ್ಕಿಂತ ಅಪಾಯವಾಗುವ ಸಂಭವ ಹೆಚ್ಚುಂಟು. ಚಳಿಯಿಂದ ವ್ಯಾಕುಳಗಿದವನಿಗೂ ಬೆಂಕಿಯಿಂದ ಸುಟ್ಟ ಗಾಯದ ಮೇಲಿನ ತೊಗಲು ಕಿತ್ತಹೋಗದಿದ್ದ ಗಾಯಕ್ಕೂ ಕಪ್ಪುರವನ್ನು ಮದ್ಯಾರ್ಕದಲ್ಲಿ ಕರಿಗಿಸಿ ಹಚ್ಚಲು ಗುಣಬರುವದು.

PSYCHOLOGY

ಮಾನಸಶಾಸ್ತ್ರವು.

ಗುಣಕ್ಕೂ ಸ್ವಭಾವಗಳಿಗೂ ಭೇದ.

ಸ್ವಭಾವಗಳು ಮಾನಸಿಕ ಧರ್ಮಗಳಿಗೆ (ಭಾವನೆಗಳಿಗೆ) ಮಾತ್ರ ಸಂಬಂಧಿಸಿರುತ್ತವೆ ಗುಣಗಳು ಮನೋಧರ್ಮಗಳ ಹೊರತು ಅದರಿಂದಾಗುವ ಪರಿಣಾಮಕ್ಕೂ ಸಂಬಂಧಿಸಿರುತ್ತವೆ. ಅಂದರೆ ಗುಣಗಳಿಗೆ ಮೂಲದಿಂದ

ಬಂದದ್ದೂ, ಹಚ್ಚಿಕೊಂಡದ್ದೂ ಕೂಡೇ ಸಂಬಂಧಿಸಿರುತ್ತದೆ. ಗುಣಗಳ ವರ್ಗೀಕರಣ ಮಾಡಿದರೆ ೪ ಪ್ರಕಾರದ ಗುಣಗಳು ಕಂಡು ಬರುವವು. (೧) ಮಂಡ ಸ್ವಭಾವ (ಬೇಗನೆ ಮನಸಿನ ಮೇಲೆ ಪರಿಣಾಮವಾಗದಂಥ ಸ್ವಭಾವ) ೨ ಚಂಚಲ (ಉತಾವಳಿ) ಸ್ವಭಾವ (ಬೇಗನೆ ಮನಸಿನ ಮೇಲೆ ಪರಿಣಾಮವಾಗುವಂಥ ಸ್ವಭಾವ) (೩) ಚಪಲ ಸ್ವಭಾವ (೪) ಮಂದ ಈ ಪ್ರಕಾರ ನಾಲ್ಕು ಗುಣದವರಿರುತ್ತಾರೆ.

೧ನೇಯವನ ಲಕ್ಷಣ—ಇವನಲ್ಲಿ ದಯಾ ಲಗೂ ಹುಟ್ಟುವದಿಲ್ಲ. ಎರಡನೆಯವರ ಸುಖ ದುಃಖಗಳಬಗ್ಗ ಇವನ ಮನಸಿನ ಮೇಲೆ ತೀವ್ರ ಪರಿಣಾಮವಾಗುವದಿಲ್ಲ. ಭೂತದಯವಿರುವದಿಲ್ಲ. ಈ ಗುಣವು ವಿಶೇಷ ಸಾಮರ್ಥ್ಯ ಇರುವರಲ್ಲಿ ಸಹ ಇರುವದು ಕಂಡು ಬರುವದು

೨ನೇಯವನ ಲಕ್ಷಣ—ಇವನ ಮನಸ್ಸಿನಲ್ಲಿ ಪರಿಣಾಮದ ಸ್ಥಿತಿಯು ಬಾರದೆ ಬೇಗನೇ ಕೆಲಸ ಮಾಡಿ ಬಿಡುವನು. ಪರಿಣಾಮದ ವಿಚಾರವನ್ನೇ ಮಾಡುವದಿಲ್ಲ.

೩ನೇಯವನ ಲಕ್ಷಣ—ಇವನಲ್ಲಿ ಹುಟ್ಟಗುಣಗಳು ಪೂರ್ಣತ್ವ ಹೊಂದಿರುತ್ತವೆ. ಸೂಕ್ಷ್ಮ ದೃಷ್ಟಿ ಇರುವದಿಲ್ಲ. ಬೇಗ ಕೆಲಸ ತೀರಿಸಿ ಬಿಡುತ್ತಾರೆ.

೪ನೇಯವನ ಲಕ್ಷಣ—ಇವನಲ್ಲಿ ನೀತಿಯ ಭಾವನೆಗಳು ಕಡಿಮೆ ಇರುತ್ತವೆ.

ಇವಲ್ಲದೆ ಗುಣಗಳಲ್ಲಿ ಅನೇಕ ಅವಾಂತರ ಭೇದಗಳುಂಟು ಇದರಲ್ಲಿ ಕರ್ತವ್ಯಕರ್ಮ, ಸದ್ಗುಣ ಇವುಗಳ ವಿಷಯ್ಯವಾಗಿ ಮುಂದೆ ಬರೆಯುವೆವು.

ಕರ್ತವ್ಯಕರ್ಮ—ಇದನ್ನು ಸದ್ಗುಣದಲ್ಲಿ ಹಾಕಬಹುದು. ಆದರೂ ಇದು ಸ್ವತಃ ಸದ್ಗುಣವಲ್ಲ. ಇಂಗ್ಲಂಡದಲ್ಲಿ ಭಿಕ್ಷದ ಸಲುವಾಗಿ ಎಲ್ಲರ ಮೇಲೆ ಕರವಿರುತ್ತದೆ. ಇದು ಕರ್ತವ್ಯ ಕರ್ಮವೇ ಸರಿ. ಈ ಕರದ ಹೊರ್ತಾಗಿ ಬೇರೆ

ದಾನ ಕೊಡುವದು ಸದ್ಗುಣದಲ್ಲಿ ಬರುವದು. ಆದ ಕಾರಣ ಮಾಡಲ್ಪಡುವ ಎಲ್ಲ ಚಲೋ ಕೆಲಸಗಳು ಕರ್ತವ್ಯದಲ್ಲಿ ಬರುವದಿಲ್ಲ. ಇವುಗಳಲ್ಲಿ ನೀತಿಯ ಭಾವನೆಯು ಇದ್ದರೆ ಮಾತ್ರ ಕರ್ತವ್ಯವೆನಿಸುವವು. ಆದರೂ ಕರ್ತವ್ಯಕ್ಕೂ ಸದ್ಗುಣಕ್ಕೂ ಬಹಳ ನಿಕಟ ಸಂಬಂಧವಿರುವದರಿಂದ ಇವುಗಳ ಭೇದ ತಿಳುಕೊಳ್ಳುವದು ಕಠಿಣ ಕೆಲಸವು. ಯೋಗ್ಯವಾದ ಹೇತುಗಳಿಂದ ಮಾಡಿದಂಥ ಸಾರ್ವಜನಿಕ ಉಪಕಾರವು ಕರ್ತವ್ಯವಲ್ಲದಿದ್ದರೂ ಸದ್ಗುಣವೆನಿಸುವದು. ಕರ್ತವ್ಯದಲ್ಲಿ ಸ್ವಲ್ಪ ಅಧಿಕಾರವೂ ಉಂಟು. ಎರಡನೆಯವರಿಗೆ ಅಧೀನವಾಗಿರುವದೂ ಉಂಟು. ಇದು ಸ್ಪಷ್ಟವು ಮತ್ತು ಮರ್ಯಾದೆಯುಳ್ಳದ್ದು ಇರುತ್ತದೆ. ಮತ್ತು ಕಡಿಮೆ ಮಾತ್ರ ಮಾಡಲಿಕ್ಕೆ ಬರುವದು. ಸದ್ಗುಣಕ್ಕೆ ಮೇರೆ ಇಲ್ಲ, ಬೇಕಾದಷ್ಟು ಹೆಚ್ಚು ಮಾಡಲಿಕ್ಕೆ ಬರುವದು. ಕರ್ತವ್ಯವನ್ನು ಮಾಡೇ ತೀರಲಿಕ್ಕೆ ಬೇಕು. ಸದ್ಗುಣವು ಇಚ್ಛಾವಲಂಬಿಯಾಗಿದೆ ಆದ್ದರಿಂದ ಸದ್ಗುಣವು ಕರ್ತವ್ಯಕ್ಕಿಂತ ಹೆಚ್ಚು ವ್ಯಾಪಕವುಳ್ಳದ್ದು ಅದೆ. ಇದರಲ್ಲಿ ಯಾವಾಗಲೂ ಕರ್ತವ್ಯವಿರುವದೆಂಬ ನಿಯಮವಿಲ್ಲ

ಕರ್ತವ್ಯಕರ್ಮಗಳ ವರ್ಗೀಕರಣ.

ಈ ವರ್ಗೀಕರಣವನ್ನು ಬೇರೆ ಬೇರೆ ಜನರು ಬೇರೆ ಬೇರೆ ಪ್ರಕಾರದಿಂದ ಮಾಡುತ್ತಾರೆ ಆದರೆ ಅದರಲ್ಲಿ ಒಂದು ವರ್ಗವು ಮತ್ತೊಂದರಲ್ಲಿ ಮಿಶ್ರವಾಗುವದು ಪ್ಲೇಟೋ ಎಂಬವನು ಮಾನಸ ಶಾಸ್ತ್ರವನ್ನು ಅನುಸರಿಸಿ ಸದ್ಗುಣಗಳ ವರ್ಗೀಕರಣ ಮಾಡಿದ್ದಾನೆ ಅವು ಯಾವವೆಂದರೆ—೧ ವಿವೇಕ (ಮುಂದೃಷ್ಟಿ) ೨ ಮಾನಸಿಕ ಧೈರ್ಯ, ೩ ಮಿತವ್ಯಯ ೪ ನ್ಯಾಯ

ಕ್ಯಾಂತನೆಂಬವನು ೧ ಪೂರ್ಣ ಕರ್ತವ್ಯ ೨ ಅಪೂರ್ಣ ಕರ್ತವ್ಯವೆಂದು ಎರಡು ಭಾಗಗಳನ್ನು ಮಾಡಿದ್ದಾನೆ ಯಹೂದಿಯರು ಬಾಯಬಲ್ಲಿನ ೧೦ ಆಜ್ಞೆಗಳಂತೆ ಭಾಗಗಳ

ನ್ನು ಮಾಡಿದ್ದಾರೆ ಅವು ಯಾವವೆಂದರೆ—

೧ ಮನುಷ್ಯರ ಸಂಬಂಧವಾಗಿ ಮಾಡತಕ್ಕ ಕರ್ತವ್ಯಗಳು.

೨ ದೇವರ ಸಂಬಂಧವಾಗಿ ಮಾಡತಕ್ಕ ಕರ್ತವ್ಯಗಳು.

ಕ್ರಿಶ್ಚನ್ನ ನೀತಿ ಶಾಸ್ತ್ರಜ್ಞರು (೧) ದೇವರ ವಿಷಯವಾಗಿ ಮಾಡತಕ್ಕ ಕರ್ತವ್ಯ (೨) ಮನುಷ್ಯರ ಬಗ್ಗೆ ಮಾಡತಕ್ಕ ಕರ್ತವ್ಯ (೩) ಸ್ವಂತದ ಸಲುವಾಗಿ ಮಾಡತಕ್ಕ ಕರ್ತವ್ಯ (೪) ತನಗಿಂತ ಕಡಿಮೆಯದಾಗಿರುವ ಜೀವಜಂತುಗಳ ಬಗ್ಗೆ ಮಾಡತಕ್ಕ ಕರ್ತವ್ಯ ಎಂದು ನಾಲ್ಕು ಭಾಗಗಳನ್ನು ಮಾಡುತ್ತಾರೆ.

೧ ದೇವರ ಬಗ್ಗೆ ಮಾಡತಕ್ಕ ಕರ್ತವ್ಯ—ಸನ್ಮಾನ, ಪ್ರೀತಿ, ಪೂಜಾ

೨ ಮನುಷ್ಯರ ಬಗ್ಗೆ-ನ್ಯಾಯ, ಸತ್ಯತೆ, ನೆರೆಹೊರೆಯವರ ಬಗ್ಗೆ ಪ್ರೀತಿ (ಪರೋಪಕಾರ)

೩ ಸ್ವಂತದ ಬಗ್ಗೆ—ಆತ್ಮ ಸಂರಕ್ಷಣೆ, ಮುಂದೃಷ್ಟಿ (ವಿವೇಕ) ಮಿತವ್ಯಯ, ಶುದ್ಧತ, ಮನಸಿನ ಧೈರ್ಯ.

ಪ್ರಾಣಿಗಳ ಬಗ್ಗೆ—ದಯಾ.

THE HISTORY OF RAJASTHAN.

ರಾಜಸ್ಥಾನದ ಇತಿಹಾಸವು

ಲಖಮಸಿಯು ಮರಣದನಂತರ ಅಜಯಸಿಂಹನೇ ಚಿತ್ತೋಡದ ಗಾದಿಯು ಪಡೆಯುನು. ಇವನು ಕೇಳವಾಡದಲ್ಲಿ ಸುರಕ್ಷಿತವಾಗಿದ್ದನು. ಕೇಳವಾಡ ಕೋಟೆಯು ಅರವಲೀ ಗುಡ್ಡದ ಕಂದರದೊಳಗಿತ್ತು. ಅಜಯಸಿಂಗನು ಚಿತ್ತೋಡದ ರಾಜವಂಶದ ರಕ್ಷಣಕ್ಕಾಗಿ ಕೇಳವಾಡಕ್ಕೆ ಹೊರಟಾಗ ಲಖಮಸಿಯು—ಮಗನೇ, ನೀನು ವೃದ್ಧನಾಗಿ ಕಾರ್ಯಭಾರವನ್ನು ನಡಿಸಲುಸಮರ್ಥನಾಗಲು, ನಿನ್ನ ಅಣ್ಣನಾದ ಊರಸಿಂಗನು ಸಿಂಹಾಸನದ ರಕ್ಷಣಾರ್ಥವಾಗಿ ಮೊದಲು ರಣಬ

ಲಿಯೂದನಾದ್ದರಿಂದ ಅವನ ಮಗನಿಗೆ ಚಿತೋಡದ ಪಟ್ಟಕ್ಕೆ ಕೂಡ್ರಿಸು ಎಂದು ಹೇಳಿದ್ದನು. ಈ ಊರಸಿಂಗನ ಮಗನ ಹೆಸರು ಹಮೀರನು. ಹಮೀರನ ಪೂರ್ವ ವೃತ್ತಾಂತವು ಬಹು ಸೋಜಿಗವಾಗಿದೆ. ಊರಸಿಂಗನು ಒಂದಾನೊಂದು ದಿವಸ ಬೇಟೆಗೆ ಹೋಗಿರಲು, ಒಂದು ಕಾಡಹಂದಿಯು ಇವನ ದೃಷ್ಟಿಗೆ ಬಿತ್ತು. ಆಗ ಈ ರಾಜಕುಮಾರನು ಆ ಬೇಟೆಯನ್ನು ಬೆಂಬಳಿಸಲು, ಅದು ಅಂಜಿ ಒಂದು ಜೋಳದ ನಿಲುವನ್ನು ಹೊಕ್ಕು ಅಡಿಗಿಕೊಂಡಿತು. ಆ ಹೊಲದಲ್ಲಿ ಬೇಟೆಗಾರರು ಕುದುರೆಯನ್ನೇರಿ ಹೊಕ್ಕರೆ ಬೆಳೆಯು ನಾಶವಾಗುವದು. ಹಾಗೇ ಪಾದಚಾರಿಯಾಗಿ ಹೋಗಲಿಕ್ಕೆ ಯಾರಿಗೂ ಎದೆಯಾಗಲೊಲ್ಲದು. ಈ ವಿವಂಚನೆಯಲ್ಲಿ ಈ ಶಬರ ಸಮುದಾಯವು ಮಗ್ನವಾಗಿರಲು, ಆ ಹೊಲ ಕಾಯುತ್ತಿದ್ದ ಹುಡಿಗಿಯು ಇದನ್ನೆಲ್ಲಾ ನೋಡಿ, ಕೂಡಲೆ ಒಂದು ದಂಟನ್ನು ಕಿತ್ತು ಕೈಯೊಳಗಿನ ಕುಡುಗೋಲಿನಿಂದ ಅದನ್ನು ಬಾಲೆಯಂತೆ ಮೊನೆ ಮಾಡಿಕೊಂಡು ನಿಲವಿನಲ್ಲಿ ಹೊಕ್ಕು ಆ ಹಂದಿಯನ್ನು ಗೊತ್ತು ಹಚ್ಚಿ ಅದನ್ನು ದಂಟಿನಿಂದ ಚುಚ್ಚುತ್ತ ಅಟ್ಟಿಕೊಂಡು ಹೊಲದ ಹೊರಗೆ ಬಂದಳು. ಅದನ್ನು ಕಂಡು ಊರಸಿಂಗನೇ ಮೊದಲಾದ ರಾಜಪುತ್ರ ವೀರರಿಗೆ ಆಶ್ಚರ್ಯವಾಯಿತು. ಅಷ್ಟರಲ್ಲಿ ಮಧ್ಯಾಹ್ನವಾಗಲು, ಈ ಜನರು ಅದೇ ಹೊಲದ ನೆರೆಯಲ್ಲಿ ತಮ್ಮ ಅಡಿಗೆಯನ್ನು ಮಾಡಿಕೊಳ್ಳುವ ಉದ್ಯೋಗ ನಡಿಸಿದರು. ಊರಸಿಂಗನು ತನ್ನ ಪರಿವಾರದೊಂದಿಗೆ ಆ ಹುಡುಗಿಯ ಧೈರ್ಯವನ್ನೇ ಬಣ್ಣಿಸುತ್ತ ಕೂತಿದ್ದನು. ಅಷ್ಟರಲ್ಲಿ ಒಂದು ಕವಣಿಗಲ್ಲು ಬಂದು ರಾಜಪುತ್ರನ ಕುದುರೆಯ ಕಾಲಿಗೆ ತಾಕಿ ಅದರ ಕಾಲು ಮುರಿಯಿತು. ಮಾತಾಡುತ್ತ ಕುಳಿತಿದ್ದ ಊರಸಿಂಗನೇ ಮೊದಲಾದವರು ಆ ಕಲ್ಲು ಎತ್ತ ಕಡೆಯಿಂದ ಬಂತೆಂದು ಎದ್ದು ನೋಡುತ್ತಿರಲು, ಅದೇ ಹುಡುಗಿಯು ಹಕ್ಕಿಯನ್ನು ಕಾಯುವದಕ್ಕಾಗಿ ಕವಣೆಯನ್ನು ತಿರುವುತ್ತ ತನ್ನ

ಹೊಲದಲ್ಲಿ ಮಂಚಿಗೆಯ ಮೇಲೆ ನಿಂತದ್ದನ್ನು ಕಂಡರು. ಇದೇ ಹುಡುಗಿಯು ಕವಣೆಗಲ್ಲಿನಿಂದಲೇ ತಮ್ಮ ಕುದುರೆಯ ಕಾಲು ಅದುವಾಯಿತೆಂದು ನಿಶ್ಚಯಿಸಿದರು. ಬಳಿಕ ಅವರೆಲ್ಲರು ಉಗುಬಗೆಯಿಂದ ಊಟವನ್ನು ತೀರಿಸಿಕೊಂಡು ಊರ ಹಾದಿಯನ್ನು ಹಿಡಿಯಲು, ಇತ್ತ ಆ ಹುಡುಗಿಯೂ ಹೊತ್ತು ಮುಳುಗಿದ್ದರಿಂದ ತನ್ನ ಎರಡೂ ಎಮ್ಮೆಗಳನ್ನು ಅಟ್ಟಿಕೊಂಡು ತಲೆಯ ಮೇಲೆ ಹಾಲಿನ ಕೊಡವನ್ನು ಹೊತ್ತುಕೊಂಡು ಹೊರಟಿದ್ದಳು ಆ ಹುಡುಗಿಯು ಎರಡು ಸಾರೆ ತೋರಿಸಿದ ಎದೆಗಾರಿಕೆಯಿಂದ ಲಜ್ಜಿತನಾದ ಊರಸಿಂಗನು ಆಕೆಯನ್ನು ಒಮ್ಮೆಯಾದರೂ ಭಯ ಪಡಿಸಿ, ಸುಮಾರ ಮಾಡಬೇಕೆಂಬ ಹೇತುವಿನಿಂದ ಜತೆಯ ರಾಹುತರಲ್ಲಿ ಒಬನನ್ನು ಕರೆದು ನೀನು ಒಳ್ಳೇ ಉತ್ತರದಿಂದ ಕುದುರೆಯನ್ನು ಓಡಿಸುತ್ತ ಆ ಹುಡುಗಿಯನ್ನು ಸರಿಸರಿಸಿ ಹೋಗು ಎಂದು ಹೇಳಿದನು. ಆದರಂತೆ ಆ ರಾಹುತನು ತನ್ನ ಕುದುರೆಯನ್ನು ಅತಿ ವೇಗದಿಂದ ಓಡಿಸುತ್ತ ಆ ಹುಡುಗಿಯ ಸರಿಸರಿಸಿ ಬರಲು, ಆಕೆಯು ಎದೆಗುಂದದೆ ಒದಿಗಾಗಿ ತನ್ನ ಎಮ್ಮೆಗಳನ್ನೇ ಆ ಕುದುರೆಯ ಮೇಲೆ ಬಿಟ್ಟಳು. ಅದರಿಂದ ಆಕುದುರೆಯು ಬೆದರಲು, ರಾಹುತನು ಮೇಲಿಂದ ಕಡಕೊಂಡು ಬಿದ್ದನು. ಈ ಚಮತ್ಕಾರವನ್ನು ಕಂಡ ಬಳಿಕಂತೂ ಊರಸಿಂಗನು ಆ ಹುಡುಗೆಯ ಧೈರ್ಯ, ಶೌರ್ಯಗಳಿಗೆ ಸಂತುಷ್ಟನಾಗಿ ಈ ಹುಡುಗೆಯನ್ನು ಮದುವೆಯಾಗಬೇಕೆಂದು ನಿಶ್ಚಯಿಸಿ, ಈಕೆಯಾರು? ಎಲ್ಲಿಯವಳು? ಯಾವಕುಲದವಳು? ಎಂಬದನ್ನು ವಿಚಾರಿಸ ತೊಡಗಿದನು. ಕಡೆಗೆ ಆಕಳು ರಜಪೂತ ಕುಲದೊಳಗಿನ ಚವ್ಹಾಣ ವಂಶದ ಶಾಖೆಯಾದ ಚಂದಾನಾ ಎಂಬ ವರ್ಗಕ್ಕೆ ಸೇರಿದವಳೆಂತಲೂ ಒಬ್ಬ ಬಡ ಒಕ್ಕಲಿಗನ ಮಗಳೆಂತಲೂ ಗೊತ್ತಾಯಿತು. ಮರುದಿವಸ ಊರಸಿಂಗನು ಅದೇ ಹೊಲಕ್ಕೆ ಬಂದು ಆ ಹುಡುಗಿಯ ತಂದೆಯನ್ನು ಕರಿಸಿ, ನಿನ್ನ ಮಗಳನ್ನು ನನಗೆ ಮದುವೆ ಮಾಡಿ ಕೊಡು ಎಂದು ಕೇಳಿದನು. ಆ ಹುಂಬ ಒಕ್ಕಲಿಗ

ನು ಎಂದೂ ದೊಡ್ಡ ಜನರನ್ನು ನೋಡದವನಾದ್ದರಿಂದ ರಾಜಪುತ್ರನನ್ನು ಕಂಡು ಏನೂ ಸನ್ಮಾನವನ್ನು ತೋರಿಸದೆ ಆ ಊರಸಿಂಗನ ಮಗ್ಗಲಿಗೆ ಅವನಿಗೆ ತೊಡಿಗ ತೊಡಿ ಹಚ್ಚಿ ಕಳಿತನು. ಇಷ್ಟೇ ಅಲ್ಲ, ಅರಸನು ತನ್ನಂಥ ಬಡ ಮನುಷ್ಯನ ಮಗಳ ಪಾಣಿಗ್ರಹಣಕ್ಕೆ ಅನುಮತಿ ಬೇಡುತ್ತಾನೆಂಬದರ ಗೌರವವನ್ನು ತಿಳಿಯದೆ ನಾನು ನನ್ನ ಮಗಳನ್ನು ನಿಮಗೆ ಕೊಡುವದಿಲ್ಲೆಂದು ಹೇಳಿ ಮನೆಗೆ ಹೋದನು. ಮನೆಯಲ್ಲಿ ಅವನ ಹೆಂಡತಿಯು ಹೋದ ಸಂಗತಿಯ ಬಗ್ಗೆ ಪ್ರಶ್ನವನ್ನು ಮಾಡಲು ಆ ಒಕ್ಕಲಿಗನು ಸಾದ್ಯಂತ ವರ್ತಮಾನವನ್ನು ಹೇಳಿದನು. ಅದನ್ನು ಕೇಳಿ ಆ ಜಾಣೆಯಾದ ಹೆಂಡತಿಯು ಓಹೋ-ನೀವು ಕೈಯಲ್ಲಿ ಸಿಕ್ಕ ಕಲ್ಪವೃಕ್ಷವನ್ನು ಕಳಕೊಂಡು ಬಂದಿರಿ. ನಮ್ಮಂಥ ಬಡವರಿಗೆ ದುರ್ಲಭವಾದ ಶರೀರ ಸಂಬಂಧವು ಅನಾಯಾಸವಾಗಿ ಘಟಿಸುತ್ತಿರಲು ನಿಮ್ಮ ಅಜ್ಞಾನವು ಅದಕ್ಕೆ ವಿಘ್ನವಾಯಿತು. ಇನ್ನೂ ಕಾರ್ಯಮಿಂಚಿ ಹೋಯಿತೆಂದು ಎಣಿಸಲಾರೆನು. ನೀವು ಇದೇ ಕೈಲೆ ಹಿಂತಿರುಗಿ ಹೋಗಿ ರಾಜಪುತ್ರನಿಗೆ ನಾನು ಶರೀರ ಸಂಬಂಧವನ್ನು ಕುರಿತು, ಮೊದಲು ನಕಾರಿಸಿದೆನು. ಆದರೆ ಈಗ ನನ್ನ ಸಂತೋಷದಿಂದ ನನ್ನ ಮಗಳನ್ನು ಮದುವೆ ಮಾಡಿ ಕೊಡಲಿಕ್ಕೆ ಒಡಂಬಡುತ್ತೇನೆ. ಎಂದು ಹೇಳಿರಿ ಎಂದು ಗಂಡನನ್ನು ಕಳಿಸಿದಳು. ಅದರಂತೆ ಅವನು ಬಂದು ಊರಸಿಂಗನಿಗೆ ಹೇಳಲು ಅವನು ಸಂತೋಷಬಟ್ಟನು. ಮುಂದೆ ತುಸು ದಿವಸಗಳಲ್ಲಿಯೇ ಆ ಊರಸಿಂಗನಿಗೂ ಒಕ್ಕಲಿಗನ ಮಗಳಿಗೂ ಲಗ್ನವಾಯಿತು. ಇವಳ ಹೊಟ್ಟೆಯಲ್ಲಿ ಹುಟ್ಟಿದವನೇ ಹಮೀರನು. ಇವನು ಚಿಕ್ಕಂದಿನಲ್ಲಿ ಅಜ್ಜಮ್ಮನ ಮನೆಯಲ್ಲಿ ಬೆಳೆದು ದೊಡ್ಡವನಾದನು. ಅಲ್ಲಾಉದ್ದೀನನ ದಾಳಿಯಿಂದ ಚಿತ್ತೋಡದ ವೈಭವವು ನಷ್ಟವಾದಾಗ ಹಮೀರನು ೧೨ ವರ್ಷದವನಿದ್ದನು.

ಅಲ್ಲಾಉದ್ದೀನನು ಚಿತ್ತೋಡವನ್ನು ಕೈವಶ ಮಾಡಿಕೊಂಡ ಬಳಿಕ, ಮೇವಾಡದೊಳಗೆ ಬಂದೋಬಸ್ತಿಗಾಗಿ ಅಲ್ಲ

ಲ್ಲಿ ದಂಡು ಇಟ್ಟನು. ಆವರಿಂದ ಅಜಯಸಿಂಗನಿಗೆ ತಲೆಯೆತ್ತಲಿಕ್ಕೆ ಮಾರ್ಗವಾಗಲಿಲ್ಲ. ಕೇಳವಾಡದ ಗುಡ್ಡಗಾಡು ಸೀಮೆಯೊಳಗೇ ಭಿಲ್ಲರ ಜೊತೆಯಲ್ಲಿದ್ದುಕೊಂಡು ತನ್ನ ಕೈಸಾಧಿಸುವ ಕಾಲವನ್ನು ನಿರೀಕ್ಷಿಸುತ್ತಿದ್ದನು. ಆ ಭಿಲ್ಲರಲ್ಲಿ ಮುಂಜಾ ಎಂಬವನೊಬ್ಬ ಗಟ್ಟಿಗನಿದ್ದನು. ಆವನಿಗೂ ಅಜಯಸಿಂಹನಿಗೂ ಏನೋ ಒಂದು ಕಾರಣದಿಂದ ಹಗೆತನವು ಗಂಟು ಬಿತ್ತು ಅದು ವಿಕೋಪಕ್ಕೆ ಹೋಗಿ ಅದರ ಪರಿ ಸಮಾಪ್ತಿಯು ದ್ವಂದ್ವ ಯುದ್ಧದವರೆಗೆ ಬಂದು ಮುಟ್ಟಿತು ಆ ದ್ವಂದ್ವದಲ್ಲಿ ಮುಂಜಾನು ಅಜಯಸಿಂಗನನ್ನು ಗಾಯ ಗೊಳಿಸಿದನು. ಅಜಯಸಿಂಗನ ಇಬ್ಬರು ಮಕ್ಕಳಾದ ಸಜ್ಜನಸಿಂಗನೂ ಅಜಿಮಸಿಂಗನೂ ಕ್ರಮವಾಗಿ ಹದಿನಾಲ್ಕು ಹದಿನಾರು ವರುಷರಿದ್ದವರು ತಮ್ಮ ತಂದೆಯ ಸೇಡು ತೀರಿಸಿಕೊಳ್ಳಲೋಸುಗ ಮುಂಜಾನೊಡನೆ ಹೋರಾಡುತ್ತಿದ್ದರು ಈ ಇಬ್ಬರು ರಾಜಕುಮಾರರು ತಮ್ಮ ಸಹಾಯಕ್ಕಾಗಿ ಹಮೀರನನ್ನೂ ಕರೆದರು. ಅದಕ್ಕೆ ಹಮೀರನು—ನಾನೊಬ್ಬನೇ ಚಿಗಪ್ಪನ ವೈರಿಯ ಮೇಲೆ ಸಾಗಿ ಹೋಗಿ ಅವನನ್ನು ಕೊಂದು ಪಿತೃಋಣದಿಂದ ಮುಕ್ತನಾಗುತ್ತೇನೆ. ಶತ್ರುವನ್ನು ಕೊಲ್ಲದೆ ನಾನು ನಿಮಗೆ ಮೋರೆಯನ್ನು ತೋರಿಸಲಿಕ್ಕಿಲ್ಲ. ನೀವೇನು ನನ್ನೊಡನೆ ಬರುವ ಅವಶ್ಯಕತೆ ಇಲ್ಲ, ಎಂದು ಅವರನ್ನು ಹಿಂದುಳಿಸಿ ತಾನೊಬ್ಬನೇ ವೈರಿಯ ಮೇಲೆ ಏರಿ ಹೋದನು. ದೈವವು ಅನುಕೂಲವಾದ್ದರಿಂದಲೋ, ಅವನ ತಾಯಿ ತಂದೆಗಳ ತೇಜೋ ಬಲದ ಸಾಮರ್ಥ್ಯದಿಂದಲೋ ಈ ಹನ್ನೆರಡು ವರ್ಷದ ಕುಮಾರನು ಮುಂಜಾನನ್ನು ದ್ವಂದ್ವ ಯುದ್ಧದಲ್ಲಿ ಕೊಂದು ಅವನ ರುಂಡವನ್ನು ತಕ್ಕೊಂಡು ಅಜಯಸಿಂಗನ ಬಳಿಗೆ ಬಂದು-ತಾತನೇ, ಇದು ನೋಡು ನಿನ್ನ ವೈರಿಯ ಶಿರವು ಎಂದು ಆ ತಲೆಯನ್ನು ಕಣ್ಣನ ಮುಂದಿಟ್ಟು ನಮಸ್ಕರಿಸಿದನು. ಆಗಲಾ ಅಜಯಸಿಂಗನು ಜಯಶಾಲಿಯಾಗಿ ಬಂ

ದ ಅಣ್ಣನ ಮಗನನ್ನು ಅಪ್ಪಿಕೊಂಡು, ಆನಂದ ಬಾಷ್ಪಗ ಳಿಂದ ತುಂಬಿದ ಕಣ್ಣುಳ್ಳವನಾಗಿ— ಬಾ, ವೀರಪುತ್ರನೇ, ಈ ನಿನ್ನ ಅತುಲ ಶೌರ್ಯವನ್ನು ಕಂಡು, ನಾನು ಧನ್ಯ ನಾದೆನು. ನನ್ನ ಹೊಟ್ಟೆಯ ಮಕ್ಕಳಿದ್ದರೂ ನಿನ್ನೀಕಡುಗ ಲಿತನಕ್ಕೆ ಸಂತುಷ್ಟನಾಗಿನನ್ನ ಹಿಂದೆ ನಿನಗೇ ಈ ಚಿತೋಡ ದ ಅರಸೊತ್ತಿಗೆಯನ್ನು ಕೊಟ್ಟುಬಿಟ್ಟಿದ್ದೇನೆ. ಅದರಿಂದ ನ ಷ್ಟವಾದ ನಮ್ಮ ಪ್ರಾಚೀನ ವೈಭವವು ಮರಳಿ ಪ್ರಾಪ್ತವಾಗು ವದೆಂದು ನನ್ನ ಮನವು ಹೇಳುತ್ತದೆ. ಎಂದು, ಮುಂಜಾನೆ ರುಂಡದ ರಕ್ತದಲ್ಲಿ ಬೊಟ್ಟು ಎದ್ದಿ ಮಗನ ಹಣೆಗೆ ತಿಲಕವ ನ್ನಿಟ್ಟನು ಇದನ್ನೆಲ್ಲ ನೋಡುತ್ತಿದ್ದ ಅಜಯಸಿಂಗನ ಇ ಬ್ಬರು ಮಕ್ಕಳು ತಂದೆಯ ತರುವಾಯ ತಮಗೆ ರಾಜ್ಯವಿ ಲ್ಲೆಂಬದನ್ನು ಮನಗಂಡು, ಕ್ಷಾತ್ರವಂಶೋದ್ಭವರಾದ್ದರಿಂ ದ ನಿರಾಶರಾಗದೆ, ತಮ್ಮ ಸ್ವಂತ ಪರಾಕ್ರಮದಿಂದ ಎಲ್ಲಾ ದರೂ ರಾಜ್ಯವನ್ನು ಸಂಪಾದಿಸಿಕೊಳ್ಳಬೇಕೆಂದು ನಿಶ್ಚಯಿಸಿ ದರು. ಆದರೆ ಮುಂದೆ ತುಸು ದಿವಸಗಳಲ್ಲಿಯೇ ಅಜೇಮ ಸಿಂಗನು ಮರಣ ಹೊಂದಿದನು. ಸಜ್ಜನಸಿಂಗನು ಮೊದ ಲು ಮಾಡಿಕೊಂಡ ನಿಶ್ಚಯದಂತೆ, ಕೇಳವಾಡವನ್ನು ಬಿಟ್ಟು ದಕ್ಷಿಣಕ್ಕೆ ತೆರಳಿದನು. ಇದೇ ಸಜ್ಜನಸಿಂಗನ ವಂಶದಲ್ಲಿ ಯೇ ಪ್ರಖ್ಯಾತ ಮಹಾರಾಷ್ಟ್ರ ರಾಜ್ಯ ಸ್ಥಾಪಕನಾದ ಶಿವಾ ಜಿಯು ಉದಯಿಸಿದನು. ಮೇವಾಡದ ರಾಜವಂಶಾವಳಿ ಯಲ್ಲಿ ಈ ಮಾತಿಗೆ ಸಬಲವಾದ ಪ್ರಮಾಣವುಂಟು.

ಶಹಾಬುದ್ದೀನ ಅಥವಾ ಮಹಮ್ಮದಘೋರಿಯು ಉತ್ತ ರ ಹಿಂದುಸ್ಥಾನವನ್ನೆಲ್ಲ ನುಗ್ಗಿ ದಿಲ್ಲಿ, ಕನೋಜ ಮೊದಲಾ ದ ಕ್ಷಾತ್ರ ಕುಲದ ಅರಸರನ್ನು ಗತಿಗೆಡಿಸಿದ ಬಳಿಕ ಮುಂ ದೆ ನೂರು ವರುಷಗಳವರೆಗೆ ಈ ರಜಪೂತ ಕುಲದವರು ನೆಲೆಗಾಣಲಿಲ್ಲ. ಇವರು ಅಲ್ಲಲ್ಲಿ ಗುಡ್ಡಗಾಡುಗಳಲ್ಲಿ ಅಜ್ಞಾ ತವಾಸದಲ್ಲಿದ್ದರು. ಕೆಲವರು ಚಿಕ್ಕಪುಟ್ಟ ಪ್ರಾಂತಗಳಲ್ಲಿ ಮುಸಲ್ಮಾನರ ಅಂಕಿತರಾಗಿ ಬದುಕಿಕೊಂಡಿದ್ದರು. ಆದ ರೂ ಇವರು ಮುಸಲ್ಮಾನರನ್ನು ಸರಿಗಟ್ಟಿ, ಅಥವಾ ಎದು

ರಿಸಿ ತಮ್ಮ ನೃಪತ್ವವನ್ನಾಗಲಿ ಸಾರ್ವಭೌಮತ್ವವನ್ನಾಗ
ಲಿ, ಮೆರಿಸಲಿಕ್ಕೆ ಸಮರ್ಥರಾಗಲಿಲ್ಲ. ಆದರೆ ಸನ್ ೧೩೦೧
ರಲ್ಲಿ ಹಮೀರನ ಹಣೆಗೆ ಅಜಯಸಿಂಗನು ಮುಂಜಾನ ರುಂ
ಡದ ರಕ್ತದ ತಿಲಕವನ್ನಿಟ್ಟಂದಿನಿಂದ ರಜಪೂತರಿಗೆ ಇಷ್ಟು
ದಿವಸ ಬೆಂಬತ್ತಿ ಕಾಡುತ್ತಿದ್ದ ಪಂಚಮೀ ಶನಿಯು ದೂರಾ
ದನೆಂದು ಹೇಳಲಿಕ್ಕೆ ಅಡ್ಡಿ ಇಲ್ಲ. ಹಮೀರನು ಒಳ್ಳೇ ಶೂ
ರನೂ, ಅಭಿಮಾನಿಯೂ ಆಗಿದ್ದನು. ಇವನು ಅರವ
ತ್ತುನಾಲ್ಕು ವರ್ಷ ರಾಜ್ಯವಾಳಿದನು. ದಕ್ಷಿಣದಲ್ಲಿ ಶಿವಾಜಿ
ಯು ಮಹಾರಾಷ್ಟ್ರ ರಾಜ್ಯವನ್ನು ಸ್ಥಾಪಿಸಲಿಕ್ಕೆ ಎಂಥ
ಎಂಥ ಸಾಹಸ ಕಾರ್ಯಗಳನ್ನು ನಡಿಸಿದನೋ ಯಾವ
ಯಾವ ಉಪಾಯಗಳನ್ನು ಕೈಕೊಂಡನೋ ಅಂಥ ಅಂಥ
ಕಾರ್ಯಗಳನ್ನೇ ಆ ಆ ಉಪಾಯಗಳನ್ನೇ ಹಮೀರನು
ಕೈಕೊಂಡನೆಂದು ವಾಚಕರು ತಿಳಕೊಳ್ಳಬೇಕು.

ಚಿತೋಡದಲ್ಲಿ ಅಲ್ಲಾಉದ್ದೀನನ ಹಸ್ತಕನಾದ ಮಾಲ
ದೇವನೆಂಬವನು ಸುಭೇದಾರನಾಗಿದ್ದನು. ಮೇಲೆ ಹೇಳಿ
ದಂತೆ ಹಮೀರನು ಮಹಾರಾಷ್ಟ್ರರ ಕಾಯಕವನ್ನು ಮೇ
ವಾಡದ ತುಂಬಾ ನಡಿಸತೊಡಗಿದನು. ಇವನು ಚಿಕ್ಕ ಚಿ
ಕ್ಕ ಟೋಳಿಗಳನ್ನು ದೇಶದ ತುಂಬಾ ಹರಿಬಿಟ್ಟನು. ಈ
ಟೋಳಿಗಳು ಹಳ್ಳಿಗಳನ್ನು ಸುಲಿಯುವದೂ, ಹಾದಿಬಟ್ಟೆ
ಯಲ್ಲಿ ಸಿಕ್ಕವರನ್ನು ಸುಲಿಯುವದೂ, ಶತ್ರುಗಳ ಸಣ್ಣ ಸ
ಣ್ಣ ಟೋಳಿಗಳನ್ನು ಮುಣಗಿಸುವದೂ, ದೊಡ್ಡ ದಂಡು
ಬಂದರೆ ಮಾಯವಾಗುವದೂ ಮುಂತಾದ ಕಾಯಕವನ್ನು
ನಿಃತಂಕವಾಗಿ ನಡಿಸಿದರು. ಹಮೀರನು ಸ್ವತಃ ಈ ಚಿ
ಕ್ಕ ದಾಳಿಗಳಲ್ಲಿ ಸೇರದೆ ಗುಡ್ಡಗಾಡಿನಲ್ಲಿ ಅತಿ ಭದ್ರವಾಗಿದ್ದ
ಕೇಳವಾಡದಲ್ಲಿ ತಾನು ನಿಂತು, ತನ್ನ ಶೌರ್ಯೌದಾರ್ಯಾದಿ
ಗುಣಗಳಿಂದ ಐದಾರು ಸಾವಿರ ಭಿಲ್ಲರನ್ನು ಕೂಡಿಸಿಕೊಂಡು
ಅವರಿಂದ ಮೇವಾಡದಲ್ಲಿ ಪುಂಡಾಟವನ್ನು ನಡಿಸಿದ್ದನು. ಅ
ದರಿಂದ ಕುಸು ದಿವಸಗಳಲ್ಲಿಯೇ ಮೇವಾಡ ಪ್ರಾಂತವೆಲ್ಲ

ಹಮೀರನ ಅಂಕೆಯೊಳಗೆ ಬಂತು. ಚಿತ್ತೋಡದ ಕೋಟೆ ಯು ಮಾತ್ರ ಇನ್ನೂ ಕೈಸೇರಿದ್ದಿಲ್ಲ. ಇತ್ತ ಮಾಲದೇವ ನು ಹಮೀರನನ್ನು ಹಣಿಯಲು ತಾನು ಶಕ್ತನಲ್ಲವೆಂದು ಬ ಗೆದು, ಯುಕ್ತಿಯಿಂದ ಅವನನ್ನು ತನ್ನ ಕಡೆಗೆ ಮಾಡಿಕೊ ಳ್ಳಬೇಕೆಂತಲೋ ಅಥವಾ ರಾಜಪುತ್ರರು ಸ್ವಾಭಾವಿಕವಾಗಿ ಮೆಚ್ಚುವ ಶೌರ್ಯ ಧೈರ್ಯಾದಿ ಸದ್ಗುಣಗಳು ಹಮೀರನ ಲ್ಲಿ ವಿಶೇಷವಾಗಿ ಉಂಟೆಂತಲೋ, ಅಥವಾ ನಾವು ಮುಂದೆ ವಿವರಿಸುವ ಸಂಗತಿಯಿಂದ ಹಮೀರನನ್ನು ಮೋಸಗೊಳಿಸಿ ಸುಮಾರ ಮಾಡಬೇಕೆಂತಲೋ ತನ್ನ ಮಗಳನ್ನು ಅವನಿಗೆ ಕೊಡಬೇಕೆಂದು ನಿಶ್ಚಯಿಸಿ ತನ್ನೀ ಬಯಕೆಯು ಹಮೀ ರನ ಕಿವಿಗೆ ಬೀಳುವಂತೆ ಮಾಡಿದನು. ಹಮೀರನು ಈ ಮಾತಿಗೆ ಕೂಡಲೆ, ಒಪ್ಪಿದನು. ಆವನ ಮಂತ್ರಿಗಳು ಈ ಕೆಲಸವು ಬೇಡೆಂದು ನೂರು ಸಾರಿ ಹೇಳಿದರೂ ಅವನು ಕೇಳ ಲಿಲ್ಲ. ಮಂತ್ರಿಗಳು ಹಮೀರನಿಗೆ—ಒಡೆಯಾ ಮಾಲದೇ ವನು ವಾಸ್ತವಿಕವಾಗಿ ನಮ್ಮ ಶತ್ರುವು. ಅವನ ಮೇಲೆ ಯೇ ಈಗ ನಾವು ದಾಳೀ ನಡಿಸಿರುತ್ತೇವೆ. ಅವನಾಳುವ ಗಾದಿಯುನ್ನೇ ನಾನು ಅಪೇಕ್ಷಿಸಿ ಕಾದುತ್ತಲಿದ್ದೇವೆ. ಇಂಥ ಪ್ರಸಂಗದಲ್ಲಿ ಆವನು ನಮ್ಮೊಡನೆ ಶರೀರ ಸಂಬಂಧವನ್ನು ಬಯಸುತ್ತಾನೆಂಬುದು ಅಸಂಭವವಾಗಿ ತೋರುತ್ತದೆ. ಇ ದರಲ್ಲೇನೋ ಮೋಸವಿರಬಹುದು. ಒಂದು ವೇಳೆ ಈ ಪ್ರ ಸಂಗದಲ್ಲಿ ತಮ್ಮ ಜೀವಕ್ಕೂ ಅಪಾಯ ತಟ್ಟಬಹುದು. ಅ ಥವಾ ತಾನು ಚಿತ್ತೋಡದ ಗಾದಿಯ ಮೇಲೆ ಕುಳಿತು ಮೇ ವಾಡದ ರಾಜ್ಯವನ್ನು ಪಾಲಿಸುತ್ತ, ಅದೇ ಮೇವಾಡದ ರಾಜವಂಶೀಯರಿಂದ ತಮಗೆ ಲಗ್ನ ಮಾಡಿಕೊಳ್ಳುವ ಸಾಮ ರ್ಥ್ಯವಿಲ್ಲದ್ದರಿಂದ ತಾನು ದೊಡ್ಡಿಸ್ತನಕ್ಕಾಗಿ ಈ ಕಾರ್ಯ ವನ್ನು ಮಾಡಿ ಲೋಕದಲ್ಲಿ ಅವನು ತನ್ನ ಗೌರವವನ್ನೂ ನಿಮ್ಮ ಲಘುತ್ವವನ್ನೂ ತೋರ್ಪಡಿಸಬೇಕೆಂದು ಬಗೆದಿರಬ ಹುದು. ಹ್ಯಾಗೇ ಇರಲಿ, ಈ ಸಂಬಂಧವು ಯೋಗ್ಯವಾದ ದ್ದಲ್ಲವೆಂದೂ, ಇದಕ್ಕೆ ತಾವು ಮನವೊಲಿಸಬಾರದೆಂದೂ,

ನನ್ನ ಅಭಿಪ್ರಾಯವುಂಟು. ಇದರ ಮೇಲೆ ಪ್ರಭುಚಿತ್ತ ಕ್ಕೆ ಬಂದಂತೆ ವರ್ತಿಸಲಿಕ್ಕೆ ನಾವಂತೂ ಸಿದ್ಧರಿದ್ದೇವೆ ಎಂ ದು ಖಂಡಿತವಾಗಿ ಹೇಳಿದರು. ಆದರೆ ಈ ಉಪದೇಶವು ಹವಿಾರನಲ್ಲಿ ನಾಟಲಿಲ್ಲ. ಅವನು ಈ ಶರೀರ ಸಂಬಂಧದಿಂ ದ ನೀವು ಹೇಳಿದ ಘಾತಪಾತಾದಿಗಳೊದಗುವವೆಂಬ ಮಾ ತಂತೂ ಸುಳ್ಳು, ಆದರೆ ಮಾಲದೇವನ ಮಗಳನ್ನು ಮದುವೆ ಯಾದರೆ ನಮ್ಮ ರಾಜಧಾನಿಯೂ ಮರಳಿ ನಮ್ಮ ಕೈಸೇರು ವದೆಂದು ನನ್ನ ಮನಸ್ಸು ಹೇಳುತ್ತದೆ. ಆದ್ದರಿಂದ ನಾನು ಮಾಲದೇವನ ಮಾತಿಗೆ ಒಪ್ಪಿಗೆಯನ್ನು ಕೊಡುತ್ತೇನೆಂದು ನುಡಿದನು.

CONSCIENCE.

ನಿರ್ಣಯಶಕ್ತಿಯು.

(ಬರೆದು ಬಂದದ್ದು)

೭. ನಿರ್ಣಯಶಕ್ತಿಯೇ ಮನುಷ್ಯತ್ವದ ಕುರುಹಾಗಿರು ತ್ತದೆ. ಇದಕ್ಕೇ ನ್ಯಾಯದೇವತೆಯೆಂದೂ, ಮನೋದೇ ವತೆಯೆಂದೂ, ನಿಸರ್ಗದೇವತೆಯೆಂದೂ ವಿವೇಕ ಶಕ್ತಿಯೆಂ ದೂ ಹೆಸರುಗಳುಂಟು. ಇಂಗ್ಲಿಷಭಾಷೆಯಲ್ಲಿ ಈ ನ್ಯಾ ಯ ದೇವತೆಗೆ (Canscience) ಎಂದೆನ್ನುವರು. ದೇವ ರು ಮನುಷ್ಯಪ್ರಾಣಿಯಲ್ಲಿ ಈ ನ್ಯಾಯಶಕ್ತಿಯೆಂಬ ಅನ ರ್ಘ್ಯವಾದ ಮಣಿಯನ್ನು ಇಟ್ಟಿದ್ದರಿಂದಲೇ ಇತರ ಪ್ರಾಣಿ ಗಳಿಗಿಂತ ಜೀವಿಕೋಟಿಯಲ್ಲಿ ಅತ್ಯುಚ್ಚಸ್ಥಾನವನ್ನು ಅಲಂ ಕರಿಸಿರುವದೆಂಬರ್ಥದ ಲೇಖವನ್ನು ಯುರೋಪಖಂಡದ ಕಾಲಿದಾಸನಾದ ಸೇಕ್ಸಪೀಯರನು ತನ್ನ ಒಂದು ನಾಟಕ ದಲ್ಲಿ ಬರೆದಿರುವನು. ಈ ನ್ಯಾಯ ಶಕ್ತಿಯು ರತ್ನಪ್ರಭೆಗೆ ದುಷ್ಟವಿಕಾರಗಳಾದ ಕಾಮಕ್ರೋಧಾದಿಗಳು ಹೇಳಹೆಸರಿ ಲ್ಲದಂತಾಗುವವು. ಪ್ರತಿಯೊಂದು ಸಂಗತಿಯಲ್ಲಿ ಮನು ಷ್ಯನು ಈ ನಿಸರ್ಗ ದೇವತೆಯನ್ನು ಕೇಳಿ ಅದರ ಆಜ್ಞಾಪ್ತಿ ಯಂತೆ ನಡದರೆ ಪಾಪವು ಘಟಿಸಲಾರದು. ಜನರಲ್ಲಿ ಅವ

ನ ಸಂಬಂಧವಾಗಿ ಪೂಜ್ಯಬುದ್ಧಿಯು ಉಂಟಾಗುವದು. ಯಾಕಂದರೆ, ನ್ಯಾಯಶಕ್ತಿಯು ಅಮಲು ಅವನ ಮೇಲೆ ತುಂಬಾ ಕುಳಿತಿರುವದರಿಂದ ಅವನಿಗೊಂದು ಬಗೆಯಿಂದ ಇವನಿಗೊಂದು ಬಗೆಯಿಂದ ನಿರ್ಣಯ ಹೇಳಲಾರನು. ಹೀಗೆಂತಲೇ "ಭೇದಾಭೇದಂಗಳರಿದರದೊಂದು ಸ್ನಾನ" ಎಂದು ಕವಿಯು ಬರದಿಹನು. ಈ ನ್ಯಾಯಶಕ್ತಿಗೆ ಅಧೀನವಾಗಿ ನಾವು ನಡೆಯದಿದ್ದರೆ ಪ್ರಪಂಚವೆಂಬ ಕಡಲಲ್ಲಿ ನಮ್ಮ ಜೀವಿತವೆಂಬ ಸಾಕೆಯು ನಡೆಯಲಾರದು ನಡುವೇ 'ಸಮುದ್ರಾಸ್ತ್ರುಷ್ಯಂತು' ಎಂಬ ಮಂತ್ರವನ್ನು ಜಪಿಸಬೇಕಾಗುವದು. ಮದ, ಮೋಹ, ಮತ್ಸರಾದಿ ದುರ್ವಿಕಾರಗಳ ಮೇಲೆ ನ್ಯಾಯಶಕ್ತಿಯು ವೇಷ್ಟನವಾದರೆ ಮಾತ್ರ ಅವು ತಲೆಯೆತ್ತದೆ ನಮ್ಮಾಧೀನವಾಗಿ ದುಷ್ಕೃತ್ಯಕ್ಕೆ ನಮ್ಮನ್ನು ಹೋಗಗೊಡಿಸುವದಿಲ್ಲ. ದುಷ್ಟವಿಕಾರಗಳೇ ನಮ್ಮ ಬಾಳ್ವೆಯನ್ನು ಮಣ್ಣುಪಾಲು ಮಾಡಲಿಕ್ಕೆ ಆಯೆಂದು ನುಂಗಲು ಕುಳಿತಿರುವವು. ಕಾರಣ, ಮನೋದೇವತೆಯ ಅಪ್ಪಣೆಯಂತೆ ನಡೆದುಕೊಳ್ಳುವದು ವಿಹಿತವು.

೮. ಮನೋದೇವತೆಯ ಅಪ್ಪಣೆಯಂತೆ ನಡೆದುಕೊಳ್ಳುವದೆಂದರೇನು? ಈ ಸಂಬಂಧವಾಗಿ ನಿರ್ಣಯಗೆಯ್ಯುವದು ತೀರ ಕಷ್ಟಸಾಧ್ಯವದೆ. ಯಾಕಂದರೆ ಹಲವರ ಮತವು ಹಲವು ಬಗೆಯಾಗಿ ಉಂಟು- ಕೆಲವರು ತಾವು ಬೇಕಾದ ಕೆಟ್ಟ ಮಾರ್ಗವನ್ನು ಅನುಸರಿಸಿರಲಿ! ಸರ್ವಸಮ್ಮತವಾಗದಂಥ ಕೆಲಸವನ್ನು ತಾವು ಕೈಕೊಂಡಿರಲಿ! ತಾವು ಮಾಡಿದ್ದೇ ಪ್ರಾಧಾನ್ಯವೆಂತಲೂ, ತಮ್ಮ ಮನೋದೇವತೆಯಾದ ನ್ಯಾಯಶಕ್ತಿಯು ಹೀಗೆಯೇ ಹೇಳುವದೆಂತಲೂ ಪ್ರತಿಪಾದಿಸುತ್ತಾರೆ. ಅಂಗ್ಲಭಾಷೆಯ ಅಲ್ಪಾಂಶವನ್ನು ಮಾತ್ರ ಅರಿತ ಅರ್ಧಮರ್ಧ ಪಂಡಿತರು ಅನ್ನುವದೇನಂದರೆ,—"ಹಿರಿಯರು ಏನೊಂದು ವಿಚಾರಮಾಡದೆ ಇಲ್ಲದ ರೂಢಿಯನ್ನು ತಮ್ಮೊಳಗೆ ತಂದಿದ್ದಾರೆ. 'ಗತಾನುಗತಿ ಕೋಲೋಕ" "ಮೂಕಕುರಿಯಂತೆ ಹಿಂಬಾಲಿಸುತ್ತ ಬಂದಿದ್ದಾರೆ." ಬು

ದ್ಧಿವಂತರಾದ ನಾವೆಲ್ಲರೂ ಸಾವಕಾಶವಾಗಿ ಇವುಗಳನ್ನು ತೆಗೆದುಹಾಕಿ, ಸುಧಾರಣೆಯನ್ನು ಅಮಲಿನಲ್ಲಿ ತರತಕ್ಕದ್ದು" ಇತ್ಯಾದಿ—ಮುಕ್ತಾಫಲಗಳನ್ನು ತಮ್ಮ ಮುಖಶಕ್ತಿಯಿಂದ ಹೊರಗೆಡಹಿ ಹೊಸರೂಢಿಯನ್ನು ಪ್ರಚಾರದಲ್ಲಿ ತರಲು ಇಚ್ಛಿಸುತ್ತಾರೆ ನಮ್ಮ ಪ್ರಾಚೀನ ಸ್ಥಿತಿಗತಿ, ತತ್ಕಾಲೀನ ಪರಿಸ್ಥಿತಿ, ಆರೋಗ್ಯಾದಿ ವಿಚಾರಗಳನ್ನು ಮನಸ್ಸಿನಲ್ಲಿ ತಂದು ಸಾವಿರಾರು ವರ್ಷದ ಅನುಭವದಿಂದ ಯಾವ ಹಿರಿಯರು ನಿಶ್ಚಿತಮಾಡಿ ಆಯಾ ನಡುವಳಿಕೆಗಳನ್ನು ಪ್ರಚಾರದಲ್ಲಿ ತಂದಿದ್ದರೋ ಅವನ್ನು ಮೂಲೆಗೊತ್ತಿ ತಮ್ಮ ಹಸಿಬಿಸಿ ಪಾಂಡಿತ್ಯದ ಜೋರಿನಿಂದ ತಮ್ಮ ಸುಧಾರಣಾ ಪದ್ಧತಿಗಳೇ ಮಾನ್ಯವೆಂತಲೂ, ಅವನ್ನೇ ಎಲ್ಲರೂ ಅನುಸರಿಸಿದರೆ ಮಾತ್ರ ಭರತಭೂಮಿಯು ಬೆಳಗೆಯಾಗುವದೆಂತಲೂ ಅಪಲಾಪವನ್ನು ಮಾಡುತ್ತಿರುವರು. ಎಲ್ಲರೂ ಹೀಗೆಯೇ ಎಂದು ನನ್ನ ಅಭಿಪ್ರಾಯವಿಲ್ಲ! ಭಿನ್ನ ಭಿನ್ನ ವಿಚಾರದ ವ್ಯಕ್ತಿಗಳು ತಮ್ಮ ಮನೋದೇವತೆಯು ಹೀಗೇ ಹೇಳುತ್ತಾಳೆ. ಎಂದು ವಿತರ್ಕಿಸುವದುಂಟು. ಆದರೆ ಒಂದೇ ಪ್ರಕರಣದಲ್ಲಿ ಹೀಗೆ ನ್ಯಾಯದೇವತೆಯು ಒಬ್ಬರಲ್ಲಿ ಒಂದು ಬಗೆಯಿಂದಲೂ ಇನ್ನೊಬ್ಬರಲ್ಲಿ ಇನ್ನೊಂದು ಬಗೆಯಿಂದಲೂ ತೀರ್ಪುಕೊಡುವಳೇ! ಹಾಗೆ ಇದ್ದರೆ ದೇವರ ಲೀಲೆಯು ಅಗಾಧವೆನಿಸುವದೆ!! ಹಳಬರ ಎಲ್ಲ ರೂಢಿಗಳು ಗರ್ಹ್ಯವೆಂತಲೂ, ಆಧುನಿಕರ ಎಲ್ಲ ವಿಚಾರಗಳು ಅರ್ಹವೆಂತಲೂ ತಿಳಿಯುವ ಅಪರಿಪಕ್ವ ವಿಚಾರದ ದುರ್ದೈವಶಾಲಿಗಳು ನಮ್ಮಲ್ಲಿ ಕಡಿಮೆಯುಂಟೇ? ಬಹು ಜನರುಂಟು. ಹೀಗೆ ಆಗಲಿಕ್ಕೆ ಅವರ ಮೇಲೆ ಅಧಿಕಾರ ನಡಿಸುತ್ತಿರುವ ವಿಕಾರಗಳೇ ಕಾರಣವಾಗಿವೆ. ತೇಜೋಮಯವಾದ ಬುದ್ಧಿಯಮೇಲೆ ದುರ್ವಿಕಾರ ರೂಪಗಳಾದ ಅಂಧಕಾರಗಳು ಆಚ್ಛಾದಿಸಲು ಮನಸ್ಸಿಗೆ ಏನೂ ಕಾಣದಂತಾಗಿ ಸೂರ್ಯನಿಲ್ಲದಾಗ ಕತ್ತಲೆಯಲ್ಲಿ ಸಂಚರಿಸುವ ಪ್ರಾಣಿಗಳಂತೆ ಮನಸ್ಸಿನ ಸ್ಥಿತಿಯು ಅಂಧವಾಗುವದು. ತೇಜಸ್ವಿ

ಯಾವ ಬುದ್ಧಿ ಇದ್ದರೂ ವಿಕಾರ ಪ್ರಾಬಲ್ಯದಿಂದ ಅಜ್ಞಾನ ಮುಸುಕಿ ಸತ್ಯಾಸತ್ಯಗಳ ಇಲ್ಲವೆ ನ್ಯಾಯಾನ್ಯಾಯಗಳ ಕುರುಹು ತಿಳಿಯದಂತಾಗುತ್ತದೆ. ಸಾರಾಂಶ ನಿರ್ಣಯ ಶಕ್ತಿಯಂತೆ ನಡೆಯೋಣವೆಂದರೆ, ವಿಕಾರಗಳನ್ನು ಮೂಲೆಗೊತ್ತಿ ವಿಚಾರ ಪೂರ್ವಕವಾಗಿ ನಡೆಯೋಣವೇ. ವಿಕಾರಗಳನ್ನು ಮೂಲೆಗಿಟ್ಟರೂ ನಿರ್ಣಯ ಸಾಮರ್ಥ್ಯಕ್ಕೆ ಜ್ಞಾನವೆಂಬ ಮಿತ್ರನ ಬೆಂಬಲವು ಬೇಕೇಬೇಕು. ಯಾವದೊಂದರ ನಿರ್ಣಯವನ್ನು ಹೇಳಬೇಕಾದರೆ ಅದರ ಗುಣಧರ್ಮಗಳ ಜ್ಞಾನವು ಬೇಕಲ್ಲವೆ! ಚಿಕ್ಕವರಿಗಿಂತ ಪ್ರೌಢ ಮನುಷ್ಯರು ಸೃಷ್ಟಿಯಲ್ಲಿ ಮೊದಲು ಬಂದವರಾದುದರಿಂದ ಸೃಷ್ಟಿಯ ಹೆಚ್ಚು ಪರಿಚಯವು ಅವರಿಗಿರುವದು. ಸಣ್ಣವರಿಗಿಂತ ಎಷ್ಟೋ ಪದಾರ್ಥಗಳ ಗುಣಧರ್ಮಗಳ ಜ್ಞಾನವನ್ನು ಹೆಚ್ಚಾಗಿ ಮಾಡಿಕೊಂಡಿರುವರು. ಈ ಕಾರಣದಿಂದಲೇ ಬಾಲಕರ ನಿರ್ಣಯಕ್ಕಿಂತ ಪ್ರೌಢರ ನಿರ್ಣಯವು ಸತ್ಯಕ್ಕೆ ತೀರ ನಿಕಟವಾಗಿರುತ್ತದೆ. ಒಟ್ಟಿಗೆ ನಿರ್ಣಯಶಕ್ತಿಗೆ ವಿಕಾರಗಳ ಭಯವೂ ಜ್ಞಾನದ ನೆರವೂ ಖಂಡಿತವಾಗಿ ಬೇಕು. ಈ ಸೃಷ್ಟಿಯಲ್ಲಿ ಸೌಖ್ಯವಾಗಬೇಕೆಂಬಪೇಕ್ಷೆ ಇದ್ದರೆ ನ್ಯಾಯಶಕ್ತಿಯ ವಿನಿಯೋಗವನ್ನು ಸರಿಯಾಗಿ ಮಾಡಿಕೊಂಡರೆ ಸಾಕು. ನಮ್ಮೊಳಗೆ ಐಕಮತ್ಯವಾಗದಿರಲಿಕ್ಕೂ, ಸಣ್ಣ ಪುಟ್ಟ ಸಂಗತಿಗಳ ಸಂಬಂಧದಿಂದ ಸಹ ಬಡಿದಾಡುತ್ತಿರಲಿಕ್ಕೂ ನಮ್ಮ ಮೇಲೆ ಅತ್ಯಧಿಕಾರ ನಡಿಸುವ ದುರ್ವಿಕಾರಗಳ ಅಮಲು ಎಂದು ಖಂಡಿತವಾಗಿ ಹೇಳಬಹುದು. ಬಡಿದಾಡುವ ಎರಡು ಬಣಗಳಲ್ಲಿ ಕೇವಲ ಜ್ಞಾನದ ಯುದ್ಧವೇ ನಡೆಯುತ್ತಿದ್ದರೆ ನಿರ್ಣಯಶಕ್ತಿಯ ಯೋಗದಿಂದ ಸತ್ಯ ಸಂಗತಿಯು ಹೊರಬಿದ್ದು ಜಗಳವು ಬೇಗ ಕಟ್ಟಾಗುತ್ತದೆ. ವಿಕಾರವಶದಿಂದ ನಿರ್ಣಯಶಕ್ತಿಯನ್ನು ಮುಚ್ಚಿಬಿಟ್ಟು ಜ್ಞಾನದ ಸಂಸರ್ಗವನ್ನೇ ಮಾಡಗೊಡದಿದ್ದರೆ, ಜಗಳದ ಸ್ವರೂಪವು ನಿಕರಕ್ಕೆ ಬಂದು ಲಠ್ಠಾಲಠ್ಠಿಗೆ ಆರಂಭವಾಗುತ್ತದೆ, ಜ್ಞಾನದಿಂದ ಸತ್ಯವು ಒಮ್ಮಿಲ್ಲ ಒಮ್ಮೆಯಾದರೂ

ಬೈಲಿಗೆ ಬಂದು ಸರ್ವರಿಗೆ ಹಿತವಾಗುವದು. 'ವಾದೇ ವಾದೇ ಜಾಯತೇ ತತ್ತ್ವಬೋಧಃ' ಎಂಬುದನ್ನು ಎಲ್ಲರೂ ನೆನಪಿಡತಕ್ಕ ನುಡಿಯಾಗಿದೆ. ವಿಕಾರವಶವಾದರೆ ಸತ್ಯಶೋಧನದ ಕಡೆಗೆ ಅವರ ಇಚ್ಛೆ ಯಾಗದೆ ತಮ್ಮ ದುರಾಗ್ರಹದ ಕಡೆಗೇ ಒಲೆಯುವರು. ಹೀಗಾಗಿ ಆ ಬಡಪಾಪ! ಸತ್ಯವು ದೂರವೇ ಉಳಿಯುತ್ತದೆ. ಒಂದು ಬಣದೊಳಗಿನ ಪ್ರತಿಯೊಬ್ಬರಿಗೆ ವಿರುದ್ಧ ಪಕ್ಷದೊಳಗಿನ ಪ್ರತಿಯೊಬ್ಬನು ಪ್ರತ್ಯೇಕವಾಗಿ ಅಪಕಾರವಮಾಡಿರದಿದ್ದರೂ ಪರಸ್ಪರವಾಗಿ ಒಬ್ಬರ ಬಣವನ್ನೊಬ್ಬರು ನೋಡಿದ ಕೂಡಲೆ ಸಿಟ್ಟಿಗೆದ್ದು ಅವರಿಗೆ ಕೇಡು ಬಗೆಯುತ್ತಾರೆ. ತಮ್ಮ ಬಣದವರ ಅಭಿಪ್ರಾಯವೇನು? ಬಣಗಳುಂಟಾಗಲಿಕ್ಕೆ ಕಾರಣವಾವುದು? ಆ ಕಾರಣವು ಯೋಗ್ಯವಾದದ್ದೋ? ಅಯೋಗ್ಯವಾದದ್ದೋ? ಆ ಸಂಬಂಧದಿಂದ ತಮ್ಮ ಕರ್ತವ್ಯವು ಎಷ್ಟರಮಟ್ಟಿಗೆ? ಇತ್ಯಾದಿಗಳ ಬಗ್ಗೆ ಶಾಂತತೆಯಿಂದಲೂ ದಯಾದೃಷ್ಟಿಯಿಂದಲೂ ವಿಚಾರಮಾಡದೆ ಒಮ್ಮಿಂದೊಮ್ಮೆಗೇ ಕೇಡು ಬಗೆಯಲಿಕ್ಕೆ ಆಶಿಸುವದು. ಮೂರ್ಖತನವಲ್ಲವೇ! ಇದೆಲ್ಲ ವಿಕಾರಗಳ ಕೆಲಸವಲ್ಲದೆ ಬೇರೆ ಏನು? ಬಣಗಳಲ್ಲಿ ಬಹುತರವಾಗಿ ಈ ಬಗೆಯ ಸಾರಾಸಾರ ವಿಚಾರವಿಲ್ಲದ ಅಸ್ಥಿರಚಿತ್ತದ ಜನರೇ ಬಹಳ. ಅದು ನಮ್ಮ ದೇಶದ ದುರ್ದೈವವೆಂದು ಹೇಳಬೇಕಾಗಿದೆ!!

೯. ನಿರ್ಣಯಶಕ್ತಿಗೆ ಸಾಧಕವಾದ ಇನ್ನೂ ಕೆಲವು ಸಂಗತಿಗಳು. ಈ ವರೆಗೆ ನಿರ್ಣಯಶಕ್ತಿಯ ಸ್ವರೂಪ ವಿವೇಚನೆಯು ತಕ್ಕಮಟ್ಟಿಗೆ ಮಾಡಿರುವದು. ಆದರೂ ಯಾವದಾದರೊಂದು ಸಂಬಂಧವಾಗಿ ಪೂರ್ಣ ಮತ್ತು ಸಮವಾಗಿ ನಿರ್ಣಯವಾಗಬೇಕಾದರೆ, ಅದಕ್ಕೆ ಇನ್ನೂ ಕೆಲವು ಗುಣಗಳ ಅನುಕೂಲ್ಯವು ಅವಶ್ಯವಾಗಿ ಬೇಕು. ಅವುಗಳಲ್ಲಿ ಮುಖ್ಯವಾಗಿ (ಅ) ಶಾಂತಿ (ತಾಳ್ಮೆ) ಸ್ಥೈರ್ಯ, ಸಮತ್ರೋಲತೆಗಳೂ (ಬ) ವ್ಯಾಪಕವಿಚಾರ ಶೈಲಿಯೂ, (ಕ) ಸಾಧಕ ಸಂಗತಿಗಳ ಮಹತ್ತ್ವಾ ಮಹತ್ವಗಳ ಕಡೆಗೆ ಲಕ್ಷ್ಯವೂ ಬೇಕಾಗುವವು.

(ಅ) ಶಾಂತಿ—ಸಮಾಧಾನವೇ ಶಾಂತಿಯು. ಮನಸ್ಸಿನ ಸ್ವಾಭಾವಿಕ ಆನಂದವನ್ನು ಸ್ಥಿರಪಡಿಸಿದರೆ ತಾಳ್ಮೆಯು ನೆಲೆಗೊಳ್ಳುವದು. ಶಾಂತಿ, ಸ್ಥೈರ್ಯ ಮೊದಲಾದವುಗಳಿಗೆ ದೇಹಾರೋಗ್ಯವು ಮುಖ್ಯವಾದದ್ದು. ಶರೀರಕ್ಕೂ ಮನಸ್ಸಿಗೂ ತೀರ ನಿಕಟ ಸಂಬಂಧವದೆ. ಮನಸ್ಸಿನ ಸರ್ವವ್ಯಾಪಾರಗಳಿಗೆ ಮಿದುಳೇ ಮೂಲವು. ಅಲ್ಲಿಂದಲೇ ಜ್ಞಾನ ತಂತುಗಳು ನಮ್ಮ ಮೈಯನ್ನೆಲ್ಲ ವ್ಯಾಪಿಸಿವೆ. ಶರೀರವು ಸದೃಢವಾಗಿದ್ದರೆ ಮಿದುಳಿಗೆ ಪುಷ್ಟಿಕಾಂಶವು ಹೆಚ್ಚಿ ದೊರೆದು ಬಲಿಷ್ಠವಾಗಿರುತ್ತದೆ. ಶುದ್ಧವಾದ ಮತ್ತು ಬಲವತ್ತರವಾದ ರಕ್ತದ ಮೂಲಕವಾಗಿ ಮಿದುಳು ಶಾಂತವಾಗಿರುತ್ತದೆ. ಬೇಗ ಹೆಚ್ಚು ಕಡಿಮೆಯಾಗುವದಿಲ್ಲ. ಅದರಿಂದ ಆಲೋಚನಾಶಕ್ತಿಗೆ ಸಮತ್ವವು ತಲೆದೋರುತ್ತದೆ. ಗಟ್ಟಿಮುಟ್ಟಿಯಾದ ಒಕ್ಕಲಿಗನ ಮಿದುಳು ತೀರ ಶಾಂತತೆಯಲ್ಲಿರುತ್ತದೆಂಬುದು ನಿಜವು. ಆದರೆ ಅವನ ಮನಸ್ಸಿಗೆ ಸಂಸ್ಕಾರ (ಶಿಕ್ಷಿತ) ವಿಲ್ಲದರಿಂದಲೂ, ವಿಚಾರಮಾಡುವ ರೂಢಿಯ ಅಭಾವದಿಂದಲೂ ಒಮ್ಮೊಮ್ಮೆ ಅವಿಚಾರ ಪ್ರೇರಿತನಾಗಬೇಕಾಗುವದು. ಆದರೂ ಅವನ ಮಿದುಳು ಶಾಂತವಿರುವದರಿಂದ ಬೇಗ ಅವನನ್ನು ಹಾದಿಗೆ ತರಬಹುದು. ಶಾರೀರಿಕಪೀಡೆಯಿಂದ ಮಿದುಳಿಗೆ ತ್ರಾಸವೆನಿಸುವದು. ಅತಿಶಯ ದುಃಖ, ಶೋಕ, ಮಾನಸಿಕ ಪೀಡೆಗಳಿಂದ ಅದು ಬಲಗುಂದುವದು. ಆದುದರಿಂದ "अति सर्वत्र वर्जयेत्" ಎಂಬುದನ್ನು ಮರೆಯಕೂಡದು. ಮಿದುಳಿಗೆ ತ್ರಾಸವಾದ ಕೂಡಲೆ ಮನಸ್ಸಿಗೆ ಅಸ್ವಾಸ್ಥ್ಯವಾಗುವದು. ಅಸ್ವಾಸ್ಥ್ಯದಿಂದ ಒಮ್ಮೆ ತಮ್ಮ ಮನಸ್ಸಿನಲ್ಲಿ ಸೇರಿದ ಗ್ರಹವು ಏನು ಮಾಡಿದರೂ ಬಿಡುವದಿಲ್ಲ. ಆಗ ಅನೇಕ ತರ್ಕಗಳಿಗೆ ಚಾಲನೆ ದೊರೆದು ಮನಸ್ಸಿನ ಸಮತೋಲತ್ವವು ನಷ್ಟವಾಗುತ್ತದೆ ಸ್ಥೈರ್ಯವು ಸ್ಖಳಿಸುತ್ತದೆ. ಹೀಗಾದಬಳಿಕ ಶಾಂತಿಯಂತೂ ದೂರೇ ಉಳಿದು ವಿವೇಕ ಬುದ್ಧಿಯು ಮಣ್ಣುಪಾಲಾಗುವದು. ಕಾಮಣಿಯಾದ ಮನುಷ್ಯನಿಗೆ ಇಲ್ಲವೆ ಹಾವು ಕಚ್ಚಿ ನಂಜೇರಿದವನಿಗೆ ಈ ಜಗತ್ತೆಲ್ಲವೂ ಹಚ್ಚ

ಗೆ ಕಾಣುವಂತೆ, ಜ್ಞಾನಚಕ್ಷುಗಳಿಗೆ ವಿಕಾರ ಪಟಲಗಳು ಬಂದ ಕೂಡಲೆ ಅನುಕೂಲ ಸಂಗತಿಗಳೂ ಪ್ರತಿಕೂಲ ಸಂಗತಿಗಳೂ ಸಹ ಪ್ರತಿಕೂಲ ಸಂಗತಿಗಳಲ್ಲಿಯೇ ಸಮಾವೇಶವಾಗಿ ಹೋಗುವವು. 'ಅಥೆಲ್ಲೊ' 'ಡೆಸ್ಸಮೋನಾ' ಎಂಬವನ ಸಂಬಂಧದಿಂದ ಬಂದು ತೀರ ಕ್ಷುಲ್ಲಕವಾದ ಕಾರಣಕ್ಕಾಗಿ ಅಥೆಲ್ಲೋನ ಮನಸ್ಸು ಕೆಟ್ಟು ಹೋಗಲು, ತನಗೆ ಅನುಕೂಲವಾದ ಕುತರ್ಕಗಳನ್ನು ಪರಿಭಾವಿಸಿಕೊಂಡು ಎಂಥ ಅನರ್ಥವನ್ನು ಮಾಡಿದನೆಂಬುದು ಶೇಕ್ಸಪೀಯರನಿಂದ ಉತ್ತಮವಾಗಿ ಚಿತ್ರಿಸಲ್ಪಟ್ಟಿದೆ ಒಮ್ಮೆ ಒಬ್ಬನ ಸಲುವಾಗಿ ತಮ್ಮ ಮತವು ಇಲ್ಲವೆ ಗ್ರಹವು ಕಟ್ಟಿದಾದರೆ ಸಾಕು! ಪುನಃ ನೆಟ್ಟಗಾಗುವದು ಅಸಾಧ್ಯವೇ!! ಒಟ್ಟಿಗೆ ಗ್ರಹರೂಪಿಯಾದ ಪಿಶಾಚಿಯು ಎಂಥ ಸಂಭಾವಿತನನ್ನಾದರೂ ಕೆಡಿಸಲಿಕ್ಕೆ ಹಿಂದೆ ಮುಂದೆ ನೋಡುವದಿಲ್ಲ.

(ಬ) ವ್ಯಾಪಕ ವಿಚಾರ—ಬರಿಯ ಏಕದೇಶಿಯ ವಿಚಾರದಿಂದ ಸತ್ಯದ ನಿರ್ಣಯವು ಚನ್ನಾಗಿ ಆಗುವದಿಲ್ಲ. ಮೊಸರನ್ನು ಮಥಿಸಿದರೆ ಮಾತ್ರ ಬೆಣ್ಣೆಯೆಂಬ ರುಚಿಕರವಾದ ಸ್ನೇಹವುಳ್ಳ ಪದಾರ್ಥವು ಹೊರಡುವಂತೆ, ಪ್ರತಿಯೊಂದು ಕ್ಷುಲ್ಲಕ ಸಂಗತಿಯು ಕಡಿಗೆಯಾದರೂ ಪೂರ್ಣ ಲಕ್ಷ್ಯವನ್ನು ಪೂರೈಸಿ ಮನಗಂಡು ಕೊನೆಗೆ ಅದರ ಇತ್ಯರ್ಥವನ್ನು ಹೊರಗಡಹಿದರೆ ಮಾತ್ರ ನಿಜತ್ವವು ಬೈಲಿಗೆ ಬಂದು ಅದರಿಂದ ಸುಖವಾಗುವದು.

(ಸಶೇಷ).

CORRESPONDENCE

ಪತ್ರವ್ಯವಹಾರ

ವಾರ್ಷಿಕಸಮಾರಂಭ.

ಮೊ॥ ದಯಾಸಾಗರ ರಾಜಮಾನ್ಯರಾಜೆಶ್ರೀ ಶಾಳಾಪತ್ರದ ಎಡಿಟರ ಧೊರೆಗಳ ಸನ್ನಿಧಿಗೆ—

ಕೆಳಗೆ ಸಹಿ ಮಾಡಿರುವ ಬೈಲಹೋಂಗಲ ಉರ್ದು ಶಾಲೆಯು ಸ್ಕೂಲ ಪಂಚ ಜನರ ಕಡಿಂದ ಬಹು ವಿನಯಪೂರ್ವ

ಈ ವಿನಂತಿಯೇನಂದರೆ—ಕೆಳಗಿನ ಸಂತೋಷಕರ ಕೆಲವು ಸಂಗತಿಗಳಿಗೆ ತಮ್ಮ ಪತ್ರದಲ್ಲಿ ಸ್ಥಳ ದೊರೆಯಬೇಕೆಂಬದಾಗಿ ಮಹದಾಶೆಯಿಂದ ಬೇಡಿಕೊಳ್ಳುತ್ತೇವೆ.

ತಾರೀಖು ೭-೯-೧೯೦೬ನೇ ಇಸವಿ ದಿವಸ ನಮ್ಮೂರ ಉರ್ದು ಶಾಲೆಯ ವಾರ್ಷಿಕ ಸಮಾರಂಭವಾಯಿತು. ಊರೊಳಗಿನ ಸಭ್ಯಗೃಹಸ್ಥರು ಸನದಿ ವಕೀಲ ಜನರು ಬಂದಿದ್ದರು. ಇಲ್ಲಿಯ ಮೆ॥ ಸಬಜಜ್ಜ ಸಾ॥ ಬಾಹದ್ದೂರವರು ಅಧ್ಯಕ್ಷರಾಗಿದ್ದರು. ಕೆಲವು ವಿದ್ಯಾರ್ಥಿಗಳ ಉರ್ದು ಕನ್ನಡ ವಾಚನ ಭೂಗೋಲ ವಿಷಯಗಳು ನೋಡಲಾಯಿತು. ಕೆಲವು ವಿದ್ಯಾರ್ಥಿಗಳು ನಮ್ಮ ಅರಸರು ರಾಜಾಧಿರಾಜರು ಆದ ಶಹೆನಶಾಹ ಆಲೀಜಾಹಮಲಿಕ ಮೋಅಝ್ಝಮ್ ಎಡ್ವರ್ಡ ಧೊರೆಗಳವರ ಸ್ತೋತ್ರದಲ್ಲಿ ಬಕ್ಷೂಮಿಯ್ಯಾ ಮಾಸ್ತರರು ರಚಿಸಿರುವ ಪದಗಳನ್ನು ಮತ್ತು ಕಲಿತಿರುವ ಕವಿತೆಗಳನ್ನು ಸುಸ್ವರದಿಂದ ಬಹು ಸರಸವಾಗಿ ಅಂದರು. ಆ ಮೇಲೆ ಈ ವರ್ಷ ಪರೀಕ್ಷಕರು ಬರೆದ ವಾರ್ಷಿಕ ಪರೀಕ್ಷೆಯ ಪರಿಣಾಮವನ್ನೂ ಓದಲಾಯಿತು. ಹುಡುಗರ ಸಂಖ್ಯಾಮಾನದಿಂದಲೂ ಅಭ್ಯಾಸಮಾನದಿಂದಲೂ ಈ ಶಾಲೆಯ ಪೂರ್ವಸ್ಥಿಯನ್ನೂ ಈಗಿರುವಸ್ಥಿಯನ್ನೂ ವಿಚಾರ ಮಾಡಿ ಅಧ್ಯಕ್ಷರು ಕೆಳಗೆ ಬರದಂತೆ ಇಂಗ್ರೇಜಿ ಷರಾ ಬರೆದರು.

The present Head Master seems to have surprised his predicissors in increasing the number of pupils as well as in improving the standard of the pupils in every respect.

(*Signed*) in English,

Sub-Judge.

ನಂತರ ಇನಾಮಗೋಸ್ಕರ ಬಂದ ಪುಸ್ತಕಗಳು ವಿದ್ಯಾರ್ಥಿಗಳಿಗೆ ಕೊಟ್ಟು ಸ್ಕೂಲ ಪಂಚರಿಂದಲೂ ಊರಜರಿಂದಲೂ ವರ್ಗಣಿಯಿಂದ ತರಿಸಲ್ಪಟ್ಟ ಪಾನಾಯಿ ಹಂಚೋಣವಾಯಿ

ತು. ಒಟ್ಟಿನ ಮೇಲೆ ಹೆಡ್ ಮಾಸ್ತರ ಬಕ್ಷೂಮಿಯ್ಯಾ ಮತ್ತು ೧ನೇ ಅ॥ ಅಬ್ದುಲ್‌ಸಾ॥ ವ ೨ನೇ ಅ॥ ಸೈಯದಹುಶೇನ ಇವರನ್ನೊಡಗೂಡಿ ನಮ್ಮೂರ ಉರ್ದು ಶಾಲೆಯನ್ನು ಈ ರೀತಿ ಸುಧಾರಿಸಿ ಇಲ್ಲಿಯವರೆಗೆ ಪರಿಕೆಗೆ ತಂದು ನಮ್ಮೆಲ್ಲರಿಗೂ ಸಂತೋಷಗೊಳಿಸಿದ್ದು ಆವರಿಗೆ ಭೂಷಣವಾದದ್ದೇ ಇದರಂತೆ ದಿನ ದಿನಕ್ಕೆ ಇನ್ನೂ ಹೆಚ್ಚೆಚ್ಚು ಸುಧಾರಿಸುತ್ತ ನಡಿಯಬಹುದೆಂದು ಅಪೇಕ್ಷಿಸುತ್ತೇವೆ. ತಾರೀಖು ೯-೯-೧೯೦೬ ಇಸ್ವಿ

ಸ್ಕೂಲ ಪಂಚಜನರ ಸಹಿಗಳು—

DEPARTMENTAL NOTICE.

ನೋಟೀಸುಗಳು.

ಸರಕ್ಯೂಲರ ನಂಬರು ೨೧ (ಗ).

ಅನುಕ್ರಮ ನಂಬರು ೧೩೬೮ (ಗ)

ಲಾಹೋರ, ೩೦ನೇ ಅಕ್ಟೋಬರ ೧೯೦೫ನೇ ಇಸ್ವಿ

ಮೆ॥ ಡಾಯರೆಕ್ಟರ ಆಫಪಬ್ಲಿಕ ಇನ್‌ಸ್ಟ್ರಕ್ಶನ್ ಇಲಾಖಾ ಪಂಜಾಬ ಇವರ ಕಡಿಂದ ಯಾವತ್ತೂ ಡಿಪ್ಯೂಟಿ ಕಮಿಶನರರಿಗೂ ಹಾಗೂ ಇನಸ್ಪೆಕ್ಟರರಿಗೂ ಈ ಸರ್ಕ್ಯೂಲರದಿಂದ ತಿಳಿಯಪಡಿಸುವದೇನಂದರೆ— ಆವರು ಎಲ್ಲ ಸರಕಾರೀ ಹಾಯಸ್ಕೂಲಗಳಲ್ಲಿ ಹಾಗೂ ಲೋಕಲಬೋರ್ಡ ಹಾಗೂ ಮುನಸಿಪಲ ಶಾಲೆಗಳಲ್ಲಿ ಮೇವಾ-ಮಿಠಾಯಿ ಮಾರುವವರಿಗೆ ಅಲ್ಲಲ್ಲಿಯ ವಿದ್ಯಾರ್ಥಿಗಳಿಗೆ ಚುಟ್ಟಾಗಳನ್ನು ಮಾರಬಾರದೆಂತಲೂ ಮತ್ತು ಸ್ಕೂಲಗಳ ಹದ್ದಿನೊಳಗೆ ಚುಟ್ಟಗಳನ್ನು ತಮ್ಮ ಹತ್ತರ ಮಾರಾಟದ ಸಲುವಾಗಿ ಇಡಬಾರದೆಂತಲೂ ಸಖ್ತ ತಾಕೀದ ಕೊಡಬೇಕು.

ಈ ಹುಕುಮಿನ ಅಮಾನ್ಯತೆಯ ಸಲುವಾಗಿ ಹೆಡ್ ಮಾಸ್ತರರೇ ಜಬಾಬದಾರರೆಂದು ತಿಳಿಯಲಾದೀತು.

(ಸಹೀ) ಕ್ಷ.

ಡಾಯರೆಕ್ಟರ ಆಫಪಬ್ಲಿಕ ಇನ್‌ಸ್ಟ್ರಕ್ಶನ್ ಪಂಜಾಬ.

ಪ್ರಕಟನೆ.

ಯಾವತ್ತು ಮುಲ್ಕಿ ಪರೀಕ್ಷೆಯ ವಿದ್ಯಾರ್ಥಿಗಳಿಗೆ ಸೋಯಿಯಾ ಗುವಂತೆ ಕೆಳಗಿನ ಪುಸ್ತಕಗಳನ್ನು ಮಾರಾಟಕ್ಕೆ ಇಟ್ಟಿದ್ದೇವೆ. ಪ್ರತಿಗಳು ತೀರ ಸ್ವಲ್ಪ ಅವೆ.

ಪರೀಕ್ಷೆಯ ಪ್ರಶ್ನೆ ... ೧ ರು. ನಿಬಂಧರತ್ನಾಕರ ೧೦ ಆಣೆ
ಆರನೇ ಪುಸ್ತಕದ ಸಾರಾಂಶ ೬ ಆಣೆ ಸಂಕ್ಷಿಪ್ತ ಛಂದಃಸಾರ ೩ ಆಣೆ

ಈ ನಾಲ್ಕೂ ಪುಸ್ತಕಗಳನ್ನು ಒಮ್ಮೆಗೆ ತೆಗೆದುಕೊಂಡರೆ ೧॥ ಲಕ್ಕೆ ಕೊಡುವೆವು. ಇವರ ಹೊರ್ತು ನಾಟಕ, ಕಾದಂಬರೀ ಕಥೆಗಳು, ವೀರಶೈವ ಮತದ ಪುಸ್ತಕಗಳು, ಗಣಿತಚಂದ್ರಿಕೆ, ಪಡಿವಪಾಠ ಮುಂತಾದವುಗಳು ಯೋಗ್ಯ ಕಿಮ್ಮತಿಗೆ ದೊರೆಯುತ್ತವೆ. ಹೆಚ್ಚಿಗೆ ಪ್ರತಿಗಳನ್ನು ತೆಗೆದುಕೊಳ್ಳುವವರಿಗೆ ಭರಪೂರ ಕಮಿಶನ್ನ ಸಿಗುವದು.

ಜಾಕೋಲಕರ ಮತ್ತು ಕಂಪನಿ. ಧಾರವಾಡ.

REGISTERED No. B. 19.

ಸೌದಾಗರ ಬುಕ್ ಡಿಪೋ.

ಎಲ್ಲ ಶಾಲೆಗಳ ಸರಕಾರಿ, ಹೊಸ ಕ್ರಮಿಕ ಪುಸ್ತಕಗಳೂ ಖಾಸಗಿ, ಅರ್ಥಗಳೂ, ಮಾರ್ಸಡನ್ ಇತಿಹಾಸವೂ, ಕಥೆಗಳೂ, ಪುರಾಣ ಗೋಖಲೆ ಗಣಿತ (ಗಣಿತಉಪಪತ್ತಿ) ವಗೈರೆ ಪು. ಗಳು ಅವೆ. ಶೋಭೆಯುಳ್ಳ ವಿಸಿಗಳ ಬೆಳವಣಿಗೆ ಬತ್ತೈಲು. ಹೊಸ ಪುಸ್ತಕಗಳ ಹೊರ್ತಾಗಿ ಕಮಿಶನ್ ರು. ೧ಕ್ಕೆ ೧ ಆಣೆ ಪ್ರಕಾರ.

ಧಾರವಾಡ } ಮಹಮ್ಮದ ವ. ಅಬ್ದುಲ್ ಹಮೀದ ಸಾ॥ ಸೌದಾಗರ

6—10—0 ಕ್ಕೆ, ಘಟ್ಟವಾಚು, 400 ಶಾಯಿ ಚೀಟು ಉಷ್ಣಮಾಪಕ ಯಂತ್ರ

3—10—0 ಕ್ಕೆ 'ಬಿ' ಟ್ರಂಪಿಸು. 200 ಶಾಯಿ ಚೀಟು ಟ. ಖ ಮಾಫಿ.

ಶಾಯಿ ಕೆಟ್ಟದಾದರೆ ಹಣವನ್ನು ತಿರಿಗಿ ಕೊಡುವೆವು

ಹಿಪ್ಪರಗಿ ಡಿ। ಬಿಜಾಪೂರ } ರಘುನಾಥ ಜೀವಾಜಿ ಕುಲಕರ್ಣಿ

ಶಾಲಾಪತ್ರ.

KANARESE
SCHOOL PAPER.

ಪುಸ್ತಕ ೪೨] ನವಂಬರ ೧೯೦೬. [ಸಂಚಿಕೆ ೧೧.

ಅನುಕ್ರಮಣಿಕೆ. ಪುಟ.

೧. ವಿದ್ಯಾಸುಧಾರಣಾ ಸಂಬಂಧವಾದ ವೃತ್ತಾಂತಗಳು ೨೪೧–೨೪೩
೨. ರಾಜಸ್ಥಾನದ ಇತಿಹಾಸವು ೨೪೩–೨೪೯
೩. ನಿರ್ಣಯ ಶಕ್ತಿಯು ೨೪೯–೨೫೩
೪. ಕ್ಷಯಾಧಿಮಾಸ ಜ್ಞಾಪಕ ಪರಿಲೇಖವು ... ೨೫೩–೨೫೭
೫. ಟ್ರೇನಿಂಗಕಾಲೇಜ ಪರೀಕ್ಷೆಯ ಪ್ರಶ್ನೆ ... ೨೫೭–೨೬೦
೬. ಪಾಠದ ಟಿಪ್ಪಣಿ ೨೬೦–೨೬೪

CONTENTS.

1. **Educational Intelligence and Useful Notes** 241–243
2. The History of Rajasthan 243–249
3. Conscience. 249–253
4. Figure to show Kshaya & Adhika months 253–257
5. Dharwar training college certificate examination Questions 257–260
6. Note of Lesson 260–264

DHARWAR:

PRINTED AT THE KARNATIC BOOK DEPOT PRESS.

1906.

REGISTERED No. B. 19.

ಕನ್ನಡ ಶಾಲಾಪತ್ರಕದ ವರ್ಗಣಿ ವರ್ಷಕ್ಕೆ ಮುಂಗಡ ೧॥ ಆ.

ಒಂದು ಸಂಚಿಕೆಗೆ ... . ೨ ಆ.

ಪ್ರಕಟನೆಗಳನ್ನು ಛಾಪಿಸುವ ದರಗಳು.

ಒಮ್ಮೆ ಇಟ್ಟರೆ	೪	ಪಂಕ್ತಿಗಳವರೆಗೆ	೧ ರೂ.
ಮೂರುಸಾರೆ ಇಟ್ಟರೆ	೩	,,	೧ ರೂ
ಆರುಸಾರೆ ಇಟ್ಟರೆ	೨	,,	೧ ರೂ.

ಸೂಚನೆಗಳು.

೧. ಶಾಲಾಪತ್ರಕಕ್ಕೆ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವೆವು.

೨. ಶಿರೋಲೇಖಕ್ಕೂ, ಅಪೂರ್ಣ ಪಂಕ್ತಿಗೂ ಪೂರ್ತಾ ಪಂಕ್ತಿಯ ಹಾಸಲು ಬೀಳುವದು.

೩. ಭಾಷಾಂತರ ಮಾಡಿ ಛಾಪಿಸುವದಾದರೆ ಮೇಲಿನ ದರದ ಇಮ್ಮಡಿ ಫೀ ಬೀಳುವದು.

೪. ಪ್ರಕಟನೆಯ ಕೂಡ ಹಣ ಕಳುಹಲಿಕ್ಕೆ ಬೇಕು.

೫ ಟಿಕೀಟ ಇಟ್ಟ ಹೊರತು ಉತ್ತರ ಸಿಗಲಾರದು.

S. K. Rodda

ಮ್ಯಾನೇಜರ ಕ. ಶಾಲಾಪತ್ರಕ.

ಶಾಲಾಪತ್ರಿಕೆ.

ಪದ್ಯಂ

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಕೋತ್ಕರ್ಷಮಂ
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪವೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಡುದೈ ।
ಬಯಸಿಂದೋದವಶಿದ್ಧವೇಳ್ಪುದು ಬುಧರ್ಜ್ಞಾನಾಭಿವೃದ್ಧಿಪ್ರಿಯರ್ ॥

ಪುಸ್ತಕ ೪೨.] ನವೆಂಬರ ೧೯೦೬. ಸಂಚಿಕೆ ೧೯

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು

ಪಾಶ್ಚಿಮಾತ್ಯರು (ಬ್ರಿಟಿಶರು) ನಮ್ಮನ್ನಾಳಹತ್ತಿದಂದಿನಿಂದ ಭರತಖಂಡದಲ್ಲಿ ಸಾರ್ವಜನಿಕ ಶಿಕ್ಷಣವು ಬಹು ಬಿತ್ತರದಿಂದ ನಡೆಯಹತ್ತಿರುವದಷ್ಟೇ; ಆ ಶಿಕ್ಷಣದ ಪ್ರಭಾವದಿಂದ ಸುಶಿಕ್ಷಿತರಲ್ಲಿ, ನಾವೂ ನಮ್ಮ ಬುದ್ಧಿಬಲದಿಂದ ದಾವತಿಮಾಡಿದರೆ ಯಾವತ್ತೂ ಕಾರ್ಯಗಳಲ್ಲಿ ಯುರೋಪಿಯನ್ನರನ್ನು ಸರಿಗಟ್ಟಬಹುದೆಂಬ ಕಲ್ಪನೆಯು ಉದ್ಭವಿಸಿತು, ಅದರಂತೆ ಅವರು ನಮ್ಮ ದೇಶದೊಳಗಿನ ಎಷ್ಟೋ ಜನರನ್ನು ಬೇರೆ ಬೇರೆ ಸುಧಾರಿಸಿದ ರಾಷ್ಟ್ರಗಳಿಗೆ ಬೇರೆ ಬೇರೆ ತರದ ಉಚ್ಚಶಿಕ್ಷಣವನ್ನು ಪಡೆಯಲೋಸುಗ ಕಳಿಸಿದ್ದಾರೆ. ಕೆಲವರು ಶ್ರೀಮಂತರು ತಾವಾಗಿ ತಮ್ಮ ಸ್ವಂತವೆಚ್ಚದಿಂದ ಪರದೇಶಕ್ಕೆ ವಿದ್ಯಾಭ್ಯಾಸಾರ್ಥವಾಗಿ ಹೋಗಿರುವರು. ಬೇರೆ ಕೆಲವರು ಬ್ರಿಟಿಶ ಸರಕಾರದವರ ಆಶ್ರಯದಿಂದ ಪರದೇಶದಲ್ಲಿ ಕಲಿಯುತ್ತಿರುವರು. ಅಮೇರಿಕಾ, ಇಂಗ್ಲಂಡ, ಜರ್ಮನಿ, ಜಪಾನ ಮುಂತಾದ ರಾಷ್ಟ್ರಗಳಲ್ಲಿ ಈ ಮಾದರಿಯಿಂದ ಓದುತ್ತಿದ್ದ ಅನೇಕ ಜನ ವಿದ್ಯಾರ್ಥಿಗಳನ್ನು ಕಾಣಬಹುದು. ಅದರಲ್ಲಿ ಜಪಾನವು ನಮಗೆ ಸಮೀಪವಿರುವದಲ್ಲದೆ, ಅಲ್ಲಿ ಸಂ

ಸಾರವು ತುಸು ವೆಚ್ಚದಿಂದ ಸಾಗಿಸಿಕೊಳ್ಳಲಿಕ್ಕೆ ಬರುವಂತಿದೆ ಈಗ ಸದ್ಯಕ್ಕೆ ಆ ದೇಶದಲ್ಲಿ ಒಟ್ಟಿಗೆ ಐವತ್ತುನಾಲ್ಕು ಮಂದಿ ವಿದ್ಯಾರ್ಜನಾಕಾರ್ಯದಲ್ಲಿ ತೊಡಗಿದ್ದಾರೆ. ಅವರಲ್ಲಿ ೫೦ ಮಂದಿ ಹಿಂದೂ ಜನರೂ, ಮುವ್ವರು ಮುಸಲ್ಮಾನರೂ, ಒಬ್ಬನು ಶೀಕಜಾತಿಯವನೂ ಇರುವರು ಬಂಗಾಲದವರು ಮೂವತ್ತುಮೂರು ಮಂದಿ, ಸಂಯುಕ್ತ ಸಂಸ್ಥಾನ, ಪಂಜಾಬ, ಬಡೋದೆ ಈ ಮೂರು ಪ್ರಾಂತದಿಂದ ಮೂರು ಮೂರು ಮಂದಿ, ಮುಂಬಯಿಯವರು ನಾಲ್ಕುಜನ, ನಿಜಾಮ ಹೈದರಾಬಾದದಿಂದ ಇಬ್ಬರೂ, ಕೊಡಗದಿಂದ ಒಬ್ಬನೂ, ಮದ್ರಾಸ ಇಲಾಖೆಯವರು ಐದುಮಂದಿಯೂ ಇರುವರು. ಇವರಲ್ಲಿ ಎಂಟು ಮಂದಿ ಯುನಿವರ್ಸಿಟಿಯ ಪದವೀಧರರೂ, ಉಳಿದವರಾದರೂ ಯುನಿವ್ಹರ್ಸಿಟಿಯಲ್ಲಿ ಕಲಿತವರು ಇರುವರು. ಇವರು ಕೈಕೊಂಡ ಶಿಕ್ಷಣ ವಿಷಯಗಳು ಯಾವವೆಂದರೆ—ಹನ್ನೊಂದುಮಂದಿ ಸೀಸಕಸೋಸಿಲ ಮಾಡುವದನ್ನು, ಏಳುಜನ ತೊಗಲನ್ನು ಹದಗೊಳಿಸುವದನ್ನು, ಅಷ್ಟೇ ಜನ ನೇಗೆಯ ಕೆಲಸವನ್ನು, ಕಲಿಯುತ್ತಿರುವರು ಸಬಕಾದ ಮಾಡಲಿಕ್ಕೂ, ವ್ಯವಹಾರಿಕ ರಸಾಯನ ಶಾಸ್ತ್ರವನ್ನು ಅರಿತುಕೊಳ್ಳಲಿಕ್ಕೂ, ಹೆಣಿಕೆ, ದೀಪದಕಡ್ಡಿಯ ಕೆಲಸವನ್ನು ಕಲಿತುಕೊಳ್ಳಲಿಕ್ಕೂ ನಾಲ್ಕುನಾಲ್ಕು ಜನ ಅಭ್ಯಾಸಮಾಡುತ್ತಿರುವರು. ಕಾಜು, ಕೊಡೆ, ಮಣ್ಣಿನಪಾತ್ರೆ, ಗುಂಡಿ, ರೇಶ್ಮೆ, ಔಷಧ, ಖನಿಜವಿದ್ಯಾ ವಿದ್ಯುತ್, ಮುಂತಾದ ವಿಷಯಗಳ ಅಭ್ಯಾಸದಲ್ಲಿ ಇಬ್ಬಿಬ್ಬರು ತೊಡಗಿರುವರು. ಒಟ್ಟಿಗೆ ವ್ಯವಹಾರದಲ್ಲಿ ಅತಿ ಪ್ರಯೋಜನವೆಂದು ತೋರಿಬರುವ ವಿಷಯಗಳಲ್ಲಿ ಈ ಜನರು ವ್ಯಾಸಂಗ ನಡಿಸಿರುವರು. ಇದಲ್ಲದೆ ಅಮೇರಿಕಾ, ಜರ್ಮನಿ, ಇಂಗ್ಲಂಡ ಮುಂತಾದ ದೇಶಗಳಲ್ಲಿರುವವರು ಬೇರೆ. ಈ ಬಗೆಯ ದೇಶಪರ್ಯಟನ ಮಾಡುವ ಸಾಹಸವೂ ಸ್ವದೇಶಾಭಿಮಾನದ ಜಾಗ್ರತೆಯೂ, ಬ್ರಿಟಿಶ ಸರಕಾರದ ಉದಾರಾಶ್ರಯದ ಹಾಗೂ ವಿದ್ಯಾದಾನದ ಮಹಿಮೆಯುಳ್ಳವೆಂದು ಯಾರೂ ಹೇಳ್ಯಾರು?

ಈ ಸಂಚಿಕೆಯಲ್ಲಿ ನಾವು ಹಿಂದೆ ವಚನಕೊಟ್ಟಂತೆ ರಾ. ಸಾ. ಕೇತಕರವರು ಸಭೆಯಲ್ಲಿ ತೋರಿಸಿದ ಕ್ಷಯಾಧಿಕ ಮಾಸದರ್ಶಕ ಪರಿಲೇಖವನ್ನು ಕೊಟ್ಟಿದ್ದೇವೆ. ಹಾಗೂ ಆ ಪರಿಲೇಖದ ಸಂಬಂಧದ ಯಾವತ್ತು ಸಂಗತಿಯನ್ನು ವಿಶದವಾಗಿ ವಿವರಿಸಿದ್ದೇವೆ. ಪರಿಲೇಖದಲ್ಲಿ ತೋರಿಸಿದ ವರ್ತುಲಗಳು ರಾಶಿಚಕ್ರವೆಂದು ತಿಳಿಯಬೇಕು. ಆ ರಾಶಿಗಳನ್ನು ಅತಿಕ್ರಮಿಸಲಿಕ್ಕೆ ಸೂರ್ಯ ಚಂದ್ರರಿಗೆ ಭಿನ್ನ ಭಿನ್ನ ಅವಧಿಯು ಬೇಕಾಗುತ್ತದೆಂಬುದೂ ಅಲ್ಲಿ ಹಾಕಿದ ಅಂಕಿಗಳಿಂದ ಸ್ಪಷ್ಟವಾಗುವದು. ಮೊದಲಿನ ಅಂಕಿಗಳು ದಿವಸಗಳನ್ನು ಅದರ ಮುಂದಿನ ಅಂಕಿಗಳು ಘಳಿಗೆಗಳನ್ನು ತೋರಿಸುತ್ತವೆ. ಈ ಪಟದಂತೆ ಒಂದು ಪಟವನ್ನು ತಯಾರಿಸಿ ಶಾಲೆಯಲ್ಲಿಟ್ಟರೆ ಜ್ಯೋತಿಷ ಶಾಸ್ತ್ರದ ಪಾಠಗಳ ಶಿಕ್ಷಣಕ್ಕೆ ಅನುಕೂಲವಾಗಬಹುದು.

ಮೇಲ ಟ್ರೇನಿಂಗಕಾಲೇಜದ ಹಾಗೂ ಫೀಮೇಲ ನಾರ್ಮಲ್‌ಸ್ಕೂಲಿನ ಪರೀಕ್ಷೆಗಳು ಮುಗಿದದರಿಂದ ಪರೀಕ್ಷೆಗೆ ಬಂದ ಯಾವತ್ತು ಡಿಪೂಟಿಯವರೂ ಅ. ಡಿಪೂಟಿಯವರೂ ತಮ್ಮ ತಮ್ಮ ಸ್ಥಳಕ್ಕೆ ಹೋದರು.

ಮುಲಕೀಪರೀಕ್ಷೆಯಲ್ಲಿ ೧೯೦ ಮಂದಿ ಪಾಸಾಗಿರುವರು.

THE HISTORY OF RAJASTHAN.
ರಾಜಸ್ಥಾನದ ಇತಿಹಾಸವು

ಹಮೀರನ ಲಗ್ನಸಮಾರಂಭವು ಮೇವಾಡದಲ್ಲಿಯೇ ನಡೆಯತಕ್ಕದ್ದೆಂದು ಗೊತ್ತಾಗಿತ್ತು. ಹಾಗೂ ಅವನು ಐದೇನೂರು ಮಂದಿ ರಾವುತರೊಡನೆ ಬರತಕ್ಕದ್ದೆಂದು ಮಾಲದೇವನು ಹೇಳಿದ್ದನು. ಆದ್ದರಿಂದ ಹಮೀರನು ಗೊತ್ತಾದ ಸಂಖ್ಯೆಯುಳ್ಳ ರಾವುತರ ದಂಡಿನೊಡನೆ ಚಿತೋಡಕ್ಕೆ ಬರಲು, ಮಾಲದೇವನ ಐದು ಮಂದಿ ಮಕ್ಕಳು ತಂದೆಯಿಂದ ಪ್ರೇರಿತರಾಗಿ ತಮ್ಮ ಬೀಗನನ್ನು ಎದುರ್ಗೊಳ್ಳಲಿಕ್ಕೆಂದು ಕೋಟೆಯ ಹೊರಗೆ ತುಸು ದೂರ ಒಂದು ಕಡೆ ಕುಳಿತಿದ್ದರು.

ಅವರು ಅಲ್ಲಿಯೇ ಹವಿಾರನನ್ನು ಚೆನ್ನಾಗಿ ಕಾಣಿಸಿಕೊಂಡು ಅವನೊಡನೆ ಕೋಟೆಯ ಬಾಗಿಲ್ಗೆ ಬಂದರು. ಕೋಟೆಯ ಹೆಬ್ಬಾಗಿಲವು ದೃಷ್ಟಿಗೆ ಬೀಳಲು, ಹವಿಾರನು ವಿವಾಹದಂಥ ಮಂಗಳಕಾರ್ಯ ಸಮಾರಂಭದಲ್ಲಿ ದೃಶ್ಯವಾಗುವ ಯಾವದೊಂದು ಚಿಹ್ನದಿಂದ ಆ ಮಹಾದ್ವಾರವು ಸುಶೋಭಿತವಾಗಿ ಕಂಗೊಳಿಸಲಿಲ್ಲವಾದ್ದರಿಂದ ತುಸು ಅಸಮಾಧಾನಪಟ್ಟನು; ಇಷ್ಟೇ ಅಲ್ಲ, ಒಂದು ಪ್ರಕಾರದ ಸಂಶಯವೂ ಅವನ ಮನದಲ್ಲಿ ಉದ್ಭವಿಸಿತು. ಆದರೂ ಅವನು ಒಳ್ಳೇ ಕಡುಗಲಿಯಾದ್ದರಿಂದ ಎದೆಗುಂದದೆ, ದ್ವಾರವನ್ನು ದಾಟಿ ಕೋಟೆಯೊಳಗೆ ಸೇರಿದನು. ಹವಿಾರನ ಪೂರ್ವಜರು ದರಬಾರವನ್ನು ನೆರಿಸುತ್ತಿದ್ದ ಓಲಗ ಸಾಲೆಯಲ್ಲಿಯೇ ಇವನಿಗೋಸ್ಕರ ಆಸನವು ಮಂಡಿಸಿತ್ತು. ಮಾಲದೇವನೂ ಅವನ ಹಿರಿಮಗನಾದ ಬನಬೀರನೂ ಪ್ರೇಮಾತಿಶಯದಿಂದ ಹವಿಾರನನ್ನು ಸತ್ಕರಿಸಿದರು. ಹವಿಾರನು ತನ್ನ ಆಸನದಮೇಲೆ ಕುಳಿತಕೂಡಲೆ ಮಾಲದೇವನು ಮಗಳನ್ನು ಕರೆತಂದು, ಹವಿಾರನ ಬಲಗೈಯಲ್ಲಿ ಅವಳ ದಕ್ಷಿಣ ಹಸ್ತವನ್ನು ಇಟ್ಟನು. ಈ ಪಾಣಿಗ್ರಹಣಕಾಲದಲ್ಲಿ ನಡೆಯತಕ್ಕ ಮಂತ್ರೋಚ್ಚಾರಣಾದಿಕಾರ್ಯಗಳ್ಯಾವವೂ ನಡೆಯಲಿಲ್ಲ. ವಧುವಿನ ತಂದೆಯು ಮಗಳ ಹಸ್ತವನ್ನು ವರನ ಕೈಯಲ್ಲಿ ಕೊಟ್ಟು, ಅವರಿಬ್ಬರೂ ಹೊತ್ತವಸ್ತ್ರಗಳಿಗೆ ಗಂಟು ಹಾಕಿದನು. ಇಷ್ಟೇಸಂಸ್ಕಾರದಿಂದ ಲಗ್ನಕಾರ್ಯವು ಸಾಂಗವಾಯಿತು. ಈ ಅಪೂರ್ವ ಲಗ್ನ ವಿಧಿಯನ್ನು ನೋಡಿ ಹವಿಾರನು ತೀರ ಚಕಿತನಾದನು. ಇಷ್ಟೇ ಅಲ್ಲ, ಅವನ ಮನವೂ ಅಸ್ವಸ್ಥವಾಯಿತು ಆದರೆ ಮಾಡುತ್ತಾನೇನು? ಅಷ್ಟರಲ್ಲಿ ವಧುವಿನ ಕಡೆಯ ಪುರೋಹಿತನು ಹವಿಾರನಿಗೆ ತುಸು ಸಮಾಧಾನ ತಾಳಿರಿ, ಎಂದು ಹೇಳಿದ್ದರಿಂದ ಅವನು ತನ್ನ ಮನವನ್ನು ಶಾಂತಪಡಿಸಿಕೊಂಡು ಕ್ಷಣಹೊತ್ತು ಕುಳಿತನು. ಬಳಿಕ ಗೊತ್ತುಪಡಿಸಿದ ಕರುವಾಡದಲ್ಲಿ ಹವಿಾರನು ತನ್ನ ನೂತನಪತ್ನೀಸಮೇತ ಪ್ರವೇಶಮಾಡಿದನು. ಆ ಕಾಲದಲ್ಲಿ ಆ ವಧುವಿನಿಂದ ಪ್ರಕಟವಾದ ವಿನಯಾದಿ ಸದ್ಗುಣಗಳಿಂದ

ಅವನು ಸಂತುಷ್ಟನಾಗಲು, ಅವನ ಮೊದಲಿನ ದುರ್ಮುಖತ್ವವು ನಷ್ಟವಾಯಿತು. ಆಗಲಾ ರಾಜಕುಮಾರನು, ತಮ್ಮ ವಿವಾಹಕಾರ್ಯವು ಸಮಾರಂಭವಿಲ್ಲದೆ ಜರುಗಿದ ಬಗೆಯೇನೆಂದು ಅವಳಿಗೆ ಪ್ರಶ್ನಮಾಡಿದನು. ಅದಕ್ಕೆ ರಾಜಕನ್ನಿಕೆಯು ಪುನರ್ವಿವಾಹ ಕಾರ್ಯದಲ್ಲಿ ಮಾಂಗಲ್ಯ ಸಮಾರಂಭಗಳು ನಡೆಯುವದಿಲ್ಲ ಎಂದು ಹೇಳಿದಳು. ಆಗ ಹಮೀರನು ಇವಳು ಬಾಲವಿಧವೆಯೆಂದೂ ಇದರಿಂದ ಇವರ ತಂದೆಯು ನನ್ನನ್ನು ಮೋಸಗೊಳಿಸಿದನೆಂದೂ, ನನ್ನ ಮಂತ್ರಿಗಳು ಹೇಳಿದ ಮಾತಿಗೆ ನಾನು ಕಿವಿಗೊಡದೆ ಮೂರ್ಖನಾದೆನೆಂದೂ ಹಳಹಳಿಸಿದನು. ಆದರೆ ಆಗ ಬಾರದ ಕೆಲಸವು ಆದಬಳಿಕ ಹಳಹಳಿಸುವದರಿಂದ ಪ್ರಯೋಜನವಿಲ್ಲೆಂದು ಬಗೆದನು.

ಇತ್ತ ರಾಜಕುವರಿಯು ವಿಧವೆಯಾದ ನನ್ನೊಡನೆ ವಿವಾಹವಾಯಿತೆಂದು ಈತನಿಗೆ ದುಃಖವಾಗಿದೆಯೆಂಬದನ್ನು ಅವನ ಮುಖಮುದ್ರೆಯಿಂದ ಅರಿತು—ಎಲೈ, ಪ್ರಾಣದೊಡೆಯಾ ನಾನು ತೀರ ಚಿಕ್ಕವಳಿರುವಾಗಲೆ, ಭಾಟೀ ಜಾತಿಯುವನೊಬ್ಬ ರಜಪೂತ ಸಂಸ್ಥಾನಿಕನ ಕುಮಾರನೊಡನೆ ನನ್ನ ಮೊದಲನೇ ವಿವಾಹವಾಗಿತ್ತು. ಲಗ್ನವಾದ ಕೂಡಲೆ ಆ ಪತಿಯು ಕಾಳಗದಲ್ಲಿ ಮರಣಹೊಂದಿದನು. ಆದ್ದರಿಂದ ನಾನು ಬಾಲ್ಯದಲ್ಲಿಯೇ ವಿಧವೆಯಾದನು. ಈಗ ತಾವು ವಿಧವೆಯೊಡನೆ ಲಗ್ನವಾಯಿತೆಂದು ಮನದಲ್ಲಿ ಚಿಂತಿಸಬೇಡಿರಿ. ಈ ನನ್ನ ವಿವಾಹವು ತಮ್ಮ ನಷ್ಟ ವೈಭವವನ್ನು ಮರಳಿ ದೊರಕಿಸಿಕೊಡಲಿಕ್ಕೆ ಒಳಿತಾಗಿ ಸಹಾಯಮಾಡೀತು. ಎಂದು ವಿನಯದಿಂದಲೂ, ವಿಶ್ವಾಸದಿಂದಲೂ ಪತಿಯನ್ನು ಸಮಾಧಾನ ಪಡಿಸಿದಳು. ಆಕೆಯ ಸೌಂದರ್ಯ ವಿನಯಾದಿಗಳಿಂದ ಹಮೀರನು ತನಗಾದ ಮನಸ್ತಾಪವನ್ನು ನೀಗಿ ಆಕೆಯೊಡನೆ ಸುಖದಿಂದ ಸಂಸಾರಮಾಡಬೇಕೆಂದು ನಿರ್ಧರಿಸಿ ಹದಿನೈದು ದಿವಸಗಳ ವರೆಗೆ ಶ್ವಶೂರ ಗೃಹದಲ್ಲಿ ನಿಂತು ಪತ್ನಿಯೊಡನೆ ಕೇಳವಾಡಕ್ಕೆ ಬಂದನು. ಮುಂ

ದೆ ತುಸು ದಿವಸಗಳಲ್ಲಿಯೇ ಅವನಿಗೆ ಒಬ್ಬ ಮಗನು ಹುಟ್ಟಿದನು. ಅವನಿಗೆ ಖೇತಸಿಂಗನೆಂದು ನಾಮಕರಣಮಾಡಿದನು

ಹಮೀರನ ರಾಣಿಯು ಚಿತೋಡದ ಸೈನ್ಯದಲ್ಲಿ ಒಡಕು ಹುಟ್ಟಿಸಿ ಅದರೊಳಗಿನ ಪ್ರಮುಖ ಸರದಾರರನ್ನು ತನ್ನ ಪಕ್ಷಕ್ಕೆ ಒಲಿಸಿಕೊಂಡಳು. ತನ್ನ ಪತಿಗೆ ಆತನ ಮೊದಲಿನ ರಾಜಧಾನಿಯನ್ನು ದೊರಕಿಸಿಕೊಡಲಿಕ್ಕೆ ಹವಣಿಸುತ್ತಿದ್ದಳು. ಮುಂದೆ ತುಸು ದಿವಸಗಳಲ್ಲಿಯೇ ಮೇಲಿನ ರಾಜಕರಣವು ಪಕ್ವದೆಶೆಗೆ ಬಂದ ಸಂಧಿಯನ್ನು ಸಾಧಿಸಿ ತನ್ನ ಗಂಡನಿಗೆ ಸೇನಾಸಮೇತವಾಗಿ ಚಿತೋಡದ ಮೇಲೆ ಸಾಗಿ ಹೋಗಲಿಕ್ಕೆ ಸೂಚಿಸಿದಳು. ಅದರಂತೆ ಹಮೀರನು ಹೋಗಲು, ಆ ಕೋಟೆಯು ವಿಶೇಷ ಪ್ರಯಾಸವಿಲ್ಲದೆ ಕೈವಶವಾಯಿತು. ಯಾಕಂದರೆ ಮಾಲದೇವನು ಸ್ವತಃ ಕೋಟೆಯ ರಕ್ಷಣೆಗೆ ಅಲ್ಲಿ ಇದ್ದಿಲ್ಲ. ಆದನು ಮೇರ ಎಂಬ ಜನರ ಮೇಲೆ ದಂಡೆತ್ತಿ ಹೋಗಿದ್ದನು. ಉಳಿದ ಸೇನೆಯಲ್ಲಿ ಬಹು ಜನರು ಹಮೀರನ ಪಕ್ಷದವರಾಗಿದ್ದರು ಆದ್ದರಿಂದ ಚಿತೋಡದ ಕೋಟೆಯು ಕೈಸೇರಲಿಕ್ಕೆ ಹಮೀರನಿಗೆ ಶ್ರಮವಾಗಲಿಲ್ಲ. ಹಾಗೂ ಮಾವನಿಗೂ, ಅವನ ಮಿಕ್ಕ ಆಪ್ತರಿಷ್ಟರಿಗೂ ಗಾಯಗೊಳಿಸುವ ಪ್ರಸಂಗವೂ ಬರಲಿಲ್ಲ.

ಈ ಮೇರೆಗೆ ಹಮೀರನು ತನ್ನ ಪೂರ್ವಜರು ಕಳಕೊಂಡಿದ್ದ ಚಿತೋಡ ರಾಜಧಾನಿಯನ್ನು ಕೈವಶಮಾಡಿಕೊಂಡು ರಾಜಾಸನದಲ್ಲಿ ಕುಳಿತ ಸುದ್ದಿಯು ಮಾಲದೇವನಿಗೆ ತಿಳಿಯಲು, ಅವನು ಒತ್ತರದಿಂದ ಚಿತೋಡಕ್ಕೆ ಬಂದು ಕೋಟೆಯನ್ನು ಮರಳಿ ಕೈವಶಮಾಡಿಕೊಳ್ಳಲಿಕ್ಕೆ ಹೆಣಗಿದನು. ಆದರೆ ಹಮೀರನ ಶೌರ್ಯದ ಮುಂದೆ ಅವನದೇನೂ ಸಾಗಲಿಲ್ಲ. ಕಡೆಗೆ ತನ್ನನ್ನು ನೇಮಿಸಿದ ದಿಲ್ಲೀಶ್ವರನ ಬಳಿಗೆ ಹೋಗಿ ಯಾವತ್ತು ವೃತ್ತಾಂತವನ್ನು ಹೇಳಿದನು. ಆಗ ದಿಲ್ಲಿಯಲ್ಲಿ ಅಲ್ಲಾಉದ್ದೀನನ ತರುವಾಯ ಪಟ್ಟಕ್ಕೆ ಕುಳಿತ ಮಹಮ್ಮದನು ಆಳುತ್ತಿದ್ದನು. ಅವನು ಹಮೀರನ ಪುಂ

ಡಾಟದ ವರ್ತಮಾನದಿಂದ ಕ್ಷುಬ್ಧನಾಗಿ ಬಂದು ದೊಡ್ಡ ದಂಡಿನೊಡನೆ ಅವನ ಮೇಲೆ ಸಾಗಿಬಂದನು. ಇತ್ತ ಚಿತೋಡದ ಗದ್ದುಗೆಯ ಅಭಿಮಾನಿಗಳಾದ ಯಾವತ್ತು ರಜಪೂತ ಸಂಸ್ಥಾನಿಕರು, ಹಮೀರನ ಶೌರ್ಯಾದಿಗುಣಗಳಿಂದ ಪ್ರಸನ್ನರಾಗಿ ಅವನಿಗೆ ಮನಮುಟ್ಟಿ ನೆರವಾಗಲಿಕ್ಕೆ ಸಿದ್ಧರಾದರು. ಸ್ವಭಾವತಃ ಎಲ್ಲ ರಜಪೂತರು ಈ ಕಾಡು ಜನರಾದ ಮೊಗಲರ ಆಳಿಕೆಯೊಳಗಿಂದ ಪಾರಾಗುವ ಸಂಧಿಯನ್ನೇ ನೋಡುತ್ತಿದ್ದರು ಅಂಥ ಪ್ರಸಂಗವು ಈಗ ಅನಾಯಾಸವಾಗಿ ಕೈಗೂಡಿದ್ದರಿಂದಲೂ, ಹಮೀರನಂಥ ಶೂರನಾದ ಮುಂದಾಳು ದೊರಕಿದ್ದರಿಂದಲೂ ಇಮ್ಮಡಿ ಹುರಿದುಂಬಿ ತಮ್ಮ ತಮ್ಮ ದಂಡನ್ನೊಡಗೊಂಡು ಚಿತೋಡಕ್ಕೆ ಬಂದರು. ಈ ಬಗೆಯಿಂದ ಬಿಟ್ಟಿದ ಯಾವತ್ತು ಸೇನೆಯೊಂದಿಗೆ ಹಮೀರನು ಮುಹಮ್ಮದಖಿಲಜಿಯೊಡನೆ ಚಂಬಳಾ ನದಿಯ ದಂಡೆಯಲ್ಲಿ ಕಡು ಕದನವೆಸಗಿದನು. ಈ ಯುದ್ಧದಲ್ಲಿ ಮುಹಮ್ಮದನು ಸರ್ವಾಂಶದಿಂದ ಸೋತು, ಹಮೀರನ ಸೆರೆಯಾಳಾದನು. ಹಮೀರನು ಇವನನ್ನು ಚಿತೋಡದ ಕೋಟೆಯೊಳಗೆ ಮೂರು ತಿಂಗಳು ವರೆಗೆ ಸೆರೆಯಲ್ಲಿಟ್ಟನು. ಬಳಿಕ ಮುಹಮ್ಮದನು ಹಮೀರನಿಗೆ ಅಜಮೀರ, ರಣಥಂಬೋರ, ನಾಗೋರ ಇಸೋಪ್ಪುರ ಪ್ರಾಂತಗಳನ್ನು ಐವತ್ತುಲಕ್ಷ ರೂಪಾಯಿಗಳನ್ನೂ, ನೂರು ಆನೆಗಳನ್ನೂ ಕೊಟ್ಟು ಬಿಡುಗಡೆ ಹೊಂದಿದನು ಮುಹಮ್ಮದನು ದಿಲ್ಲಿಗೆ ಹೋಗುವಾಗ ಹಮೀರನು ಅವನನ್ನು ಕುರಿತು-ದಿಲ್ಲೀಶ್ವರಾ, ನೀನು ಸ್ವತಃ ಇನ್ನು ಮೇಲೆ ಇಂಥ ದಾಳಿಗಳನ್ನು ರಾಜಪುತ್ರರ ಮೇಲೆ ಮಾಡಿ ಶಾಂತತಾಪ್ರಿಯರಾದ ಹಿಂದೂ ಸಂಸ್ಥಾನಿಕರನ್ನು ನಿರರ್ಥಕವಾಗಿ ಪ್ರಾಣಹಾನಿ ಅರ್ಥಹಾನಿಗಳಿಗೆ ಗುರಿಮಾಡಕೂಡದು ಇಷ್ಟೇ ಅಲ್ಲ. ನಮ್ಮ ಮೇಲೆ ಅನ್ಯರ್‍ಯಾರಾದರೂ ದಾಳೀಮಾಡಿದರೆ, ನೀನು ನಮಗೆ ಸಹಾಯಕನಾಗಿ ಬರಲಿಕ್ಕೆಬೇಕು. ಎಂದು ಕರಾರು ಕಾಗದವನ್ನು ಬರಕೊಡಲಿಕ್ಕೆ ಬೇಕೆಂದು ಹೇಳಿದನು. ಅದಕ್ಕೆ ನಿರ್ವಾಹವಿಲ್ಲದೆ ಮುಹಮ್ಮದನು ಒಪ್ಪಿಕೊಂಡು ಅದರಂತೆ ಕಾಗದ ಬರಕೊಟ್ಟನು.

ಹಮೀರನಿಗೆ, ರಣಭೀರ, ಬನಬೀರ ಎಂಬವರಿಬ್ಬರು ಬೀಗರಿದ್ದರು ಬನಬೀರನ ಉಲ್ಲೇಖವು ಹಿಂದೆ ಬಂದಿರುವದು. ಇವರಿಬ್ಬರು ಮಾಲದೇವ ರಾಜನ ಮಕ್ಕಳು. ಮುಹಮ್ಮದಖಿಲಜಿಯು ಸಂಪೂರ್ಣ ಪಕ್ಷಪಾತಿಗಳು. ರಣಭೀರನು ಮೇಲೆ ವರ್ಣಿಸಿದ ಕಾಳಗದಲ್ಲಿ ಮಡಿದನು. ಬನಬೀರನು ಮುಹಮ್ಮದನೊಡನೆ ಹಮೀರನ ಸೆರೆಯಲ್ಲಿ ಸಿಕ್ಕಿದ್ದನು. ಹಮೀರನು ಮುಂದೆ ಅವನನ್ನು ಮುಕ್ತಮಾಡಿ ನಿಮಚ, ಜೀರಣ, ರತನಪುರ ಎಂಬ ಮಹಾಲುಗಳನ್ನು ಅವನಿಗೆ ಉಂಬಳಿಯಾಗಿ ಕೊಟ್ಟು—ಎಲೈ ಬನಬೀರನೆ, ನನ್ನ ನಿನ್ನ ಆಪ್ತತ್ವವಂತೂ ಸರಿಯೇ ಸರಿ. ಅದನ್ನೊತ್ತಟ್ಟಿಗಿಟ್ಟರೂ ನಾವೂ ನೀವೂ ಜಾತಿಬಂಧವರಲ್ಲವೇ! ಆದ್ದರಿಂದ ಇನ್ನು ಮೇಲೆ ಪರಧರ್ಮಿಗಳ ಸಹವಾಸಮಾಡಿ ಸ್ವಜನರನ್ನೂ, ಸ್ವಧರ್ಮವನ್ನೂ ನಾಶಗೊಳಿಸುವ ಕಾರ್ಯಕ್ಕೆ ಪ್ರವೃತ್ತನಾಗಬೇಡ, ಇದರಿಂದ ನಿನಗೆ ದೇಶದ್ರೋಹ, ಧರ್ಮದ್ರೋಹ, ಮುಂತಾದ ಪಂಚಮಹಾಪಾತಕಗಳು ತಪ್ಪುವವು. ಇಗೋ ನಾನು ಕೊಟ್ಟ ಈ ಸಂಸ್ಥಾನಗಳನ್ನು ಆಳುತ್ತ ಸ್ವಧರ್ಮ, ಸ್ವಜಾತಿಗಳ ಏಳ್ಗೆಯನ್ನು ಚಿಂತಿಸುತ್ತ ಸುಖರೂಪ ಇರು ಎಂದು ಹೇಳಿದನು.

ಈ ಮೇರೆಗೆ ಜಯಶಾಲಿಯಾದ ಹಮೀರನು ರಾಜಸ್ಥಾನದೊಳಗಿನ ಯಾವತ್ತು ಜನರಿಗೆ ಪ್ರಿಯನಾದನೆಂಬದೇನು ಅರಿದಲ್ಲ. ಯಾವತ್ತು ಚಿಕ್ಕದೊಡ್ಡ ಸಂಸ್ಥಾನಿಕರು ಇವನಿಗೆ ಸಂತೋಷದಿಂದಲೂ ಅಭಿಮಾನದಿಂದಲೂ ಪ್ರತ್ಯಕ್ಷವಾಗಿ ಇಲ್ಲವೆ ಅಪ್ರತ್ಯಕ್ಷವಾಗಿ ಕರಭಾರವನ್ನು ಒಪ್ಪಿಸಿದರು. ಬುಂದಿ, ಗ್ವಾಲೇರ, ಚಂದೋರಿ, ರಾಯಸಹನ, ಸಿಕ್ರಿ, ಕಾಲ್ಪಿ, ಅಬ್ಬೂ ಮುಂತಾದ ಸಂಸ್ಥಾನಿಕರು ಹಮೀರನಿಗೆ ಗೆಳೆಯರಾದರು. ಜಯಪುರ, ಜೋಧಪುರದ ಠಾಕೂರರು ಮಾಂಡಳಿಕರಾದರು.

ಮೊಗಲರ ಕೈಸೇರುವ ವರೆಗೆ ಮೇವಾಡದ ರಾಜ್ಯವಿಸ್ತಾರವು ಹೆಚ್ಚು ಇತ್ತು. ಬಳಗಡೆಯಲ್ಲಿ ಅಂದರೆ ಮೊಗ

ಲರ ಆಳಿಯಿಂದ ಇನ್ನೂರು ವರುಷಗಳಲ್ಲಿ ಈ ರಾಜ್ಯಮರ್ಯಾದೆಯು ಆಕುಂಚಿತವಾಗುತ್ತ ನಡೆದಿತ್ತು. ಹಮ್ಮೀರನು ಪಟ್ಟವೇರಿದ ಬಳಿಕ ಈ ರಾಜ್ಯವಿಸ್ತಾರವು ಬೆಳೆಯುತ್ತ ಬೆಳೆಯುತ್ತ ತನ್ನ ಮೊದಲಿನ ಮರ್ಯಾದೆಯನ್ನು ಕೂಡ ಮೀರತೊಡಗಿತು. ಹಮ್ಮೀರನು ವಿಶ್ವಪ್ರಯತ್ನದಿಂದ ತನ್ನ ರಾಜ್ಯವನ್ನು ಬೆಳೆಸತೊಡಗಿದನು. ಆಗ ಕಾಲವೂ ಅನುಕೂಲವಾಗಿತ್ತು. ಖಿಲಜೀ ಸೂರ, ಲೋದಿ ಮುಂತಾದ ಮನೆತನಗಳು, ದಿಲ್ಲಿಯ ಪಟ್ಟಕ್ಕೋಸ್ಕರ ತಮ್ಮತಮ್ಮೊಳಗೆ ಕದನ ಮಾಡುತ್ತಿದ್ದವು. ಈ ಸಂಧಿಯನ್ನು ಸಾಧಿಸಿ ಹಮ್ಮೀರನು ದಿಲ್ಲಿ, ಸೌರಾಷ್ಟ್ರ, ಮಾಳವಾ ಮುಂತಾದ ಪ್ರಾಂತಗಳನ್ನು ಒಳನುಗ್ಗಿ ಕೈವಶಮಾಡಿಕೊಂಡನು. ಈ ದಾಳಿಯಿಂದ ಇವನಿಗೆ ಅಪರಿಮಿತ ಸಂಪತ್ತಿಯೂ ಪ್ರಾಪ್ತವಾಯಿತು. ಹಮ್ಮೀರನ ಕಾಲದಲ್ಲಾದ ಭವ್ಯಮಂದಿರಗಳೂ, ಆ ಮಂದಿರಗಳಲ್ಲಿ ತೋರಿಬರುವ ಕಲಾಕೌಶಲ್ಯವೂ, ಈ ಅಪಾರ ಸಂಪತ್ತಿಯ ಸಾಕ್ಷಿಗಳಾಗಿವೆ.

CONSCIENCE.

ನಿರ್ಣಯ-ಶಕ್ತಿಯು.

(ಬರೆದು ಬಂದದ್ದು)

ಅವಸರವಾಗಲಿ ಉತಾವಳಿಯಾಗಲಿ ನ್ಯಾಯದ ಕೆಲಸದಲ್ಲಿ ಉಪಯೋಗದವಲ್ಲ. ಅವಸರವೇ ಏಕದೇಶೀಯ ವಿಚಾರಕ್ಕೆ ಸಬಲ ಕಾರಣವು. ಒಂದೊಂದು ಪ್ರಸಂಗದಲ್ಲಿ ಯಾವ ಬಾಬಿನ ಬಗ್ಗೆ ಅದು ತೀರ ನಿರರ್ಥಕವೆಂದು ಬಗೆದು ಬಿಡುತ್ತೇವೆಯೋ ಅದೇ ಮುಂದೆ ಬಾಧಕವಾಗಿ ಕೆಲಸವು ಕೆಡುತ್ತದೆ. ಸತ್ಯವು ಸತ್ತು ಹೋಗುತ್ತದೆ. ಸುಳ್ಳುತಿಳುವಳಿಕೆಯಿಂದ ಹೀಗಾಯಿತೆಂದು ಹಿಂದಿನಿಂದ ಪಶ್ಚಾತ್ತಾಪಪಟ್ಟರೆ ತಮ್ಮಲ್ಲಿರುವ ನಿರ್ಣಯಶಕ್ತಿಯು ಇನ್ನೂ ಪರಿಪಕ್ವ ಸ್ಥಿತಿಯಲ್ಲಿ ಬಂದಿಲ್ಲವೆಂದು ಹೇಳಿದ ಹಾಗಾಗುತ್ತದೆ.

ಸಾಹಚರ್ಯ ಸಂಬಂಧವು ನ್ಯಾಯದಲ್ಲಿಯೂ ಇರುತ್ತದೆ. ಒಂದು ನಿರ್ಣಯಕ್ಕೆ ಅನೇಕ ಉಪನಿರ್ಣಯಗಳು ನಿಕಟವಾಗಿ ಇರುವವು. ಅವುಗಳಲ್ಲಿ ಎಲ್ಲವನ್ನೂ ವಿಚಾರಿಸಲೇಬೇಕಾದ ಪ್ರಸಂಗದಲ್ಲಿ ಉತಾವಳಿಯಿಂದ ಬಿಟ್ಟುಕೊಟ್ಟರೆ ಕನ್ನಡ ೨ನೇ ವರ್ಗದ ಕ್ರಮಿಕ ಪುಸ್ತಕದೊಳಗಿನ 'ತಿಳಿಗೇಡಿತನದ ಸಿಟ್ಟು' ಎಂಬ ಕಥೆಯ ಹಾಡು ಒದಗುತ್ತದೆ. ಮುಂಗಲಿಯು ಹಾವನ್ನು ತುಂಡು ತುಂಡು ಮಾಡಿ ಚೆಲ್ಲಿ ಕೂಸನ್ನು ಕಾಪಾಡಿದ್ದರೂ ಮುಂಗಲಿಯ ಬಾಯಿಗೆ ಮೆತ್ತಿದ ನೆತ್ತರವನ್ನು ನೋಡಿದ ಕೂಡಲೇ ತುಂಬಿದ ಕೊಡವನ್ನು ಚೆಲ್ಲಿ ಅದನ್ನು ಕೊಂದು ಬಿಟ್ಟದ್ದು ಎಲ್ಲವ್ವನ ಅವಿಚಾರದ ತ್ಯೇಷವೇ ಸರಿ. ಪ್ರತಿಯೊಂದು ಕೆಲಸದಲ್ಲಿ ಗಡಬಡಿಯನ್ನು ಮಾಡದೆ ವ್ಯಾಪಕ ವಿಚಾರ ಮಾಡಿ ನಿರ್ಣಯ ಮಾಡಿದರೆ ಸತ್ಯವು ಹೊರಬೀಳುವದು. "सहसा विदधीत न क्रियामविवेकः परमापदां पदम्" ಎಂಬ ವಚನವು ಸುಳ್ಳಲ್ಲ. ನಿರರ್ಥಕವಾದ ತ್ವರೆಯಿಂದ ಕೆಲಸವು ಹಸಗೆಟ್ಟು ಹೋಗುವದು. ಒಮ್ಮೆ ಈ ಬಗೆಯ ರೂಢಿಯು (ಚಟವು) ಹತ್ತಿತೆಂದರೆ ಮುಂದೆ ಅದನ್ನು ಬಿಡುವದು ಅಸಾಧ್ಯವಾಗುತ್ತದೆ. ಆತುರದ ಚಟದಿಂದಾಗಲಿ ವಿಶಿಷ್ಟ ಮನೋವೃತ್ತಿಗಳ ಪ್ರಾಬಲ್ಯದಿಂದಾಗಲಿ ಮನಸ್ಸಿನೊಳಗಿನ ವಿಚಾರಣೀಯವಾದ ಕೆಲವು ಅಂಶಗಳು ಮರೆದು ಹೋಗುವವು. ಆದುದರಿಂದ ನಿರ್ಣಯಶಕ್ತಿಯ ಇಮಾರತನ್ನು ಶಾಂತಪನ ಹಾಗೂ ವ್ಯಾಪಕ ವಿಚಾರ ಇವುಗಳ ಅಸ್ತಿವಾರ (ಪಾಯಾ)ದ ಮೇಲೆ ಕಟ್ಟಬೇಕು.

(ಕ) ಸಾಧಕ ಬಾಧಕ ಸಂಗತಿಗಳಲ್ಲಿ ಮಹತ್ವಾಮಹತ್ವತೆಯ ಕಡೆಗೆ ಲಕ್ಷ್ಯ—ಇದೂ ನಿರ್ಣಯಶಕ್ತಿಯ ಪೋಷಕ ಧರ್ಮಗಳಲ್ಲಿ ಒಂದಾಗಿರುತ್ತದೆ. ಸಾಧಕ ಬಾಧಕ ಪ್ರಮಾಣಗಳಲ್ಲಿ ಯಾವದರ ಯೋಗ್ಯತೆಯು ಎಷ್ಟು? ವಿಚಾರಮಂದಿರದಲ್ಲಿ ಅವಕ್ಕೆ ಯಾವ ಸ್ಥಳವು ತಕ್ಕದು, ಇದನ್ನು ತೂಗಿ ನೋಡತಕ್ಕದ್ದು. ಈ ಬಗೆಯ ಪ್ರಮಾಣಗಳ ಮ

ಹೆಚ್ಚು ಮಹತ್ವದ ಮೇಲೆಯೇ ನಿರ್ಣಯದ ಪರ್ಯವಸಾನವಿರುವುದು. ಅಯೋಗ್ಯವಾದ ಅಂದರೆ ಕ್ಷುದ್ರ ಪ್ರಮಾಣಕ್ಕೆ ಹೆಚ್ಚು ಮಹತಿಯನ್ನು ಕೊಟ್ಟರೆ ನಿರ್ಣಯದ ಬೆಲೆಯು ಕಡಿಮೆಯಾಗುವುದು. ಆದುದರಿಂದ ಅನುಭವದಿಂದಲೂ ಸೂಕ್ಷ್ಮ ದೃಷ್ಟಿಯಿಂದಲೂ ಸಾಧಕ ಬಾಧಕ ಪ್ರಮಾಣಗಳ ಬೆಲೆಯನ್ನು ಗೊತ್ತು ಹಿಡಿದು ನಿರ್ಣಯಶಕ್ತಿಯ ವಿನಿಯೋಗದ ಕಾಲಕ್ಕೆ ಉಪಯೋಗಿಸಿಕೊಳ್ಳಬೇಕು. ಇಲ್ಲಿಯವರೆಗೆ ಮಾನವೀಯ ಸಾರಾಸಾರ ಶಕ್ತಿಯ ಸ್ವರೂಪವೂ ಅದಕ್ಕೆ ಅನುಕೂಲ್ಯವಾದ ಸಂಗತಿಗಳೂ ಅದರಿಂದಾಗುವ ಲಾಭಗಳೂ ಸ್ವಲ್ಪದರಲ್ಲಿಯೇ ಹೇಳಲ್ಪಟ್ಟವು. ಸುಜ್ಞರು ಈ ನಿರ್ಣಯಶಕ್ತಿಯ ಉಪಯೋಗವನ್ನು ಮಾಡಿಕೊಂಡು ಅದರ ಅಜ್ಞಾಧಾರಕರಾಗಿ ನಡೆದರೆ ನಿಜವಾಗಿ ಸೌಖ್ಯವೂ ಶಾಂತಿಯೂ ದೊರೆಯುವವು.

೧೦ ವಿವೇಕ ಬುದ್ಧಿಗೆ ಅನನುಕೂಲವಾದ ಕೆಲವು ವಿಚಾರಗಳು. ವಿವೇಕ ಬುದ್ಧಿಯನ್ನು ಮೂಲೆಗೊತ್ತಿ ತಮ್ಮ ಅಧಿಕಾರವನ್ನು ಸ್ಥಾಪಿಸುವ ವೈರಿಯು ವಿಕಾರವೇ! ವಿಕಾರವು ಸಾತ್ವಿಕ ಹಾಗೂ ತಾಮಸವೆಂದು ಎರಡು ತೆರನಾಗಿ ಉಂಟು. ಶರೀರ ರಚನೆಯಲ್ಲಿ ಇರುವ ಘಟಕಗಳೇ ಮನಸ್ಸಿನಲ್ಲಿಯೂ ಇರುವವು ಇವುಗಳ ಸಹಜವಾದ ಪರಿಣಾಮಗಳೇ ವಿಕಾರಗಳೆಂದು ಹೇಳಲ್ಪಡುವವು. ಎಲ್ಲ ಪ್ರಾಣಿಗಳ ಶರೀರ ಹಾಗೂ ಮನಸ್ಸುಗಳ ಘಟಕದ್ರವ್ಯಗಳು ಸರಾಸರಿಯಾಗಿ ಒಂದೇ ಬಗೆಯಿಂದ ಇರುವದರಿಂದ ಅವುಗಳ ಅನುಷಂಗಿಕಗಳಾದ ವಿಕಾರಗಳು ಎಲ್ಲರಲ್ಲಿಯೂ ಸ್ವಾಭಾವಿಕವಾಗಿ ಅಂಕುರಿಸುತ್ತವೆ. ಆದರೆ ಮತಭೇದವಿಷ್ಟೇ! ಆವಿಕಾರಗಳು ಶ್ಲಾಘ್ಯವಾಗಿರಬಹುದು. ಇಲ್ಲವೆ ಅಶ್ಲಾಘ್ಯವಾಗಿರಬಹುದು! ಸಾರ್ವತ್ರಿಕ ಅನುಭವದಿಂದ ನೋಡಿದರೆ ಮನುಷ್ಯ ಪ್ರಾಣಿಗಳ ಕಿಂಬಹುನಾ ಸಕಲ ಪ್ರಾಣಿಗಳಲ್ಲಿಯೂ ಈ ವಿಕಾರಗಳು ಹೆಚ್ಚು ಕಡಿಮೆ ಪ್ರಮಾಣದಿಂದ ಅನಾದಿಕಾಲದಿಂದಲೂ ಗೋಚರವಾಗುತ್ತಲಿವೆ, 'ವ್ಯಕ್ತಿಗ

ಳಷ್ಟು ಪ್ರಕೃತಿ' ಎಂಬಂತೆ ವ್ಯಕ್ತಿ ಪರತ್ವದಿಂದ ವಿಕಾರಗಳಲ್ಲಿಯು ಹೆಚ್ಚು ಕಡಿಮೆ ಮಾತ್ರ ಉಂಟು. ಆನುವಂಶಿಕ ಸಂಸ್ಕಾರಗಳಿಂದ ಭಿನ್ನ ಭಿನ್ನ ವ್ಯಕ್ತಿಗಳ ಸ್ವಭಾವವು ಬೇರೆ ಬೇರೆ ಎಂದು ಕಾಣುವದು. ಯಾಕೆಂದರೆ ಒಬ್ಬನು ಧಿಟ್ಟನಾದರೆ ಇನ್ನೊಬ್ಬನು ಪುಕ್ಕನು; ಒಬ್ಬನು ದಯಾಳುವಿದ್ದರೆ ಮತ್ತೊಬ್ಬನು ಕ್ರೂರನು; ಒಬ್ಬನು ಕೋಪಿ ಇದ್ದರೆ ಇನ್ನೊಬ್ಬನು ಸಮಾಧಾನಿ, 'ಅ' ನಿಗೆ ಒಂದು ಸೇರಿದರೆ 'ಬ' ನಿಗೆ ಮತ್ತೊಂದು 'ಕ್ಷ' ನಿಗೆ ಇನ್ನೊಂದು ಹೀಗೆ ಆಗುವದು. ಸಾರಾಂಶ ಬಾಹ್ಯ ಉಪಾಧಿಗಳಿಂದಲೂ, ಸ್ವಭಾವ ಸಿದ್ಧವಾದ ಭೇದ ಶೀಲತೆಯಿಂದಲೂ ಸ್ವಭಾವದಲ್ಲಿ ಭಿನ್ನತ್ವವು ತೋರುತ್ತದೆ. ಸ್ವಭಾವವನ್ನು ಬದಲಿಸಲಿಕ್ಕೆ ವಿಕಾರವೃತ್ತಿಗಳೇ ಕಾರಣವೆಂದೂ, ವಿಕಾರಭೇದದಿಂದ ಸುಸ್ವಭಾವ—ದುಸ್ವಭಾವಗಳೂ ಸಂಘಟಿಸುತ್ತವೆಂದೂ ನಿರ್ಣೀತವಾಯಿತು. ಆದರೆ ತಾಮಸ ವಿಕಾರಗಳು ಆವವು? ಸಾತ್ವಿಕ ವಿಕಾರಗಳು ಯಾವವು! ಇವುಗಳನ್ನು ನಿಶ್ಚಯಿಸುವುದು ಕಠಿಣಸಾಧ್ಯವೇ ಸರಿ. ಯಾಕೆಂದರೆ ಯಾವದು ಸಾತ್ವಿಕವೆಂದು ನಾವು ತಿಳಿಯುವೆಯೋ ಅದೇ ಮುಂದೆ ಹೆಚ್ಚಿಗೆಯಾದರೆ ತಾಮಸ ವರ್ಗದಲ್ಲಿ ಬರುವದು. ವಿಕಾರಗಳ ಹಿತಾಹಿತದ ಮೇಲೆ ಅವುಗಳ ಸುಷ್ಟು ದುಷ್ಟಗಳು ಅವಲಂಬಿಸಿರುತ್ತವೆ. ದುರ್ವಿಕಾರಗಳ ಪರಿಣಾಮವು ಸಾತ್ವಿಕ ವಿಕಾರಗಳ ಪರಿಣಾಮವೂ ಕ್ರಮವಾಗಿ ದುಃಖಕ್ಕೂ ಸುಖಕ್ಕೂ ಕಾರಣವಾಗಿರುತ್ತವೆ. ನಳ, ನಹುಷ, ರುಕ್ಮಾಂಗದ, ಹರಿಶ್ಚಂದ್ರ ಮುಂತಾದ ಸತ್ಯಸಂಧರ ಚರಿತ್ರಗಳನ್ನು ಓದುವದರಿಂದ ವಂದನೀಯವಾದ ಉದಾತ್ತವಿಕಾರಗಳು ಮೂರ್ತಿಮತ್ತಾಗಿ ನಮ್ಮ ಕಣ್ಣೆದುರಿಗೆ ಬಂದು ನಿಲ್ಲುತ್ತವೆ. ಸಾತ್ವಿಕ ವಿಕಾರಗಳ ಫಲವು ಸುಖಾವಹವೆಂದು ಅನುಭವಕ್ಕೆ ಬಂದದ್ದೇ. ಇದರಂತೆ ನಿಂದ್ಯ ವಿಕಾರಗಳ ಪರಿಣಾಮವು ನಿಂದ್ಯವಾದದ್ದೆಂದು ಬೇರೆ ಹೇಳಲಿಕ್ಕೆ ಬೇಡ. ಯಾಕೆಂದರೆ, ಇತಿಹಾಸಜ್ಞರಾದ ವಾಚಕರಿಗೆ ಅನುಭವಕ್ಕೆ ಬಂದ ಸಂಗತಿಯಾಗಿದೆ. ಸುಖಾಪೇಕ್ಷಿಗಳಾದ ಪ್ರತಿಯೊ



ಇವೆರಡು ವರ್ತುಲಗಳನ್ನು ಒಂದರಮೇಲೊಂದು ಕೇಂ
ದ್ರ ಬಿಂದುವು ಒಂದಾಗುವಂತೆ ಇಡಬೇಕು. ಇದೇ
ಪ್ರಮಾಣದಿಂದ ಕಾರ್ಡಬೋರ್ಡಿನ ಮೇಲೂ ವರ್ತುಲ
ತೆಗೆದು ಕೊಳ್ಳಬೇಕು.

ಳೆಷ್ಟು ಪ್ರಕೃತಿ' ಎಂಬಂತೆ ವ್ಯಕ್ತಿ ಪರತ್ವದಿಂದ ವಿಕಾರಗಳಲ್ಲಿಯು ಹೆಚ್ಚು ಕಡಿಮೆ ಮಾತ್ರ ಉಂಟು. ಆನುವಂಶಿಕ ಸಂಸ್ಕಾರಗಳಿಂದ ಭಿನ್ನ ಭಿನ್ನ ವ್ಯಕ್ತಿಗಳ ಸ್ವಭಾವವು ಬೇರೆ ಬೇರೆ ಎಂದು ಕಾಣುವುದು. ಯಾಕಂದರೆ ಒಬ್ಬನು ಧಿಟ್ಟನಾದರೆ ಇನ್ನೊಬ್ಬನು ಪುಕ್ಕನು; ಒಬ್ಬನು ದಯಾಲುವಿದ್ದರೆ ಮತ್ತೊಬ್ಬನು ಕ್ರೂರನು; ಒಬ್ಬನು ಕೋಪಿ ಇದ್ದರೆ ಇನ್ನೊಬ್ಬನು ಸಮಾಧಾನಿ, 'ಅ' ನಿಗೆ ಒಂದು ಸೇರಿದರೆ 'ಬ' ನಿಗೆ ಮತ್ತೊಂದು 'ಕ್ಷ' ನಿಗೆ ಇನ್ನೊಂದು ಹೀಗೆ ಆಗುವದು. ಸಾರಾಂಶ ಬಾಹ್ಯ ಉಪಾಧಿಗಳಿಂದಲೂ, ಸ್ವಭಾವ ಸಿದ್ಧವಾದ ಭೇದ ಶೀಲತೆಯಿಂದಲೂ ಸ್ವಭಾವದಲ್ಲಿ ಭಿನ್ನತ್ವವು ತೋಚುತ್ತದೆ. ಸ್ವಭಾವವನ್ನು ಬದಲಿಸಲಿಕ್ಕೆ ವಿಕಾರವೃತ್ತಿಗಳೇ ಕಾರಣವೆಂದೂ ವಿಕಾರಭೇದದಿಂದ ಸುಸ್ವಭಾವ—ದುಸ್ವಭಾವಗಳೂ ಸಂಘಟಿಸುತ್ತವೆಂದೂ ನಿರ್ಣೀತವಾಯಿತು. ಆದರೆ ತಾಮಸ ವಿಕಾರಗಳು ಆವವು? ಸಾತ್ವಿಕ ವಿಕಾರಗಳು ಯಾವವು? ಇವುಗಳನ್ನು ನಿಶ್ಚಯಿಸುವುದು ಕಠಿಣಸಾಧ್ಯವೇ ಸರಿ. ಯಾಕಂದರೆ ಯಾವದು ಸಾತ್ವಿಕವೆಂದು ನಾವು ತಿಳಿಯುವೆಯೋ ಅದೇ ಮುಂದೆ ಹೆಚ್ಚಿಗೆಯಾದರೆ ತಾಮಸ ವರ್ಗದಲ್ಲಿ ಬರುವದು. ವಿಕಾರಗಳ ಹಿತಾಹಿತದ ಮೇಲೆ ಅವುಗಳ ಸುಷ್ಟು ದುಷ್ಟಗಳು ಅವಲಂಬಿಸಿರುತ್ತವೆ. ದುರ್ವಿಕಾರಗಳ ಪರಿಣಾಮವು ಸಾತ್ವಿಕ ವಿಕಾರಗಳ ಪರಿಣಾಮವೂ ಕ್ರಮವಾಗಿ ದುಃಖಕ್ಕೂ ಸುಖಕ್ಕೂ ಕಾರಣವಾಗಿರುತ್ತವೆ. ನಳ, ನಹುಷ, ರುಕ್ಮಾಂಗದ, ಹರಿಶ್ಚಂದ್ರ ಮುಂತಾದ ಸತ್ಯ ಸಂಧರ ಚರಿತ್ರಗಳನ್ನು ಓದುವದರಿಂದ ವಂದನೀಯವಾದ ಉದಾತ್ತವಿಕಾರಗಳು ಮೂರ್ತಿಮತ್ತಾಗಿ ನಮ್ಮ ಕಣ್ಣೆದುರಿಗೆ ಬಂದು ನಿಲ್ಲುತ್ತವೆ. ಸಾತ್ವಿಕ ವಿಕಾರಗಳ ಫಲವು ಸುಖಾವಹವೆಂದು ಅನುಭವಕ್ಕೆ ಬಂದದ್ದೇ. ಇದರಂತೆ ನಿಂದ್ಯ ವಿಕಾರಗಳ ಪರಿಣಾಮವು ನಿಂದ್ಯವಾದದ್ದೆಂದು ಬೇರೆ ಹೇಳಲಿಕ್ಕೆ ಬೇಡ. ಯಾಕಂದರೆ, ಇತಿಹಾಸಜ್ಞರಾದ ವಾಚಕರಿಗೆ ಅನುಭವಕ್ಕೆ ಬಂದ ಸಂಗತಿಯಾಗಿದೆ. ಸುಖಾಪೇಕ್ಷಿಗಳಾದ ಪ್ರತಿಯೊ



ಇವೆರಡು ವರ್ತುಲಗಳನ್ನು ಒಂದರಮೇಲೊಂದು ಕೇಂ
ದ್ರ ಬಿಂದುವು ಒಂದಾಗುವಂತೆ ಇಡಬೇಕು. ಇದೇ
ಪ್ರಮಾಣದಿಂದ ಕಾರ್ಡಬೋರ್ಡಿನ ಮೇಲೂ ವರ್ತುಲ
ತೆಗೆದು ಕೊಳ್ಳಬೇಕು.



ಒಂದು ವರ್ಷದಲ್ಲಿ ಚಾಂದ್ರಮಾಸ ೧೨।೧೧.೦...

ಬ್ಬರು ಸದ್ವಿಕಾರಗಳ ಉದಯುವನ್ನೂ ದುರ್ವಿಕಾರಗಳ
ನಿರ್ಮೂಲೋತ್ಪಾಟನೆಯುನ್ನೂ ಮಾಡಲಿಕ್ಕೆ ಹವಣಿಸಬೇಕು.
ಪ್ರಪಂಚದಲ್ಲಿ ಸಾತ್ವಿಕ ವಿಕಾರಗಳ ಸಾಮ್ರಾಜ್ಯವಾಗಿ, ನೀ
ಚ ವಿಕಾರಗಳ ನಾಶವಾದ ದಿವಸವೇ ಸುದಿವಸವೆಂದು ಹೇಳ
ಬೇಕು. ಜಗತ್ತು ನಾನಾವಿಕಾರಗಳಿಂದ ತುಂಬಿರುತ್ತದೆ.
ಆ ವಿಕಾರಗಳನ್ನು ದೂರ ಮಾಡುವದೇ ಮನುಷ್ಯಕೋಟಿ
ಯ ಮುಖ್ಯ ಕರ್ತವ್ಯವು! ಸುಖದ ಮಾರ್ಗವು!! ಕಾನೂ
ನುಗಳನ್ನು ಮಾಡಿದವರ ಉದ್ದೇಶವಾದರೂ ದುಷ್ಟ ವಿಕಾ
ರಗಳ ಹ್ರಾಸಕ್ಕೋಸ್ಕರವಾಗಿಯೇ ಇರುವದಲ್ಲದೆ, ತಾವು
ಷ ವೃತ್ತಿಯುವರನ್ನು ಹಾದಿಗೆ ತರುವದಕ್ಕಾಗಿ ಅವರಲ್ಲಿ ಸು
ವಿಚಾರಗಳ ಉದಯುವನ್ನೂ ವೃದ್ಧಿಯುನ್ನೂ ಮಾಡುವದೇ
ಇರುತ್ತದೆ. ದುಷ್ಟ ವಿಕಾರಗಳಲ್ಲಿ ಮುಖ್ಯವಾಗಿ ಕಾಮ
ಕ್ರೋಧಾದಿ ಷಡ್ವರ್ಗಗಳನ್ನು ಎಣಿಸುತ್ತಾರೆ. ಈ ದುಷ್ಟ
ವಿಕಾರಗಳು ವಿವೇಕ ಶಕ್ತಿಯನ್ನು ಮರೆ ಮಾಡಿ ಮನಸ್ಸನ್ನು
ಬೇಕಾದ ಕಡೆಗೆ ಎಳಕೊಂಡು ಮನುಷ್ಯನನ್ನು ವ್ಯಸನಾಸಕ್ತ
ನನ್ನಾಗಿ ಮಾಡುತ್ತವೆ. ಕಾರಣಾ ಪ್ರಾಜ್ಞರು ಅವುಗಳ ಅ
ಧೀನಕ್ಕೊಳಗಾಗದೆ ಅವುಗಳನ್ನು ತಮ್ಮಾಧೀನ ಮಾಡಿಕೊ
ಳ್ಳತಕ್ಕದ್ದು. ಇಲ್ಲದಿದ್ದರೆ, ನಿರ್ಣಯುಶಕ್ತಿಯು ಕೆಲಸಕ್ಕೆ
ಬಾರದಂತಾಗುವದು.

FIGURE TO SHOW KSHAYA & ADHIKA MONTHS.

ಕ್ಷಯಾಧಿಮಾಸ ಜ್ಞಾಪಕ ಪರಿಲೇಖವು.

ಈ ಚಿತ್ರದಲ್ಲಿ ಕಾರ್ಡಬೋರ್ಡಿನ ಮೇಲೆ ಒಂದು ದೊ
ಡ್ಡ ವರ್ತುಲವನ್ನು ತೆಗೆದು ಅದರ ಮಧ್ಯ ಬಿಂದುವಿನಿಂದ
ಸ್ವಲ್ಪ ಕಡಿಮೆ ತ್ರಿಜ್ಯೆಯಿಂದ ಬಿಳಿ ಕಾಗದ ಮೇಲೆ ಎರಡನೆ
ಯ ವರ್ತುಲವು ತೆಗೆಯುಬೇಕು. ಮತ್ತು ಒಂದು ಹಿತ್ತಾ
ಳಿಯ ಸಣ್ಣ ಪಿನ್ನಿನಿಂದ ಈ ಸಣ್ಣ ವರ್ತುಲವು ತನ್ನ ಕೇಂ
ದ್ರದ ಸುತ್ತಲು ತಿರುಗಿಸಲಿಕ್ಕೆ ಬರುವಂತೆ ಮಾಡಬೇಕು.

ದೊಡ್ಡ ವರ್ತುಲದ ಪರಿಘದಲ್ಲಿ ೩೬೫·೨೫ ದಿವಸಗಳನ್ನು ತೋರಿಸುವಂತೆ ಸಮ ಭಾಗಗಳು ಮಾಡಿ ಮೇಷಾದಿ ೧೨ ಸಂಕ್ರಮಣಗಳಿಗೆ ಹತ್ತುವ ದಿವಸಗಳ ಸ್ಥಾನದಲ್ಲಿ ಆಯಾ ಸಂಕ್ರಮಣಗಳ ಹೆಸರುಗಳನ್ನೂ ಆಯಾ ಸಂಕ್ರಮಣಗಳಿಂದ ಅನುಲಕ್ಷಿತವಾದ ತಿಂಗಳುಗಳ ಹೆಸರುಗಳನ್ನೂ ಬರೆದು ಆಯಾ ಬಿಂದುಗಳಿಂದ ಮಧ್ಯ ಬಿಂದುವಿನ ಕಡೆಗೆ ಗೆರಿಗಳು ತೆಗೆದಿರುತ್ತವೆ. (ಆಕೃತಿ ನೋಡು)

ಬಿಳಿಕಾಗದದ ಮೇಲಿನ ಸಣ್ಣ ವರ್ತುಲದ ಪರಿಘದಲ್ಲಿ ಮಧ್ಯಮ ಚಾಂದ್ರಮಾಸಕ್ಕೆ ಹತ್ತುವ ದಿವಸಗಳ ೨೯|೩೦ ಅಂತರದಲ್ಲಿ ಗುರುತುಗಳನ್ನು ಮಾಡಿ ಅಲ್ಲಲ್ಲಿ ಸೂರ್ಯ ಚಂದ್ರರ ಬಿಂಬಗಳನ್ನು ಬರೆದು ೧೨ ಅಮಾಂತಮಾಸಗಳು ತೋರಿಸಿರುತ್ತವೆ ಈ ಪ್ರಕಾರ ಬಂದು ಸೌರ ವರುಷದಲ್ಲಿ ೧೨ ಚಾಂದ್ರ ಮಾಸಗಳು ಪೂರ್ಣವಾಗಿ ೧೧ ದಿವಸಗಳು ಹೆಚ್ಚಿಗೆ ಉಳಿಯುತ್ತವೆ. ಇದರಿಂದ ಸುಮಾರು ೩ ವರ್ಷಗಳಲ್ಲಿ ಬಂದು ಹೆಚ್ಚಿನ ಚಾಂದ್ರಮಾಸ ಅಂದರೆ ಅಧಿಕ ಮಾಸವು ಬರುತ್ತದೆ.

ಆದರೆ ಅಧಿಕಮಾಸಗಳು ಸರಿಯಾದ ಅವಧಿಯಲ್ಲಿ ಬರುವದಿಲ್ಲ. ಇದರ ಕಾರಣಗಳು ಅನೇಕ ಅವೆ. ೧ನೇ- ಪ್ರತಿ ಸಂಕ್ರಮಣಕ್ಕೆ ಹತ್ತುವ ದಿವಸಗಳು ಅಂದರೆ ಸೌರ ಮಾಸಗಳ ಅವಧಿಗಳು ಸಮವಾದವುಗಳಲ್ಲ. ೨ನೇ- ಚಾಂದ್ರಮಾಸದ ಮಧ್ಯಮ ಅವಧಿಯು ೨೯ ದಿವಸ ೩೦ ಗಳಿಗೆ ಇದ್ದಾಗ್ಯೂ ಅದು ೨೯ ದಿವಸ ೧೮ ಗಳಿಗೆಯಿಂದ ೨೯ ದಿವಸ ೪೬ ಗಳಿಗೆ ವರೆಗೆ ಹೆಚ್ಚು ಕಡಿಮೆಯಾಗುತ್ತದೆ. ಆದರಿಂದ ಅಧಿಕಮಾಸದ ನಿರ್ಣಯ ಮಾಡಬೇಕಾದರೆ ಸೌರ ಮತ್ತು ಚಾಂದ್ರಮಾಸಗಳ ಆರಂಭ ಮತ್ತು ಅಂತಗಳನ್ನು ಅಂದರೆ ಸಂಕ್ರಮಣ ಮತ್ತು ಅಮವಾಸ್ಯ ಇವುಗಳ ವೇಳೆಯನ್ನು ಬಹು ಸೂಕ್ಷ್ಮವಾಗಿ ನಿಶ್ಚಯಿಸಲಿಕ್ಕೆ ಬೇಕು. ಈ ಕೆಲಸವು ಪಂಚಾಂಗ ಮಾಡುವವರು ಮಾಡುತ್ತಾರೆ. ಇವುಗಳಲ್ಲಿ ತಪ್ಪು ಉಂಟಾದರೆ ಅಧಿಕಮಾಸದಲ್ಲಿ ಸಹಾ ತ

[illegible] ಉಂಟಾಗಲಿಕ್ಕೆ ಬೇಕು. ಇದು ಸ್ಪಷ್ಟವಾದ ಮಾತು. ಕೇತಕೀ ಮತ್ತು ಗ್ರಹಲಾಘವ ಪಂಚಾಂಗಗಳಲ್ಲಿ ಈ ವರ್ಷ ಬೇರೆ ಬೇರೆ ಅಧಿಕಮಾಸಗಳು ಬರೆದಿರುತ್ತವೆ. ಇದರ ಕಾರಣವಾದರೂ ಇದೇ ಇರುತ್ತದೆ.

ಘಡಿಯಾಳದಲ್ಲಿ ತಾಸಿನ ಮುಳ್ಳು ತೆಗೆದು ಹಾಕಿ ಬರೇ ಮಿನಿಟಿನ ಮುಳ್ಳು ಇಟ್ಟರೆ ಯಾವದೋ ಒಂದು ತಾಸು ಸಮಾಪ್ತವಾಗಿ ಇಂತಿಷ್ಟು ಮಿನಿಟುಗಳು ಇಷ್ಟೇ ತಿಳಿಯುವದು. ಆದರೆ ಯಾವ ತಾಸು ನಡೆದದೆ ಈ ಮಾತು ಎಂದೂ ತಿಳಿಯದು. ಅದರಂತೆಯೇ ಚಂದ್ರನ ಕಳೆಗಳಿಂದ ಚಾಂದ್ರಮಾಸ ಪ್ರಾರಂಭವಾಗಿ ಎಷ್ಟು ದಿವಸಗಳು ಅತೀತವಾದವು ಇಷ್ಟೇ ತಿಳಿಯುವದು. ಆದರೆ ಎಷ್ಟನೇ ಅಥವಾ ಯಾವ ಮಾಸವು ನಡೆದದೆ ಎಂಬದು ತಿಳಿಯಬೇಕಾದರೆ ಯಾವ ಸೌರ ಮಾಸವು ನಡೆದದೆ ಎಂಬದು ತಿಳಿಯಬೇಕಾಗುತ್ತದೆ

ಘಡಿಯಾಳದಲ್ಲಿ ಹ್ಯಾಗೆ ತಾಸಿನ ಅಂಕಿಗಳು ಇರುತ್ತವೆಯೋ ಹಾಗೇಯೇ ಆಕಾಶದೊಳಗಿನ ಕೆಲವು ನಕ್ಷತ್ರಗಳ ಸಹಾಯದಿಂದ ಸೌರಮಾಸಗಳ ಆರಂಭದ ಸ್ಥಾನಗಳು ಆಕಾಶದಲ್ಲಿ ಗೊತ್ತು ಮಾಡಿರುತ್ತವೆ. ಮತ್ತು ಸೂರ್ಯನು ಆಯಾ ಬಿಂದುಗಳಿಗೆ ಬಂದ ಕೂಡಲೆ ಆಯಾ ಸಂಕ್ರಮಣಗಳು ಪ್ರಾರಂಭವಾದವೆಂದು ತಿಳಿಯುತ್ತದೆ.

ಇನ್ನು ಮೇಲೆ ವಿವರಿಸಿದ ಪರಿಲೇಖದ ಸಹಾಯದಿಂದ ಅಧಿಮಾಸವನ್ನು ನಿರ್ಣಯಿಸುವ ರೀತಿಯನ್ನು ಹೇಳುತ್ತೇನೆ. ಪರಿಲೇಖದಲ್ಲಿ ಮೊದಲನೆಯ ಚಾಂದ್ರಮಾಸದ ಅವಧಿಯಲ್ಲಿ ಸಮಾನವಾದ ೩೦ ಭಾಗಗಳನ್ನು ಮಾಡಿದ್ದರಿಂದ ಅವು ಒಂದೊಂದು ತಿಥಿಯನ್ನು ತೋರಿಸುತ್ತವೆ. ಉದಾಹರಣಾರ್ಥವಾಗಿ ಶಕೆ ೧೮[illegible]೭ನೇ ವರುಷದ ಪಂಚಾಂಗವನ್ನು ತೆಗೆದುಕೊಳ್ಳುವೆ. ಅದನ್ನು ತೆರೆದು ನೋಡಿದರೆ ಅದರಲ್ಲಿ ಚೈತ್ರಶುಕ್ಲ ಅಷ್ಟಮೀದಿವಸ ಮೇಷ ಸಂಕ್ರಮಣ ಬರೆದಿರುತ್ತದೆ. ಆದದರಿಂದ ಬಿಳಿ ಚಕ್ರವನ್ನು ಸರಿಸಿ ಮೇಷ ಸಂಕ್ರಮಣದ ಗೆರೆಯು ಎದುರಿಗೆ ಅಷ್ಟಮೀ ತಿಥಿಯು ಬರು

ವಂತೆ ಮಾಡಿದೆವು. ಇಷ್ಟರಿಂದ ಮಿಥುನ ಸಂಕ್ರಮಣವು ಜ್ಯೇಷ್ಠ ಶುಕ್ಲ ದ್ವಾದಶಿಗೆ ವೃಶ್ಚಿಕ ಸಂಕ್ರಮಣವು ಕಾರ್ತಿಕ ಕೃಷ್ಣ ತೃತೀಯಾ ದಿವಸ ಕುಂಭ ಸಂಕ್ರಮಣವು ಮಾಘ ಕೃಷ್ಣ ದ್ವಿತೀಯಾ ದಿವಸ ಆಗುತ್ತವೆಂದು ನೋಡಿದ ಕ್ಷಣವೇ ತಿಳಿಯುತ್ತದೆ. ಇನ್ನು ಮುಂದೆ ಶಕೆ ೧೮೭೮ ವರುಷದ ಪಂಚಾಂಗವನ್ನು ತೆಗೆದುಕೊಳ್ಳುವ ಇದರಲ್ಲಿ ಮೇಷ ಸಂಕ್ರಮಣವು ಚೈತ್ರ ಕೃಷ್ಣ ದ್ವಾದಶಿ ದಿವಸ ಬರೆದದೆ. ಮೇಲೆ ಹೇಳಿದಂತೆ ಈ ಸ್ಥಿತಿಯನ್ನು ಮೇಷ ಸಂಕ್ರಮಣದ ಮುಂದೆ ತಂದಿಟ್ಟರೆ ಈ ವರುಷದ ಸಂಕ್ರಮಣಗಳು ಯಾವ ತಿಂಗಳ ಯಾವ ತಿಥಿಗೆ ಆಗುತ್ತವೆಂದು ಸಹಜವಾಗಿ ಕಂಡು ಬರುತ್ತದೆ. ಈ ಪ್ರಸಂಗದಲ್ಲಿ ಕುಂಭ ಮತ್ತು ಮೀನ ಸಂಕ್ರಮಣಗಳು ಆಯಾ ಅಮಾವಾಸ್ಯಾ ದಿವಸ ಬಂದಿರುತ್ತವೆ. ಆದರೆ ನಮ್ಮ ಪರಿಲೇಖವು ಸ್ಥೂಲ ಮತ್ತು ಮಧ್ಯಮ ಚಾಂದ್ರಮಾಸದ ಮಾನಕ್ಕನುಸರಿಸಿ ತೆಗೆದದ್ದರಿಂದ ಅಧಿಮಾಸ ನಿರ್ಣಯವನ್ನು ಪಂಚಾಂಗದೊಳಗಿನ ಘಟಿಪಳಗಳನ್ನು ನೋಡಿ ಮಾಡತಕ್ಕದ್ದು.

ಯಾವ ಚಾಂದ್ರಮಾಸದಲ್ಲಿ ಸಂಕ್ರಮಣವು ಸಂಭವಿಸುವದಿಲ್ಲವೋ ಆ ಚಾಂದ್ರಮಾಸಕ್ಕೆ ಅಧಿಕಮಾಸವೆಂದು ಹೆಸರು. ಮೀನದಿಂದ ತುಲಾದವರೆಗೆ ಯಾವತ್ತು ಸಂಕ್ರಮಣಗಳ ಅವಧಿಯು ಚಾಂದ್ರಮಾಸದ ಅವಧಿಗಿಂತ (೨೯।೪೬) ತುಸು ದೊಡ್ಡವಿರುವದರಿಂದ ಇವುಗಳಿಂದ ಉಪಲಕ್ಷಿತವಾದ ಫಾಲ್ಗುನಾದಿ ಆಶ್ವಿನವರೆಗೆ ಏಳು ತಿಂಗಳು ಯಾವಾಗಲು ಅಧಿಕವಾಗುವವು. ಇವು ಕ್ಷಯ ಎಂದೂ ಆಗಲಿಕ್ಕಿಲ್ಲ.

ಯಾವದೊಂದು ಸಂಕ್ರಮಣಾವಧಿಯು ಚಾಂದ್ರಮಾಸಾವಧಿಗಿಂತ ಸಣ್ಣದಿದ್ದರೆ ಅದರಿಂದ ಉಪಲಕ್ಷಿತವಾದ ಮಾಸವು ಕ್ಷಯವಾಗುವ ಸಂಭವವಿರುತ್ತದೆ. ಮತ್ತು ಯಾವದೊಂದು ಸಂಕ್ರಮಣದ ಹಿಂದಿನ ಸಂಕ್ರಮಣದ ಅವಧಿಯು ಚಾಂದ್ರಮಾಸಾವಧಿಗಿಂತ ದೊಡ್ಡದಿದ್ದರೆ ಅದು ಅಧಿಕವಾಗುವ ಸಂಭವವಿರುತ್ತದೆ. ಈ ನಿಯಮಗಳಿಗೆ ಅ

ನುಸರಿಸಿ ನೋಡಿದರೆ ವೃಶ್ಚಿಕ ಸಂಕ್ರಮಣದ ಹಿಂದಿನ ತ್ರುಲಾಸಂಕ್ರಮಣಾವಧಿಯು (೨೯|೫೯) ಚಾಂದ್ರಮಾಸಾವಧಿಗಿಂತ (೨೯|೪೬) ಹೆಚ್ಚು ಇರುವದರಿಂದ ಕಾರ್ತಿಕವು ಕ್ವಚಿತ್ ಅಧಿಕ ಆಗುವದು, ಮತ್ತು ವೃಶ್ಚಿಕ ಸಂಕ್ರಮಣದ ಸ್ವಂತ ಅವಧಿಯು (೨೯|೩೬) ಚಾಂದ್ರಮಾಸಾವಧಿಗಿಂತ ಸಣ್ಣದಿರುವದರಿಂದ ಕಾರ್ತಿಕವು ಕ್ವಚಿತ್ ಕ್ಷಯವಾಗುವದು.

ಧನು ಮತ್ತು ಮಕರ ಈ ಸಂಕ್ರಮಣಗಳ ಅವಧಿಗಳು (೨೯|೨೭ ಮತ್ತು ೨೯|೩೨) ಚಾಂದ್ರಮಾಸಾವಧಿಗಿಂತ (೨೯|೪೬) ಕಡಿಮೆ ಇರುವದರಿಂದ ಮತ್ತು ಇವುಗಳ ಹಿಂದಿನ ಸಂಕ್ರಮಣಗಳ ಅವಧಿಗಳು ಸಣ್ಣವಿರುವದರಿಂದ ಮಾರ್ಗಶೀರ್ಷ ಮತ್ತು ಪೌಷ ಈ ಎರಡು ಮಾಸಗಳು ಯಾವಾಗಲು ಕ್ಷಯವಾಗುವವು. ಅಧಿಕ ಎಂದೂ ಆಗಲಾರವು

ಮೇಲಿನ ನಿರ್ಣಯದಲ್ಲಿ ನಾವು ಚಾಂದ್ರಮಾಸವು ೨೯|೪೬ ಸ್ವೀಕರಿಸಿದ್ದೇವೆ. ಆದರೆ ಅದು ಒಮ್ಮೊಮ್ಮೆ ೨೯|೧೮ ವರೆಗೆ ಕಡಿಮೆಯಾಗುತ್ತದೆ. ಅದಕ್ಕನುಸರಿಸಿ ಮೇಲಿನ ನಿರ್ಣಯಗಳು ತುಸು ಬದಲಾಗುವವು. V. B. K.

DHARWAR TRAINING COLLEGE CERTIFICATE EXAMINATION. 906

ಧಾರವಾಡ ಟ್ರೇನಿಂಗ ಕಾಲೇಜದ ಸರಟೀಫಿಕೇಟ ಪರೀಕ್ಷೆ

ಶನಿವಾರ, ತಾರೀಖು ೨೯ನೇ ಸಪ್ಟಂಬರ, (೨॥—೫॥)

೩ನೇ ವರ್ಷ—ವ್ಯಾಕರಣ.

(ಬಲಕ್ಕೆ ಬರೆದ ಅಂಕೆಗಳು ಪ್ರಶ್ನೆಗಳ ಪೂರ್ಣ ಗುಣಗಳು.)

೧. ಕೆಳಗೆ ಬರೆದ ಸೂತ್ರಗಳ ಅರ್ಥವನ್ನು ವ್ಯುತ್ಪತ್ತ್ಯನು ವೃತ್ತಿಗಳಿಂದ ಪೂರ್ಣಮಾಡಿಕೊಂಡು ಬರಿ. ಪ್ರತಿ ಒಂದು ವಿಧಿಗೆ ಉದಾಹರಣೆಗಳನ್ನು ಕೊಡು :—

ಇನೆಗ ಮುದುಮಾಂನೆಮಾಂನೆಗ
ಮಿನಮುಲೊಡಂ ಸೊಂನೆವೆರಿಸು ಸತ್ಯರ್ಥದೆ ತಾ
ಕನಿಜ ಸ್ಥಾನದೊಳಪ್ಪುವಿ
ವನುಕೂಲಂ ಮತ್ತೆಕಾರಕಾದಿಯೊಳಲೊಡಂ
ನೆಗಳ್ಗಂ ಸಂಪ್ರತಿಗಂ ಭಾ
ವಿಗಮಾಂನೆಗಮಾಂನಮಿನೆಗಮಿನ ಮೆಂಬಿವು ಸೂ
ರಿಗಳಿಂದುದು ಮಲೊಢಂಗಳ್
ನೆಗಳ್ಗಂ ಭೂತಾರ್ಥದಲ್ಲಿ ಸತಿ ಸಪ್ತಮಿಯೊಳ್.

೨. ಇಚೆ, ಗ, ಗುಳಿ, ಇಕ, ಇಲ, ಅನೆಯು, ಈ ತದ್ಧಿತ ಪ್ರತ್ಯಯಗಳು ಹತ್ತಲಾಗಿ ಯಾವ ಯಾವ ಅರ್ಥದ ನಾಮಗಳು ಆಗುತ್ತವೆ? ಹೇಳು ಮತ್ತು ಉದಾಹರಣೆಗಳನ್ನು ಕೊಡು.

೩. ಕರ್ಮಧಾರಯಕ್ಕೂ ಗಮಕಕ್ಕೂ ಏನಾದರೂ ಭೇದವಿದ್ದಲ್ಲಿ ವಿವರಿಸು. ಮತ್ತು ಉದಾಹರಣೆಗಳನ್ನು ಕೊಡು. ಕರ್ಮಧಾರಯ ಸಮಾಸವಾದಲ್ಲಿ ಪೂರ್ವಪರ ಪದಗಳ ನಡುವೆ ಆಗುವ ಸಂಧಿ ನಿಯಮಗಳನ್ನು ಪೂರ್ಣವಾಗಿ ವಿವರಿಸು.

೪. ನಾಣಿಲಿವೆಣ್ ಮುಟ್ಟುಪಟ್ಟು, ಅನಾರಾಯಣಂ, ಏಪ್ರೋದಂ, ತೆಪ್ಪತೆಪ್ಪನೆ, ತೂಗ್ಗುಂಡಲೆ, ಇವು ಯಾವ ಸಮಾಸಗಳು? ಹೆಸರು ಹೇಳಿ ವಿಗ್ರಹ ಮಾಡು. ಅಂಕತ್ರಿನೇತ್ರಂ, ಕೆಬ್ಬಲಂ ಮಣಿಗೆಂಪು ಇವು ಅರಿಸಮಾಸಗಳಹುದೋ ಹ್ಯಾಗೆ ವಿಚಾರಿಸು.

೫. ಮಾಡಿಹನು ಬಂದಿಹನು ಮೊದಲಾದ ರೂಪಗಳು ಹ್ಯಾಗೆ ಬಂದವು? ಶಬ್ದಮಣಿ ದರ್ಪಣದಂತೆ ಈ ರೂಪಗಳ ಶುದ್ಧಾಶುದ್ಧತೆಯನ್ನು ವಿಚಾರಿಸು.

೬. ಭವಿಷ್ಯತ್ಕಾಲಾಗಮವಾದ ವಕಾರಕ್ಕೂ ಅದರ ಹಿಂದಿನ ಪ್ರಕೃತ್ಯಕ್ಷರಗಳಿಗೂ ಬರುವ ವಿಕಾರಗಳನ್ನು ಪೂರ್ಣವಾಗಿ ವಿವರಿಸಿ ಉದಾಹರಣೆ ಕೊಡು.

೩. ವಿಶೇಷಣ ವಿಶೇಷ್ಯಗಳ ಲಿಂಗ ಬಲದಿಂದ ವಿಶೇಷ್ಯ ವಿಶೇಷಣಗಳ ಲಿಂಗವನ್ನು ಯೋಜಿಸಿಕೊಳ್ಳಬೇಕು. ಅಂದರೇನು! ನೀವು ಓದಿದ ಕಾವ್ಯಗಳೊಳಗಿನ ಉದಾಹರಣೆಗಳನ್ನು ಕೊಟ್ಟು ವಿವರಿಸು.

೪. ಅನುಷ್ಟುಪ್ ಶ್ಲೋಕಗಳ ಲಕ್ಷಣವನ್ನೂ ಅವುಗಳ ಭೇಧಗಳನ್ನೂ ಹೇಳು.

(ಅ) ಹದಿಮೂರು ಅಕ್ಷರಗಳ ಪಾದವುಳ್ಳ ಛಂದಸ್ಸಿನಲ್ಲಿ ಯಾವ ಯಾವ ವೃತ್ತಗಳು ಬರುತ್ತವೆ? ಹೆಸರು ಲಕ್ಷಣ ಉದಾಹರಣೆಗಳನ್ನು ಕೊಡು.

DHARWAR TRAINING COLLEGE CERTIFICATE EXAMINATION. 1906.

ಬುಧವಾರ, ತಾರೀಖು ೨೬ನೇ ಸಪ್ಟಂಬರ, (೨'—೫'')

೨ನೇ ವರ್ಷ—ಕೃಷಿಕರ್ಮ.

(ಬಲಕ್ಕೆ ಬರೆದ ಅಂಕೆಗಳು ಪ್ರಶ್ನಗಳ ಪೂರ್ಣ ಗುಣಗಳು)

೧. ಭೂಮಿಯು ಸಾಗುವಳಿಯಿಂದಾಗುವ ಲಾಭಗಳನ್ನು ಬರೆಯಿರಿ. ಭೂಮಿಯು ಸಾಗ ಮಾಡಲಿಕ್ಕೆ ಬೇಕಾಗುವ ಆಯುಧಗಳ ಆಕೃತಿಗಳನ್ನು ತೆಗೆದು ಅವುಗಳ ಉಪಯೋಗಗಳನ್ನು ಬರೆಯಿರಿ. ೧೨

೨. ಕಿಟ್ಟದ ಗೊಬ್ಬರಕ್ಕೆ ನಿಯಮಿತವಾದ ರಾಸಾಯನ ಪೃಥಕ್ಕರಣವಿರುವದಿಲ್ಲೆಂಬದರ ಕಾರಣಗಳನ್ನು ಹೇಳಿರಿ. ಕಿಟ್ಟದ ಗೊಬ್ಬರ ಭೂಮಿಗೆ ಹಾಕುವದರಿಂದ ಭೂಮಿಯಲ್ಲಿ ಆಗುವ ಯಾಂತ್ರಿಕ ಮತ್ತು ರಾಸಾಯನಿಕ ಪರಿಣಾಮಗಳನ್ನು ವಿವರಿಸಿರಿ. ೧೦

೩. "ರಾಬ" ಅಂದರೇನು? ಅದನ್ನು ಎಲ್ಲಿ ಉಪಯೋಗಿಸುತ್ತಾರೆ? ಮತ್ತು ರಾಬದಿಂದ ಆಗುವ ಲಾಭಗಳನ್ನು ಬರೆಯಿರಿ. ೧೪

೪. ಕೆಳಗೆ ಬರೆದ ಪೈರುಗಳ ಒಂದು ಎಕರೆಗೆ [illegible]
ಬಿತ್ತುವ ಪ್ರಮಾಣಗಳನ್ನೂ, ಆಗುವ ಉತ್ಪನ್ನಗಳ
ನ್ನೂ, ಬರೆಯಿರಿ. ಅವುಗಳ ಬಿತ್ತುವ ಕಾಲ ಮತ್ತು
ಪಕ್ವವಾಗುವ ಕಾಲ ಹೇಳಿರಿ:—

೧. ನವಣಿ, ೨. ರಾಗಿ, ೩. ಕಡಲೆ, ೪. ಉದ್ದು, ೫.
ಗೋಂಜಾಳ, ೬. ಹುರಳಿ.

೫. ಉತ್ತಮವಾದ ಬೀಜಗಳ ಲಕ್ಷಣಗಳು ಯಾ
ವವು? ಬೀಜಗಳನ್ನು ಹ್ಯಾಗೆ ಸಂಗ್ರಹ ಮಾಡಬೇಕೆಂ
ಬುವದನ್ನು ಹೇಳಿರಿ.

NOTE OF LESSON

ಪಾಠದ ಟಿಪ್ಪಣಿ.

ಪುಪ್ಪುಸವೂ, ಶ್ವಾಸೋಚ್ಛ್ವಾಸವೂ.

ಹುಬ್ಬಳ್ಳಿಯಂಥ ದೊಡ್ಡ ಪಟ್ಟಣಗಳಲ್ಲಿ ಸ್ವಚ್ಛವಾದ
ಕೆರೆಯ ಅಥವಾ ಹೊಳೆಯ ನೀರು ನಳದ ಮಾರ್ಗವಾಗಿ
ತಂದದ್ದನ್ನು ನೀವು ನೋಡಿರಬಹುದು. ಆ ನೀರು ಬಳಿಸಿ
ದ ತರುವಾಯ ಕೆಟ್ಟು ಹೋಗುತ್ತದೆ. ಆ ಕೆಟ್ಟ ನೀರನು
ನೀವು ಬಳಿಸುವದಿಲ್ಲ. ಅದನ್ನು ಗಟಾರದ ಮಾರ್ಗವಾಗಿ
ಹೋಗಗೊಡುತ್ತೀರಿ. ಸ್ವಚ್ಛ ನೀರು ಬರುವ ಮಾರ್ಗ
ಬೇರೆ. ಕೆಟ್ಟ ನೀರು ಹೋಗುವ ಮಾರ್ಗ ಬೇರೆ. ಈ ಪ್ರ
ಕಾರ ಎರಡು ಮಾರ್ಗಗಳಿರುತ್ತವೆ. ಕೆರೆಯ ಎಲ್ಲ ನೀರು
ತೀರಿದರೆ ನಿಮ್ಮ ಉಪಯೋಗಕ್ಕೆ ಸ್ವಚ್ಛ ನೀರು ಸಿಗಲಾರ
ದು. ನೀರು ತನ್ನಲ್ಲಿದ್ದ ಮಲವನ್ನು ಕೆಳಗೆ ಬಿಟ್ಟು ಉಗಿ
ಯಾಗಿ ಮೇಲಕ್ಕೆ ಹೋಗುತ್ತದೆ. ಉಗಿಯ ರೂಪದಿಂದ
ಮೇಲಕ್ಕೆ ಹೋದ ನೀರು ಮಳೆಯ ರೂಪದಿಂದ ಕೆಳಗೆ ಬಿ
ದ್ದು, ನಿಮ್ಮ ಉಪಯೋಗಕ್ಕೋಸ್ಕರ ಕೆರೆ ಬಾವಿಗಳಲ್ಲಿ
ತುಂಬುವಂತೆ—

ಅನ್ನ ಪಚನದಿಂದ ಉಂಟಾದ ರಕ್ತವು ಪ್ರಾಣಿ ಶರೀರವ
ನ್ನು ಪೋಷಿಸುವದರಲ್ಲಿ ಉಪಯೋಗಿಸಲ್ಪಡುವದರಿಂದ ಕೆ
ಡುತ್ತದೆ. ಶುದ್ಧ ರಕ್ತದ ಬಣ್ಣವನ್ನು ನೀವು ನೋಡಿರುವಿ

ರಿ; ಅದು ಕೆಂಪು ಇರುತ್ತದೆ. ಆದರೆ ಕೆಟ್ಟ ರಕ್ತವು ಕಪ್ಪಿನ ಮೇಲೆ ಇರುತ್ತದೆ. ನಿಮ್ಮ ಕೈ ಮೇಲಿನ ನರಗಳನ್ನು ನೋಡಿರಿ. ಅವುಗಳಲ್ಲಿ ಕೆಟ್ಟ ರಕ್ತವಿರುವದರಿಂದ ಅವುಗಳ ಬಣ್ಣವು ಹಸುರಾಗಿರುತ್ತದೆ. ಕೆಟ್ಟ ರಕ್ತವು ಶುದ್ಧವಾಗದಿದ್ದರೆ ನಾವು ಬದುಕಲಾರೆವು. ದೇವರು ಕೆಟ್ಟ ರಕ್ತವನ್ನು ಶುದ್ಧ ಮಾಡುವದೊಂದು ಯಂತ್ರವನ್ನು ನಮ್ಮ ಶರೀರದಲ್ಲಿ ಇಟ್ಟಿರುವನು. ಅದರ ವಿಷಯವಾಗಿ ಈ ಹೊತ್ತು ನಿಮಗೆ ಹೇಳುತ್ತೇನೆ.

ಉಪಕರಣಗಳು:—ತಿದಿ, ಪುಪ್ಪುಸದ ಚಿತ್ರ, ಪುಪ್ಪುಸದ ಆಕೃತಿ. ಸ್ಪಂಜ ಸುಣ್ಣದ ತಿಳಿನೀರು.

ಪ್ರಯೋಗ.	ಫಲಿತ.	ಸಿದ್ಧಾಂತ.
ಎದೆಯ ಎರಡೂ ಬದಿಗಳ ಮೇಲೆ ಕೈಯಿಟ್ಟು ಹೆಚ್ಚಿಗೆ ಶ್ವಾಸವನ್ನು ಎಳೆದುಕೊಳ್ಳಲಿಕ್ಕೂ, ಉಚ್ಛ್ವಾಸವನ್ನು ಬಿಡಲಿಕ್ಕೂ ಹೇಳಿ, ಆಗುವ ಪರಿಣಾಮವನ್ನು ಕೇಳುವದು.	ಶ್ವಾಸದಿಂದಎದೆಯು ಉಬ್ಬಿ ದೊಡ್ಡದಾಗುತ್ತದೆ. ಉಚ್ಛ್ವಾಸ ಬಿಟ್ಟನಂತರ ಎದೆಯು ಇಳಿದು ಸಣ್ಣದಾಗುತ್ತದೆ ಶ್ವಾಸದಿಂದ ಎದೆಯೊಳಗೆ ಏನು ಹೋಗುತ್ತದೆ? ಗಾಳಿಯು.	

ಟೀಪು:—ತಿದಿಯನ್ನು ತಕ್ಕೊಂಡು ತಿದಿಯು ಗಾಳಿಯಿಂದ ಹ್ಯಾಗೆ ಉಬ್ಬುತ್ತದೆ ಮತ್ತು ಗಾಳಿ ಬಿಟ್ಟನಂತರ ಹ್ಯಾಗೆ ಇಳಿಯುತ್ತದೆ. ಅದರಂತೆ ಎದೆಯು ಶ್ವಾಸದಿಂದ ಉಬ್ಬುತ್ತದೆ ಮತ್ತು ಉಚ್ಛ್ವಾಸದಿಂದ ಇಳಿಯುತ್ತದೆ. ಎಂಬದನ್ನು ತೋರಿಸುವದು.

ಒಂದು ಸಾರೆ ಬಾಯಿ ಬಂದುಮಾಡಿ ಮತ್ತೊಂದು ಸಾರೆ ಮೂಗು ಬಂದು ಮಾಡಿ ಉಸುರಾಡಿಸಲಿಕ್ಕೆ ಹೇಳಿ; ಶ್ವಾಸವು ಹಾಗು ಉಚ್ಛ್ವಾಸವು	ಬಾಯಿಯಿಂದಲೂ ಮೂಗಿನಿಂದಲೂ ಉಸುರಾಡಿಸಲಿಕ್ಕೆ ಬರುತ್ತದೆ. ಶ್ವಾಸದಿಂದ ಒಳಗೆ ತಕ್ಕೊಂಡ ಗಾಳಿಯೂ ಉಚ್ಛ್ವಾಸದಿಂ ಹೊರಗೆ	

ಯಾವ ಮಾರ್ಗವಾಗಿ ಹೋಗಿ ಬರುತ್ತವೆಂದು ಕೇಳುವದು.

ಏನಾದರೂ ತಿನಲಿಕ್ಕೆ ಕೊಟ್ಟು ನುಂಗಲಿಕ್ಕೆ ಹೇಳಿ ಶ್ವಾಸ ಹೋಗುವ ಮಾರ್ಗವು ಮತ್ತು ನುಂಗಿದ ಪದಾರ್ಥ ಹೋಗುವ ಮಾರ್ಗ ಒಂದೇ ಅದೆಯೋ ಬ್ಯಾಗೆಂದು ಕೇಳುವದು

ಮೇಲಿನ ಪ್ರಯೋಗವನ್ನು ಇನ್ನೊಂದು ಸಾರೆ ಮಾಡಿ ಶ್ವಾಸ-ನಲಿಕೆಯು ಅನ್ನ-ನಲಿಕೆಯ ಹಿಂದೆ ಅದೆಯೋ ಮುಂದೆ ಅದೆಯೊ ಎಂದು ಕೇಳುವದು.

ಬಿಟ್ಟ ಗಾಳಿಯೂ ಯಾವ ಮಾರ್ಗವಾಗಿ ಹೋಗಿ ಬರುತ್ತವೆ.

ಗಂಟಲ ಮಾರ್ಗವಾಗಿ ಬೇರೆ ಬೇರೆ ಇರುತ್ತದೆ.

ಶ್ವಾಸನಲಿಕೆಯು ಹಿಂದೆ ಅನ್ನ ನೀರುಗಳ ನಲಿಕೆಯುಂಟು.

ಟೀಪು:—ಶ್ವಾಸ ರಂಧ್ರದಲ್ಲಿ ಶ್ವಾಸದ ಹಾಗು ಅನ್ನ ನೀರುಗಳ ನಲಿಕೆಗಳುಂಟು. ಶ್ವಾಸದ ಕೊಳವೆಯು ಬಾಯಿಯ ಮೇಲೆ ಒಂದು ಮುಚ್ಚಳವುಂಟು. (ಚಿತ್ರದಲ್ಲಿ ನೋಡಿರಿ) ಅದಕ್ಕೆ ನಾವು ಕಿರಿನಾಲಿಗೆ ಅನ್ನುತ್ತೇವೆ. ಪದಾರ್ಥಗಳನ್ನು ನುಂಗುವಾಗ ತಿಂದ ಪದಾರ್ಥವು ಶ್ವಾಸ ನಲಿಕೆಯೊಳಗೆ ಹೋಗಬಾರದೆಂದು ಈ ಕಿರಿನಾಲಿಗೆಯು ಅದನ್ನು ಬಂದು ಮಾಡುತ್ತದೆ.

ಎದೆಯ ಎರಡೂ ಮಗ್ಗಲು ಕೈ ಇಟ್ಟು ಶ್ವಾಸ ತಕ್ಕೊಳ್ಳಲಿಕ್ಕೆ ಹೇಳಿ ಶ್ವಾ

ಉಣ್ಣುತ್ತಿರುವಾಗ ಏನು ಮಾಡಬಾರದು?

ಮಾತಾಡಬಾರದು ಯಾಕೆ?

ಗಂಟಲ ತಗ್ಗಿನ ಕೆಳಭಾಗದಿಂದ ಬಲಕ್ಕೂ ಎಡಕ್ಕೂ ಗಾಳಿಯು ಇಳಿ

ಅನ್ನದ ಚೂರ ಶ್ವಾಸ ನಲಿ ಯೊಳಗೆ ಹೊಕ್ಕು ಉಸುರು ಗಟ್ಟುತ್ತದೆ.

ಶ್ವಾಸ ನಲಿಕೆಯು ಕೆಳಗೆ ಇಬ್ಭಾಗವಾ

ಸದಿಂದಬಂದ ಗಾಳಿಯು ಎದೆಯೊಳಗೆಯಾವಯಾವ ಮಗ್ಗಲಿಗೆ ಹೋಗುತ್ತದೆಂದು ಕೇಳುವದು.

ಯುತ್ತದೆ. (ಚಿತ್ರನೋಡಿರಿ)

ಶ್ವಾಸದಿಂದ ಎಲವು ಉಬ್ಬುತ್ತದೆಯೋ ಮಾಂಸವು ಉಬ್ಬುತ್ತದೋ?

ಎಲವು ಗಟ್ಟಿ ಇರುವದರಿಂದ ಉಬ್ಬುವದಿಲ್ಲ. ವದಿಲ್ಲ. ಮಾಂಸವು ಉಬ್ಬುತ್ತದೆ

ಶ್ವಾಸ ನಲಿಕೆಯು ಇಬ್ಭಾಗವಾಗಿರುವದರಿಂದ ಪುಪ್ಪುಸಗಳು ಎಷ್ಟು ಅವೆ ಎಂದು ತಿಳಿಯುತ್ತೀರಿ

ಎರಡು.

ಶ್ವಾಸ ನಲಿಕೆಯು ಸೇರಿರುವಷ್ಟೇ ಪುಪ್ಪುಸದಭಾಗವು ಉಬ್ಬಲಿಕ್ಕೆ ಬೇಕು. ಹೀಗಿದ್ದು ಇಡೀ ಪುಪ್ಪುಸವು ಯಾಕೆ ಉಬ್ಬುತ್ತದೆ

ಶ್ವಾಸ ನಲಿಕೆಯು ಅನೇಕ ಭಾಗಗಳಾಗಿ ಪುಪ್ಪುಸದಲ್ಲಿ ಸೇರುತ್ತದೆ.

ಗಿದೆ.

ಎದೆಯೊಳಗಿನಉಬ್ಬುವ ಮಾಂಸಕ್ಕೆ ಪುಪ್ಪುಸವೆನ್ನುತ್ತಾರೆ.

ಟೀಪು:— ಪುಪ್ಪುಸದ ಚಿತ್ರವನ್ನು ತೋರಿಸಿ ಶ್ವಾಸದ ಶ್ವಾಸದ ನಲಿಕೆಯು ಕೂಡಲಿನಂತೆ ಎಷ್ಟೋ ಭಾಗವಾಗಿ ಪುಪ್ಪುಸದ ವೈತ್ರಂಬ ಸೇರುತ್ತದೆಂಬದನ್ನು ಅದರಲ್ಲಿ ತೋರಿಸಬೇಕು.

ಎದೆಯ ಮೇಲೆ ಕೈ ಇಟ್ಟು ಶ್ವಾಸ ತಕ್ಕೊಂಡು ಪುಪ್ಪುಸದ ಉದ್ಧತಿಯನ್ನು ಕೇಳುವದು

ಜತೆಎನಿಂದ ಸ್ತನದ

ಸುಣ್ಣದ ತಿಳಿನೀರಿನಲ್ಲಿ ಉಚ್ಛ್ವಾಸಬಿಟ್ಟು ಆಗುವ ಪರಿಣಾಮವನ್ನು ಕೇಳುವದು.

ಬೆಳ್ಳಗಾಯಿತು ಯಾ

ವರೆಗೆ ಉದ್ದ ಇದ್ದು, ಪಕ್ಕೆಲುಬುಗಳವರೆಗೆ ಅಗಲ ಇರುತ್ತದೆ.	ಕೆ? ತಿಳಿನೀರಿನಲ್ಲಿರುವ ಸುಂಣಕ್ಕೆ ಅಂಗಾರಾಮ್ಲ ವಾಯು ಕೂಡಿ ಬಿಳುಪಿನ ನೀರು ಆಯಿತು.

ಟೀಪು:—ಅನ್ನ ಪಚನದಿಂದ ಉಂಟಾದ ರಕ್ತವು ಮೈತುಂಬ ರಕ್ತವಾಹಿನಿಗಳಿಂದ ಹೋಗಿ ಅದರ ಉಪಯೋಗವಾಗಿ ಅದು ಕೆಟ್ಟು ಕೆಟ್ಟ ರಕ್ತವಾಹಿನಿಗಳ ದ್ವಾರದಿಂದ ತಿರುಗಿ ಪುಪ್ಪುಸಕ್ಕೆ ಬರುತ್ತದೆ. ಅಲ್ಲಿ ಆ ವಾಹಿನಿಗಳು ಶ್ವಾಸ ನಳಿಕೆಗಳಿಗೆ ಸಂಯೋಗವಾಗಿ ಶ್ವಾಸದ ವಾಯುವಿನಲ್ಲಿರುವ ಪ್ರಾಣವಾಯು ಮತ್ತು ಕೆಟ್ಟರಕ್ತ ಇವುಗಳಲ್ಲಿ ರಸಾಯನವ್ಯಾಪಾರ ನಡೆದು ರಕ್ತವು ಶುದ್ಧವಾಗಿ ಶುದ್ಧ ರಕ್ತವಾಹಿನಿಗಳಲ್ಲಿ ಸೇರಿ ಪುನಃ ನಮ್ಮ ಶರೀರದ ಉಪಯೋಗಕ್ಕೆ ಸಿಗುತ್ತದೆ. ರಸಾಯನ ವ್ಯಾಪಾರದಿಂದ ಕೆಟ್ಟ ರಕ್ತದಲ್ಲಿ ಇದ್ದ ಮಲವು ಉಚ್ಛ್ವಾಸದಿಂದ ಹೊರಗೆ ಬರುತ್ತದೆ.

ಉಪಸಂಹಾರ:—ಶ್ವಾಸದಿಂದಲೂ ಉಚ್ಛ್ವಾಸದಿಂದಲೂ ಏನೇನು ಆಗುತ್ತದೆ?

ರಕ್ತವು ಶುದ್ಧವಾಗುವ ಸ್ಥಳವು ಯಾವದು?

ಪಕ್ಕಡಿಗೆ ಗುದ್ದಿದರೆ ಏನು ಪರಿಣಾಮವಾಗುವದು.

ಅಕ್ಷರ ಉಚ್ಚಾರವು ಹ್ಯಾಗಾಗುತ್ತದೆ?

ಯಾವಾಗಲೂ ಶುದ್ಧ ಹವೆಯಲ್ಲಿರಬೇಕು ಯಾಕೆ?

ಖಜ್ಜಿ ಹುರುಕುಗಳು ಏನು ಕಾರಣವಾಗುತ್ತವೆ?

ಶುದ್ಧ ರಕ್ತದ ಬಣ್ಣ ಹ್ಯಾಗಿರುತ್ತದೆ?

ವ್ಯಾಪಾರಕ್ಕೆ ಸಿದ್ಧವವೆ.

ಪ್ರೊ॥ ಗೋಖಲೆ ಗಣಿತದ ಕನ್ನಡ ಭಾಷಾಂತರ ೨ ನೇ ಭಾಗ- (೫ ನೆ, ೬ ನೆ, ೭ ನೆ ಇತ್ತೆಯ ಹಾಗೂ ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗಾಗಿ) ೧-೨-೦

ಗಣಿತ ಉಪಪತ್ತಿ—(ರಾ. ಶ್ರೀ. ಕುಲಕರ್ಣಿಕೃತ) ೧-೦-೦

ನಿಬಂಧಮಾಲೆ—(ಶಾಳಾಖಾತೇದ ಸಲುವಾಗಿ ಮಂಜೂರಾದದ್ದು) ೦-೧೨-೦

ಪದ್ಯಾರ್ಥಬೋಧಿನಿ—೬ ನೆ ಯತ್ತೆ (ಶಿ. ಸೊ. ಕುಲಕರ್ಣಿ) ೦-೬-೬

ಮೋಲ್ಕಂಡ ಎರಡೂ ಪುಸ್ತಕ ಒಮ್ಮಲೆ ... ೦-೧೪-೦

ಇವುಗಳಲ್ಲದೆ ಹೊಸತರದ ಕ್ರಮಿಕ ಪುಸ್ತಕಗಳೂ ಶಿಫಾಸ ಮಂಜೂರಾದವೂ ಸಿಗುವವು.

ಶ್ರೀನಿವಾಸ ವಾಸುದೇವ ಹುಯಿಲಗೋಳ,

ಬುಕ್‌ಸೆಲರ ಬೆಳಗಾವ.

REGISTERED No. B. 19.

ಸೌದಾಗರ ಬುಕ್ ಡಿಪ್ಪೋ.

ಎಲ್ಲ ಶಾಲೆಗಳ ಸರಕಾರಿ, ಹೊಸ ಕ್ರಮಿಕ ಪುಸ್ತಕಗಳೂ ಖಾಸಗಿ, ಅರ್ಥಗಳೂ, ಮಾರ್ಗದರ್ಶಕ ಟಿಕಾ ಪುಸ್ತಕ, ಕಥೆಗಳೂ, ಪುರಾಣ ಗೋಖಲೆ ಗಣಿತ (ಗಣಿತದ ಉಪಪತ್ತಿ) ವಗೈರೆ ಪು. ಗಳು ಅವೆ. ಲೋಕೋಪಯುಕ್ತ ವಿದ್ಯಾರ್ಥಿಗಳ ಬೇಕಾದವುಗಳು, ತ್ರೈ... ಹೊಸ ಪುಸ್ತಕಗಳ ಹೊಸದಾಗಿ ಕಮಿಶನ್ ರು. ೧ಕ್ಕೆ ೧ ಅಣೆ ಪ್ರಕಾರ.

ಧಾರವಾಡ. } ಮಾದಪ್ಪ ಕ. ವೆ. ಹುಬ್ಬಳಿ
ಹಮಿದಾ ಸಾಬ ಸೌದಾಗರ,

ಕನ್ನಡ ಡಾಯರಿ.

ಕನ್ನಡ ಡಾಯರಿ:— ಪ್ರತಿ ವರ್ಷದಂತೆ ಮುಂದಿನ ವರ್ಷದ ಅಂದರೆ, ೧೯೦೭ನೇ ಇಸ್ವಿಯ ಕನ್ನಡ, ಮರಾಠಿ, ಇಂಗ್ಲೀಷ ಭಾಷೆಯಲ್ಲಿ ಡಾಯರಿಗಳನ್ನು ಮುದ್ರಿಸಿ ಅವೆ. ಡಾಯರಿಗಳು ನವೆಂಬರ ೧ನೇ ತಾರೀಖಿನಿಂದ ಮಾರಾಟಕ್ಕೆ ಸಿದ್ಧವಾಗಿವೆ. ೧೦ಕ್ಕೆ ೧೮ ರೂಪಾಯಿ ಹತ್ತು ಕೊಂಡರೆ ಒಂದು ಉಚಿತ ಕೊಡಲ್ಪಡುವದು. ಒಂದಕ್ಕೆ ನಾಲ್ಕು ಆಣೆ ಟಪಾಲ ಹಾಸೀಲು ಬೇರೆ ಬೀಳುವದು.

ಜ್ಞಾನೋತ್ಕರ್ಷಕರ ಮತ್ತು ಕಂಪನಿ. ಧಾರವಾಡ.

ಶಾಲಾಪತ್ರ.

KANARESE

SCHOOL PAPER.

ಪುಸ್ತಕ ೪೨]   ಡಿಸೆಂಬರ ೧೯೦೬.   [ಸಂಚಿಕೆ ೧೨.

ಅನುಕ್ರಮಣಿಕೆ.   **ಪುಟ.**

೧. ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು ೨೬೫-೨೭೧
೨. ನಿರ್ಣಯ ಶಕ್ತಿಯು ೨೭೧-೨೭೩
೩. ರಾಜಸ್ಥಾನದ ಇತಿಹಾಸವು ೨೭೪-೨೭೮
೪. ತ್ರಾವಣಕೋರದ ಮಹಾರಾಜರ ಚರಿತ್ರೆಯು. ೨೭೮-೨೮೫
೫. ನೋಟೀಸುಗಳು ೨೮೫-೨೮೬
೬. ಪತ್ರವ್ಯವಹಾರ ೨೮೬-೨೮೮

CONTENTS.

1. Educational Intelligence and Useful Notes 265-271
2. Conscience. 271-273
3. The History of Rajasthan 274-278
4. The Raja of Travancoor. 278-285
5. Departmental Notice. 285-286
6. Correspondence 268-288

DHARWAR:

PRINTED AT THE KARNATIC BOOK DEPOT PRESS,

1906.

REGISTERED No. B. 19.

☞ ಸ್ವದೇಶಿ ಶಾಯಿ ಡಿಪೋ!

ಎಲ್ಲಾ ಕಡೆಯಲ್ಲಿಯೂ ಪ್ರಸಿದ್ಧಪಟ್ಟ ನಮ್ಮ ಉತ್ತಮವಾದ ನೀಲಿ ಕಪ್ಪು, ಕೆಂಪು, ಜಾಂಬಳಿ, ಹಸರು ಶಾಯೀಪುಡಿಯ ಗ್ರಾಹಕರಿಗೆ ೪ ಆಣೆಯ ಶಾಯಿ ಮೇಲೆ ೧೦೦ ಫೆನ್ಸೀಕಾರ್ಡುಗಳು; ೬ ಆಣೆಯ ಮೇಲೆ ತಾಂಬೂಲಬಿಹಾರ ಡಬ್ಬಿ ೧; ಇಲ್ಲವೆ H. B. ಪೇನಸಿಲ ಡಜನ ೧; ೮ ಆಣೆಯ ಮೇಲೆ ೧೦೦ ಫೆನ್ಸಿಕವರು; ಅಥವಾ ಗಂಧದ ಚದುರಂಗದ ಜೋಡು; ೧೨ ಆಣೆಯ ಮೇಲೆ ನಿರ್ಝರಪೇನ (ಒಮ್ಮೆ ಶಾಯಿ ತುಂಬಿದರೆ ೩೦,೦೦೦ ಶಬ್ದ ಬರೆಯುತ್ತದೆ.) ೧ ರೂಪಾಯಿಯ ಮೇಲೆ ಶ್ರೀಗಂಧದ ಗಿಳಿಯ ಆಕಾರದ ಬೀಸಣಿಗೆ; ೨ ರೂಪಾಯಿಯ ಮೇಲೆ ಕಿಸೆಯೊಳಗಿನ ಛಾಪಖಾನೆ (ಬೇಕಷ್ಟು ಮಜಕೂರು ಛಾಪಿಸಿಕೊಳ್ಳಬಹುದು.) ೨ ರೂಪಾಯಿ ೧೨ ಆಣೆಯ ಮೇಲೆ ಟಕಾವು ಟಾಯಿಮಪೀಸ ಘಡಿಯಾರ; ೪ ರೂಪಾಯಿಯ ಮೇಲೆ ಪ್ರಕೃತಿ ಮನೋವೇಧಕ ಪ್ರಿನ್ಸಿನ ೧೨ ಸುಂದರ ಚಿತ್ರಗಳು; ೬ ರೂಪಾಯಿಯ ಮೇಲೆ ಸುಂದರ ವಾಚ್ ಪ್ರಕಟ!!! ಟಪಾಲಖರ್ಚು ಬೇರೆ, ವಿಶೇಷ ಮಾಹಿತಿ ಪತ್ರದ್ವಾರ.

ಉಪಯುಕ್ತ ಪುಸ್ತಕಾಲಯ.

☞ ಮಾರ್ಚ ಅಂತ್ಯದೊಳಗಾಗಿ ನಮ್ಮ ಈ ಪೈ ದಳದ ೪ ರೂ. ಯ ಶಾಯಿ ಗ್ರಾಹಕರಿಗೆ ಹೊಸ ಇಯತ್ತೆಯ ನಿಯಮಗಳಿಗನುಸರಿಸಿ ತಯಾರಿಸಿದ ೨-೩ನೇ ಇಯತ್ತೆಯವು ಕೂಡಿ ೧೬೦ ಮಾದರಿ ಚಿತ್ರಗಳು; ೨ ರೂ. ಯ. ಮೇಲೆ ೬೪ ಚಿತ್ರಗಳು; ೧ ರೂ. ಯ ಮೇಲೆ ೩೦ ಚಿತ್ರಗಳು ಪ್ರಕಟ!! ಟ. ಖರ್ಚು ಬೇರೆ. ನಮ್ಮ ಡಿಪೋದಲ್ಲಿ ಶಾಲೋಪಯೋಗಿ ವಗೈರೆ ಕನ್ನಡ, ಮರಾಠಿ ಕ್ರಮಿಕ ವಗೈರೆ ಪುಸ್ತಕಗಳೂ; ಶುದ್ಧ ಪಂಜಾಬದ ಕಾಡದ "ಹಿಂಗು" ಥಂಡಿಯ ಎಲ್ಲ ಬೇನೆ ಹಾರಕ "ಗೃಹಸಂಜೀವನತೈಲ"ವೂ ದೊರೆಯುವವು.

ಗಣಪತಿ ನಾಗಪ್ಪಾ ತಾರೀಬಾಗಿಲ, ಮ್ಯಾನೇಜರ,
ಪೋಸ್ಟ್ ಹೊನ್ನಾವರ ಜಿಲ್ಲಾ ಕಾನಡಾ.

ಶಾಲಾಪತ್ರಕ.

ಪದ್ಯಂ

ಶ್ರೀಯುತವಿದ್ಯಾಗುರುವರ್ಯರುನ್ನತಿಕೆಯಿಂ ಸತ್ಕೃತ್ಯೋತ್ಕರ್ಷದಾ
ಯಾಸಾತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ಆಯುದಿಂದಿತ್ತವರೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಡುದು ।
ಸಾಯುಂದೋಷವಶಿದ್ಧವೇಳ್ವುದು ಬುಧರ್ಜ್ಞಾನಾಭಿವೃದ್ಧಿಪ್ರಿಯರ್ ॥೧

ಪುಸ್ತಕ ೪೨.] ದಶಂಬರ ೧೯೦೬. ಸಂಚಿಕೆ ೧೨

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು

ಮಿ. ಕೃಷ್ಣಾಜಿ ಗೋವಿಂದ ಗಜ್ಜೆ ಎಂಬ ತರುಣ ಪದವೀಧರರು ಪ್ರೊಫೆಸರ ಗೋಖಲೆಯವರು ಬರೆದ ಅಂಕಗಣಿತದ ಎರಡನೇ ಭಾಗವನ್ನು ಈ ಮೊದಲೇ ಭಾಷಾಂತರಿಸಿ ಮಾರಾಟಕ್ಕಿಟ್ಟಿರುವದು. ಎಲ್ಲರಿಗೂ ಗೊತ್ತಾಗಿದೆ ಅದರಂತೆ ಈಗ ಮೊದಲನೇ ಭಾಗದ ಭಾಷಾಂತರವನ್ನು ಮಾಡಿ ಮುದ್ರಿಸಿ ಮಾರಾಟಕ್ಕೆ ಇಟ್ಟಿದ್ದಾರೆ. ಇದಾದರೂ ಎರಡನೇ ಭಾಗದಂತೆ ಚೆನ್ನಾಗಿರುತ್ತದೆ. ಗೋಖಲೆಯವರ ಅಂಕಗಣಿತವು ಪೃಥ್ವಿಯೊಳಗಿನ ಯಾವತ್ತೂ ಸುಧಾರಿಸಿದ ರಾಷ್ಟ್ರಗಳಲ್ಲಿ ಮಾನ್ಯತೆಯನ್ನು ಪಡೆದಿರುವದು. ಇದರಿಂದ ಅದರ ಪ್ರಯೋಜನವೂ ಯೋಗ್ಯತೆಯೂ ಎಷ್ಟಿರುವದೆಂಬದು ಒಡೆದು ಕಾಣುತ್ತದೆ. ಹಿಂದುಸ್ಥಾನದೊಳಗಿನ ಯಾವತ್ತೂ ಪ್ರಚಲಿತ ಭಾಷೆಗಳಲ್ಲಿ ಅದನ್ನು ಭಾಷಾಂತರಿಸಿರುವರು. ಮಿ. ಗಜ್ಜೆ ಇವರು ಅದನ್ನು ಕನ್ನಡಕ್ಕೆ ಪರಿವರ್ತಿಸಿ ಕನ್ನಡಿಗರಿಗೆ ದೊಡ್ಡದೊಂದು ಉಪಕಾರ ಮಾಡಿದರೆಂದು ಹೇಳಲಿಕ್ಕೆ ಅಡ್ಡಿಯಿಲ್ಲ.

ಈ ಸಾರೆಯು ಗಂಡುಮಕ್ಕಳ ಟ್ರೇನಿಂಗಕಾಲೇಜದ ಪ್ರವೇಶ ಪರೀಕ್ಷೆಗೆ ಧಾರವಾಡ ಜಿಲ್ಲೆಯಿಂದ ಒಂದುನೂರಾಐವತ್ತುನಾಲ್ಕು ಮಂದಿಯೂ ಬೆಳಗಾವ ಜಿಲ್ಲೆಯಿಂದ ನಾಲ್ವತ್ತೈದು ಮಂದಿಯೂ ಬಿಜಾಪೂರ ಜಿಲ್ಲೆಯಿಂದ ಮೂವತ್ತುನಾಲ್ಕು ಮಂದಿಯೂ ಬಂದಿದ್ದರು. ಇವರನ್ನೂ ಅಂಕಗಣಿತ, ಇತಿಹಾಸ, ಭೂಗೋಲ, ನಿಬಂಧ ಭಾಷಾವಿಷಯಗಳಲ್ಲಷ್ಟೇ ಪರೀಕ್ಷಿಸಿದರು. ಸಾಕಷ್ಟು ಗುಣಗಳನ್ನು ಪಡೆದವರಲ್ಲಿ ಆಯಾ ಜಿಲ್ಲೆಗಳಿಗೆಂದು ಕ್ರಮವಾಗಿ (೩೦, ೧೮, ೨೦, ೧೪) ಜನ ವಿದ್ಯಾರ್ಥಿಗಳನ್ನು ಕಾಲೇಜದಲ್ಲಿ ಸೇರಿಸಿಕೊಂಡರು. ಇವರಲ್ಲಿ ಕೆಲ ಜನರು ಬಿನ ಪಗಾರದವರಿರುವರು.

ಗಂಡುಮಕ್ಕಳ ಕಾಲೇಜದ ಸರಟಿಫಿಕೇಟ ಪರೀಕ್ಷೆಯು ಮುಗಿದು ಅದರ ಪರಿಣಾಮವು ಪ್ರಸಿದ್ಧವಾಯಿತು. ಅದರೊಳಗಿನ ಎರಡನೇ ಮೂರನೇ ವರುಷದವರ ಪಟ್ಟಿಯನ್ನು ಈ ಸಂಚಿಕೆಯಲ್ಲಿ ಮುದ್ರಿಸಿದ್ದೇವೆ. ಅದೇ ಮೋರೆಗೆ ಹೆಣ್ಣು ಮಕ್ಕಳ ಟ್ರೇನಿಂಗಸ್ಕೂಲಿನ ಎರಡನೇ ವರುಷದ ಪರಿಣಾಮ ಪತ್ರಿಕೆಯನ್ನು ಮುದ್ರಿಸಿರುವೆವು. ಈ ಸಾರೆ ಉತ್ತೀರ್ಣರಾದ ಹೆಣ್ಣುಮಕ್ಕಳಲ್ಲಿ ಇಬ್ಬರ ಗಂಡಂದಿರು ಗಂಡುಮಕ್ಕಳ ಕಾಲೇಜದಲ್ಲಿ ಕಲಿತು ಸರಟೀಫಿಕೇಟುಗಳನ್ನು ಪಡೆದರು. ಈ ಟ್ರೇಂಡದಂಪತಿಗಳನ್ನು ಒಂದೇ ಗ್ರಾಮದ ಶಾಲೆಗಳಲ್ಲಿ ನೇಮಿಸಿರುವರು. ಹೋದವರ್ಷ ಹೋದವರಲ್ಲಿಯೂ ಇಂಥ ಸುಶಿಕ್ಷಿತ ದಂಪತಿಯೊಂದು ಇತ್ತು. ಈ ಸಂಗತಿಯು ವಿದ್ಯಾಪ್ರಸಾರದ ಏಳ್ಗೆಯನ್ನು ಒಳಿತಾಗಿ ವ್ಯಕ್ತಗೊಳಿಸುತ್ತದೆ.

ಹೆಣ್ಣುಮಕ್ಕಳ ನಾರ್ಮಲ್ ಶಾಲೆಯ ಪ್ರವೇಶ ಪರೀಕ್ಷೆಯು ಮುಗಿಯಿತು. ಒಟ್ಟಿಗೆ ೨೦ ಮಂದಿ ಪರೀಕ್ಷೆಗೆ ಕುಳಿತಿದ್ದರು. ಅವರಲ್ಲಿ ಹನ್ನೊಂದು ಮಂದಿ ಧಾರವಾಡ ಜಿ

ಲ್ಲೆಯವರೂ ಒಂಭತ್ತು ಮಂದಿ ಬೆಳಗಾವ ಜಿಲ್ಲೆಯವರೂ ಇರುವರು. ಕಾರವಾರ ವಿಜಾಪೂರಗಳಿಂದ ಯಾರೂ ಬರಲಿಲ್ಲ. ಇವರಲ್ಲಿ ಚೆನ್ನಾಗಿ ಉತ್ತೀರ್ಣರಾದ (೧೧) ಮಂದಿಯನ್ನು ಶಾಲೆಯಲ್ಲಿ ಸಂಬಳದೊಂದಿಗೆ ತಕ್ಕೊಂಡರು.

ಈ ವರ್ಷದ ಮುಲಕೀ ಪರೀಕ್ಷೆಗೆ ಕುಳಿತ ಪ್ರಾಕ್ಟಿಸಿಂಗ ಸ್ಕೂಲಿನ ಇಪ್ಪತ್ತು ಮಂದಿ ವಿದ್ಯಾರ್ಥಿಗಳಲ್ಲಿ ಎಲ್ಲರೂ ತೇರ್ಗಡೆ ಹೊಂದಿದರೆಂದು ತಿಳಿಸಲಿಕ್ಕೆ ತುಂಬಾ ಸಮಾಧಾನವೆನಿಸುವದು. ಇದು ಆ ಶಾಲೆಯ ಅಧ್ಯಾಪಕರ ಕರ್ತವ್ಯದಕ್ಷತೆಯನ್ನೂ, ಶ್ರಮವನ್ನೂ ಸರಸವಾಗಿ ವ್ಯಕ್ತಗೊಳಿಸುತ್ತದೆ.

ಧಾರವಾಡ ಜಿಲ್ಲೆಯ ನಾಲ್ಕನೇ ಅಸಿಸ್ಟಂಟ ಡಿಪೂಟಿಯಾದ ಮಿ. ನಾಝುರೆ ಇವರು ಅನಾರೋಗ್ಯದ ಮೂಲಕ ಎರಡು ತಿಂಗಳವರೆಗೆ ರಜಾ ತೆಗೆದುಕೊಂಡದ್ದರಿಂದ ಅವರ ಸ್ಥಳಕ್ಕೆ ಪ್ರಾಕ್ಟಿಸಿಂಗಸ್ಕೂಲ ಮಾಸ್ತರರಾದ ಮಿ. ದೇಶಪಾಂಡೆ ಇವರನ್ನು ನೇಮಿಸಿದರು. ಪ್ರಾಥಮಿಕ ಶಾಲೆಯ ಅಧ್ಯಾಪಕರನ್ನು ಮುಂದೆ ತಂದದ್ದಕ್ಕಾಗಿ ಅಧಿಕಾರಿಗಳ ಔದಾರ್ಯವನ್ನೂ ಸಹಾನುಭೂತಿಯನ್ನೂ ಕೊಂಡಾಡತಕ್ಕದ್ದು.

ಮೇಲ ಟ್ರೇನಿಂಗಕಾಲೇಜ ೩ನೇವರ್ಷ.

	ಮಾರ್ಕ್ಸ.	ಸರ್ಟಿಫಿಕೇಟ
ಮಂಟಗಣಿ ಎ. ಅ.	೩೩-೯	೨೫ ರೂ.
ತಾಲೀಕೋಟ ವೆ. ನ.	೬೮-೧	,,
ರಹಿಮಾನಭಾಯಿ.	೩೩-೯	,,
ಪತ್ತಾರ.	೬೬-೮	,,
ಸಯ್ಯದ.	೬೯-೮	,,
ಕಾಖಂಡಿಕಿ.	೬೩-೪	,,

೭ ಪಾಟೀಲ ನಾ. ಸಿ.	೫೬-೧	೨೦ ರೂ.
೮ ಕುಲಕರ್ಣಿ ಸಿ. ನ.	೬೧-೫	೨೫ ರೂ.
೯ ಹಂಚಿನಾಳ.	೫೯-೫	೨೦ ರೂ.
೧೦ ಕುಲಕರ್ಣಿ ಎ. ಹ.	೫೭-೮	,,
೧೧ ಸಿಂದಗಿ.	೫೯-೧	,,
೧೨ ಸೆಟ್ಟಿ ವಾ. ವಾ.	೬೪-೮	೨೫ ರೂ.
೧೩ ಸಾವಕಾರ.	೫೬-೩	,,
೧೪ ಗೂಗ್ಗಿ.	೫೩-೬	,,
೧೫ ಆಣೆಪ್ಪನವರ.	೬೦-೩	೨೫ ರೂ.
೧೬ ಶೈ.	೬೫-೪	,,
೧೭ ಸಿರೂರ.	೫೫-೮	೨೦ ರೂ.
೧೮ ಮಲ್ಲನಗೌಡರ	೬೩-೭	೨೫ ರೂ.
೧೯ ಕಸಬೇಕರ.	೬೦-೩	೨೫ ರೂ.
೨೦ ಕುಲಕರ್ಣಿ ನಾ. ನ.	೫೯-೨	೨೦ ರೂ.
೨೧ ಹೆಗಡೆ ವೆ. ಪ.	೬೪-೮	೨೫ ರೂ
೨೨ ಜೋಶಿ ಕೆ. ಗ.	೫೮-೦	೨೦ ರೂ.
೨೩ ಪದಕಿ.	೫೯-೧	೨೦ ರೂ.
೨೪ ಪ್ರಭು	೫೩-೩	,,
೨೫ ಮುಂಗರ್ಸಿ	೫೮-೯	,,
೨೬ ಜ್ಯಾಲಿಸತ್ತಿಗಿ.	೬೦-೬	೨೫ ರೂ.
೨೭ ಕಾಗವಾಡ.	೬೦-೭	,,
೨೮ ಜೋಶಿ ದ. ಗೋ.	೫೬-೧	೨೦ ರೂ.
೨೯ ಚರಂತೀಮಠ.	೬೦-೬	೨೫ ರೂ.
೩೦ ಕೊರ್ತಿ.	೫೦-೧	೨೦ ರೂ.
೩೧ ನಾಗಾರ್ಜಿ.	೫೩-೯	,,
೩೨ ಯರಾಜಿ.	೫೫-೨	,,
೩೩ ರಡ್ಡಿ.	೫೩-೯	,,
೩೪ ಬುಕ್ಕಿಟ್ಟಗಾರ.	೫೦-೯	,,
೩೫ ಪೂಜಾರಿ.	೫೮-೧	,,

೩೬ ದೇಶಪಾಂಡೆ ರಾ. ಗೊ.	೬೬-೩	೨೫ ರೂ.
೩೭ ಕಬರಮಂಡಲಗಿ.	೬೧-೯	,,
೩೮ ಬುಲಬುಲೆ.	೫೯-೫	೨೦ ರೂ.
೩೯ ಸಾಸ್ಲಹಳ್ಳಿ.	೬೪-೬	೨೫ ರೂ.
೪೦ ಹುಂಬೇರಿ.	೬೧-೬	,,
೪೧ ಲಕ್ಕೀಪುರ.	೫೭	೨೦ ರೂ.
೪೨ ಕುಲಕರ್ಣಿ ಆ. ವೆ.	೬೬	೨೫ ರೂ.
೪೩ ಹೊಸಹಳ್ಳಿ.	೬೩-೮	,,
೪೪ ಸೂರ್ಯವಂಶಿ.	೫೯	೨೦ ರೂ.
೪೫ ಪ್ರಯಾಗ.	೪೩-೭	,,
೪೬ ಶಿರಹಟ್ಟಿ.	೩೭-೮	ನಾಪಾಸ

ಮೋಲಟರಿ (ಸಿಂಗಕಾಲೇಜ) ೯ ನೇ ವರ್ಷ

	ಮಾರ್ಕ್ಸ.	ಸರಟೀಫಿಕೀಟು.
೧ ಪೂಜಾರ ಪು ಪ್ರ-	೮೧-೫	೧೫ ರೂ
೨ ಖಾಜಿ.	೬೪ ೬	,,
೩ ಕುಲಕರ್ಣಿ ಶ್ರಿ. ಕೃ.	೭೩-೬	,,
೪ ದೀಕ್ಷಿತ	೭೪-೮	,,
೫ ಕುಲಕರ್ಣಿ ಸ. ನಾ.	೭೦-೫	,,
೬ ಸಾತೇನಹಳ್ಳಿ.	೭೧-೯	,,
೭ ಹುಕ್ಕೇರಿ.	೬೧-೪	,,
೮ ಕಟ್ಟಿ.	೬೮-೭	,,
೯ ಬಿಸರಹಳ್ಳಿ.	೬೭-೨	,,
೧೦ ತ್ರಿಗಡಿ.	೬೬ ೪	,,
೧೧ ವಿಜಾಪೂರ.	೬೫-೫	,,
೧೨ ಜಾಂಬಳೆ.	೬೮-೪	,,
೧೩ ಪಾಟೀಲ. ಶ್ರೀ. ವಾ.	೬೫ ೩	,,
೧೪ ಕುಲಕರ್ಣಿ ನಾ. ರಾ.	೬೦-೬	,,
೧೫ ಅರ್ಚಕ.	೫೮-೩	೧೨ ರೂ.
೬ ಪುಳಗಂದ ಭ. ಜ.	೬೧-೫	೧೫ ರೂ.

೧೭ ಹಾಡಲಗೇರಿ.	೬೬ ೪	,,
೧೮ ನಾಡಗೇರ.	೫೬-೯	೧೨ ರೂ
೧೯ ಹಿರೇಜಾಡೆ.	೫೭-೪	೧೨ ರೂ
೨೦ ಅಡಬಡ್ಡಿ.	೬೪ ೫	೧೫ ರೂ
೨೧ ಘತಶೆ	೬೧-೫	,,
೨೨ ಹಿರೇಮಠ.	೬೨-೨	,,
೨೩ ಅರಹುಣಸಿ	೫೫-೫	೧೨ ರೂ
೨೪ ಕುಲಕರ್ಣಿ ಕೃ. ಅ.	೬೨ ೩	೧೫ ರೂ
೨೫ ಮೇಸ್ತ್ರೀ.	೫೬-೨	೧೨ ರೂ
೨೬ ಬಾಗೇವಾಡಿ.	೬೨-೨	೧೫ ರೂ
೨೭ ಅಂಗಡಿ.	೫೭-೪	೧೨ ರೂ
೨೮ ಗೋಠೆ.	೬೧-೩	೧೫ ರೂ
೨೯ ಕಮ್ಮಾರ.	೫೪-೧	೧೨ ರೂ
೩೦ ಮಾರೀಹಾಳ.	೫೮-೧	,,
೩೧ ಚಿಟ್ನೀಸ.	೫೪-೧	,,
೩೨ ಮಾರಡಗಿ	೫೮-೧	,,
೩೩ ದೇವರಾಶ್ರಿ.	೫೭-೬	,,
೩೪ ಜೋಶಿ. ರಾ. ಕೃ.	೫೫	,,
೩೫ ಆಲೂರ.	೫೩-೨	,,
೩೬ ಚಾಪಗಾಂವ.	೫೩-೨	,,
೫೭ ಕುಲಕರ್ಣಿ ಹ. ರ.	೫೪ ೨	,,
೩೮ ಕುಲಕರ್ಣಿ ಶೇ. ಗೊ.	೫೪-೬	,,
೩೯ ನಾಯಿಕ ಮಾ. ಸ.	೫೭-೬	,,
೪೦ ಕಾಖಂಡಕಿ ಸೇ. ಶ್ರಿ.	೫೨	,,
೪೧ ಗುಡಿನ್	೬೦-೧	೧೫ ರೂ
೪೨ ಕಲಘಟಗಿ.	೫೪-೬	೧೨ ರೂ
೪೩ ಕೇಡಬಾಳ	೪೯ ೪	,,
೪೪ ಮೊಖಾಶಿ	೬೧-೭	೧೫ ರೂ
೪೫ ಸಿದ್ದಣ್ಣವರ.	೫೨	೧೨ ರೂ
೪೬ ಹೊನ್ನಾವರ.	೫೬-೫	೧೨ ರೂ

೪೭ ಬಸಾಪುರ. ೫೧-೪ ,,
೪೮ ಕುಲಕರ್ಣಿ ಬಾ. ಕು. ೪೮ ,,
೪೯ ಪಾವಡಕಟ್ಟಿ. ೫೨-೪ ,,
೫೦ ನೇಸರಗಿ. ೪೭-೭ ,,
೫೧ ಕುಲಕರ್ಣಿ ಗ. ಸು. ೫೭-೨ ,,
೫೨ ಯಕ್ಕುಂಡಿ. ೬೫-೬ ೧೫ ರೂ
೫೩ ಇಟಗಿ. ೫೫-೯ ೧೨ ರೂ
೫೪ ದೇವಳೆ, ೪೫-೫ ,,

(ಫೀಮೇಲ ಟ್ರೇನಿಂಗಕಾಲೇಜದ) ೨ನೇ ವರ್ಷ

ಮಾರ್ಕ್ಸ ಸ. ಫೀ.

೧ ಬಸವ್ವಾ ಮುದಲಿಂಗಯ್ಯಾ ಸಾಲಿ. ೭೪-೨ ೨೦ ರೂ.
೨ ಪಾರ್ವತೀಬಾಯಿ ಶಾಮರಾವ ನಾಡಕರ್ಣಿ. ೬೬-೮ ,,
೩ ಗಂಗವ್ವಾ ರೇವಣಶಿದ್ಧಯ್ಯಾ ಹಿರೇಮಠ. ೬೦-೧ ,,
೪ ಅನಸೂಯಾ ದತ್ತಾತ್ರಯ ಹೆಮ್ಮಾಡಿ ೬೦ ,,
೫ ಈರವ್ವಾ ಭೀಮಪ್ಪ ಕಳಸದ ೪೯-೪ ೧೫ ರೂ.
೬ ಸೀತಾಬಾಯಿ ನಾಗಪ್ಪಾ ಯಾಜಿ ೬೦ ೮ ೨೦ ರೂ.
೭ ಲಿಂಗವ್ವಾ ರಾಮನಗೌಡ ೫೧-೨ ೧೫ ರೂ.
೮ ರೋಸಾತಂದಿ ಒಬ್ಬೇದಪ್ಪ ಗುಂಡಿ ೪೯-೮ ,,
೯ ನೀಲಗಂಗವ್ವಾ ಲಿಂಗಪ್ಪಾ ಶಿವಮೂರ್ತಿ ೪೮-೪ ,,
೧೦ ಬಸವ್ವಾ ಭೂಪಶೆಟ್ಟಿ. ೩೭-೧ ನಾಪಾಸ
೧೧ ನೀಲಗಂಗವ್ವಾ ರಾಜಪ್ಪಾ ಧಾರವಾಡ ೬೦-೧ ೨೦ ರೂ.

CONSCIENCE.

ನಿರ್ಣಯಶಕ್ತಿಯು.

(ಬರೆದು ಬಂದದ್ದು)

ಕಾಮ — ಅರಿಷಡ್ವರ್ಗಗಳಲ್ಲಿ ಆದ್ಯಸ್ಥಾನಾಧಿಷ್ಠಿತವಾದ ಕಾಮವೆಂಬುದು ಎಲ್ಲ ದುರ್ವಿಕಾರಗಳಲ್ಲಿ ಹೆಚ್ಚಿನದೆಂದು

ಬೇರೆ ಹೇಳಲಿಕ್ಕೆ ಬೇಡ. ಆವ ಕಾಮವ್ಯಾಮೋಹದಿಂದ ತರಗೆಲೆ ಮುಕ್ಕಿ ತಪಸ್ಸು ಮಾಡಿದ ವಿಶ್ವಾಮಿತ್ರ ಪರಾಶರಾದಿ ಬ್ರಹ್ಮರ್ಷಿಗಳೂ, ಸಕಲಸಂಪದಗಳನ್ನು ಅನುಭೋಗಿಸುವ ಇಂದ್ರಾದಿ ದೇವತೆಗಳೂ ಪರಾಜಿತರಾದರೋ, ಅದೇ ಕಾಮವು ನಿರ್ಬಲರಾದ ನಮ್ಮನ್ನು ಏನು ಮಾಡಲಿಕ್ಕಿಲ್ಲ! ಪ್ರಬಲನಾದ ವೈರಿಯನ್ನು ವಶಮಾಡಿಕೊಳ್ಳಲಿಕ್ಕೆ ಹೆಚ್ಚು ಸಾಹಸವನ್ನು ಮಾಡಬೇಕಾಗುವಂತೆ ಇಂತಹ ಬಲಿಷ್ಠವಾದ ಕಾಮವನ್ನು ನಿರ್ಣಯ ಬುದ್ಧಿಯ ಸ್ವಾಧೀನದಲ್ಲಿರಿಸಬೇಕಾದರೆ ಅತಿಸಾಹಸವನ್ನು ಮಾಡಬೇಕಾಗುವದು. ಶರೀರಗಳಲ್ಲಿರುವ ಘಟಕ ದ್ರವ್ಯಗಳ ಸ್ವಾಭಾವಿಕ ಪರಿಣಾಮವೇ ಈ ವಿಕಾರವದೆ. ಪ್ರಪಂಚದೊಳಗಿನ ಸ್ತ್ರೀಪುರುಷರ ಶರೀರರಚನೆ, ಗರ್ಭಧಾರಣೆ, ಗರ್ಭಪೋಷಣೆ, ಶಿಶುಗಳ ಉತ್ಪತ್ತಿ ಮುಂತಾದವುಗಳ ಸಂಬಂಧವಾಗಿ ವಿಚಾರಮಾಡಿ ನೋಡಿದರೆ, ಈ ವಿಕಾರಕ್ಕೆ ಒಳಗಾಗಬೇಕೆಂದು ಒಡೆದು ಕಂಡರೂ, ಮರ್ಯಾದೆಯನ್ನು ಬಿಡುವದು ಸರ್ವಥಾ ತಕ್ಕುದಲ್ಲ. ವಿಷವನ್ನು ಸ್ವಲ್ಪ ಪ್ರಮಾಣದಿಂದ ತೆಗೆದುಕೊಂಡರೆ ಹಿತವಾಗುವಂತೆ ಅತಿ ಪ್ರಮಾಣವಾಗಿ ಪ್ರಾಶನಮಾಡಿದರೆ ಅಹಿತವಾಗುವದಿಷ್ಟೇ ಅಲ್ಲ, ಜೀವಕ್ಕೂ ಎರವಾಗಬೇಕಾಗುತ್ತದೆ. ಆದುದರಿಂದ ವೈದ್ಯನು ಹೇಳಿದಷ್ಟು ಮಾತ್ರ ತೆಗೆದುಕೊಳ್ಳುವದು ಆರೋಗ್ಯಕರವು. ಹೀಗೆಯೇ ಈ ಕಾಮವಿಕಾರಗಳು ವಿವೇಕ ಬುದ್ಧಿಯಿಂದ ಗೊತ್ತುಮಾಡಿಕೊಡಲ್ಪಟ್ಟ ಮರ್ಯಾದೆಯೊಳಗೆ ಇರತಕ್ಕದ್ದು. ಉಲ್ಲಂಘನವಾದರೆ ವಿವೇಕ ಬುದ್ಧಿಯ ಮೇಲೆಯೇ ಈ ವಿಕಾರದ ಅಮಲು ಅಮಿತವಾಗಿ ನಡೆದು ಅಸಂಗತ ಕೆಲಸಗಳಲ್ಲಿ ಮನಸ್ಸು ತೊಡಗುತ್ತದೆ. ಆಗ 'विवेक भ्रष्टानाम् भवति विनिपातः शतमुखः' ಎಂಬವರ ಅನುಭವವಾಗಹತ್ತುವದು. ನೋಡಿರಿ. ಒಂದು ಕಾಮವಿಕಾರದಿಂದ,

ವೃತ್ತಂ॥ ಮಾನದ ಹಾನಿಯೊಂದು ನಿಜದೈನ್ಯದಕೀರ್ತಿರಡಾ
ತ್ಮಲಜ್ಜೆಯುಂ।

ತಾನುಳಿದಿರ್ಪ ಬಿನ್ನಮುದು ಮೂರಪಹಾಸ್ಯಮೆ
ನಾಲ್ಕು ಮೋಹ'ಸುಹೃ"

ದ್ಧಾನಿಯದಯ್ದು ವಿತ್ತದಳಿವಾರ'ಗಡ! ಮುಕ್ತಿಯ
ನೆಯ್ದದಿರ್ಪುದೇ।

ಲೀನೆಗಳ್ದೀಳರಾಟದಿನಣಂ ಕೆಡುಗುಂ ಗಣಿಕಾರ
ತಿಪ್ರಿಯಂ॥ ೧॥

ಇಂತು ಮಾನಾದಿ ಸಪ್ತಸುಖಗಳಿಗೆ ಎರವಾಗಬೇಕಾಗುವ ದಿಷ್ಟೇ ಅಲ್ಲ, ಶರೀರವು ಬೇನೆಯ ತವರೂರಾಗಿ ತಜ್ಜನಿತ ದುಃಖವನ್ನು ಎಷ್ಟೋ ಸಂತತಿಯ ವರೆಗೆ (ವಂಶಪಾರಂಪ ರ್ಯವಾಗಿ) ಅನುಭವಿಸಬೇಕಾಗುವದು. ಇದೇನು ಕಡಿಮೆ ಯ ಹಾನಿಯೆ! ಆದಾಯ್ದು ನೋಡಿರಿ!

ಒಂದು ವಿಕಾರ ಪ್ರಾಬಲ್ಯ ಮಾತ್ರದಿಂದಲೇ ಇಷ್ಟು ಸ ರ್ವಸ್ವವನ್ನು ಒಕ್ಕಲಿಕ್ಕುವ ಪ್ರಸಂಗವು ಬರುತ್ತಿದ್ದ ಬಳಿಕ ಅನೇಕ ವಿಕಾರಗಳು ಗಂಟುಬಿದ್ದರೆ ಎಷ್ಟು ಅನರ್ಥವಾದೀ ತು. 'ಸತಿಯರು ಪರಪುರುಷರನ್ನು ಕಣ್ಣೆತ್ತಿ ಸಹ ನೋ ಡಲಾಗದು' ಎಂದು ನಮ್ಮ ಪ್ರಾಚೀನ ಸಾಮಾಜಿಕರು ಸ್ತ್ರೀಯರಿಗೆ ಪ್ರತಿಬಂಧ ಮಾಡಿದಂತೆ ಪುರುಷರಿಗೂ ಮಾಡಿ ದ್ದರೆ ಎಷ್ಟೋ ವಿಹಿತವಾಗುತ್ತಿತ್ತು. ಸ್ವೈಲುಬಿಟ್ಟದ್ದು ಸ ರ್ವಕ್ಕೂ ಅನಿಷ್ಟವಾಗಿದೆ. ಶಿಕ್ಷಣಾಮೃತವನ್ನು ಮನದ ಣಿ ಕುಡಿದು ಸುಶಿಕ್ಷಿತರಾದ ಹಲಕೆಲವು ಪದವೀಧರರು ಕೂ ಡ ಈ ವಿಷಯ ಸುಖದಾಶೆಗೊಳಗಾಗಿ ಕೇಡು ತಂದುಕೊ ಳ್ಳುವದು ಎಲ್ಲರಿಗೂ ಗೊತ್ತುಂಟು. ಹೀಗಾಗಲಿಕ್ಕೆ ಕಾರಣ ವೇನಂದರೆ, ವಿವೇಕ ಬುದ್ಧಿಯನ್ನು ಮನಸ್ಸಿನ ಅಧೀನದ ಲ್ಲಿಡುವ ಒಂದು ಬಗೆಯ ವಿಶಿಷ್ಟ ಅಭ್ಯಾಸಕ್ರಮವು, ಪ್ರತಿ ಒಬ್ಬ ಸುಶಿಕ್ಷಿತನಿಗೆ ಗೊತ್ತಿರುವದಿಲ್ಲ. ಆ ಅಭ್ಯಾಸವಿ ದ್ದರೆ ವಿಕಾರಗಳನ್ನು ಬದಿಗೊತ್ತಲು ಸಮರ್ಥನಾಗುವನು. ತಕ್ಕಷ್ಟು ಇಂದ್ರಿಯ ನಿಗ್ರಹವನ್ನು ಮಾಡುವ ಚಟವು ಚಿ ಕ್ಕಂದಿನಿಂದಲೇ ಬೀಳತಕ್ಕದ್ದು.

THE HISTORY OF RAJASTHAN.

ರಾಜಸ್ಥಾನದ ಇತಿಹಾಸವು

ಈ ಮೇರೆಗೆ ಹಮೀರನು ಜಯಶಾಲಿಯಾಗಿ ಒಳ್ಳೇ ಪ್ರತಾಪಿಯಾದ ಸಾರ್ವಭೌಮನೆಂದೆನಿಸಿಕೊಂಡು, ಮೇವಾಡದ ರಾಜ್ಯಮರ್ಯಾದೆಯನ್ನು ಬೆಳಸಿ, ನ್ಯಾಯದಿಂದ ಪ್ರಜಾಪಾಲನೆಯನ್ನು ಮಾಡುತ್ತ, ಬಹು ದಿವಸ ರಾಜ್ಯ ಸುಖವನ್ನು ಭೋಗಿಸಿ, ತನ್ನ ಹೆಸರು ಚಿರಕಾಲವಾಗಿ ಉಳಿಯುವಂತೆ ಮಾಡಿ ವೃದ್ಧನಾಗಿ ಮಡಿಯಲು, ಅವನ ಮಗನಾದ ಕ್ಷೇತ್ರಸಿಂಗನು ತಂದೆಯ ತರುವಾಯ ಚಿತೋಡದ ಪಟ್ಟಕ್ಕೆ ಕುಳಿತನು. ಇವನು ಸನ್ ೧೩೬೫ ರಲ್ಲಿ ಹುಟ್ಟಿದ್ದನು. ಇವನೂ ತಂದೆಯಂತೆ ಪರಾಕ್ರಮಶಾಲಿಯೂ ಪ್ರಜಾಹಿತಚಿಂತಕನೂ ಎನಿಸಿಕೊಂಡು ಮೇವಾಡದ ರಾಜ್ಯ ವಿಸ್ತಾರವನ್ನು ಬೆಳಸಿದನು. ಇವನು ಮಾಂಡಲಗಡ ಮುಂತಾದ ಹೊಸ ಹೊಸ ಪ್ರಾಂತಗಳನ್ನು ಗೆದ್ದು ಸ್ವರಾಜ್ಯಕ್ಕೆ ಜೋಡಿಸಿದನು; ದಿಲ್ಲಿಯ ಹುಮಾಯೂನ ಬಾದಶಹನ ಕೂಡ ಬಾಕರೋಲ ಎಂಬಲ್ಲಿ ಕಾಳಗ ಮಾಡಿ ಆ ಬಾದಶಹನನ್ನು ಪರಾಭವ ಪಡಿಸಿದನು. ಮುಂದೆ ಬನೌಡಾ ಎಂಬಲ್ಲಿಯ ಹಾಡಿಯಾ ಎಂಬ ರಜಪೂತ ಸಂಸ್ಥಾನಿಕನ ಕನ್ಯೆಯೊಡನೆ ವಿವಾಹ ಮಾಡಿಕೊಳ್ಳಬೇಕೆಂದು ಇವನು ಉದ್ಯೋಗ ನಡಿಸಿರಲು, ಆ ಸಂಸ್ಥಾನಿಕರ ಕಪಟಕ್ಕೆ ಒಳಗಾಗಿ ಜೀವಕ್ಕೆ ಎರವಾದನು.

ಕ್ಷೇತ್ರಸಿಂಗನು ೧೮ ವರುಷ ರಾಜ್ಯವಾಳಿ ಮಡಿದ ತರುವಾಯ ಲಾಖಾರಾಣಾ ಎಂಬವನು ಚಿತೋಡದ ಸಿಂಹಾಸನಾಧಿಕಾರಿಯಾದನು. ಇವನು ಪರಾಕ್ರಮಿಯೂ ಕಲಾಕೌಶಲ್ಯಗಳಿಗೆ ಉತ್ತೇಜನ ಕೊಡುವವನೂ ಉತ್ಕೃಷ್ಟವಾದ ರಾಜ್ಯಪದ್ಧತಿಯಿಂದ ನಡಿಯುವವನೂ ಆಗಿದ್ದನು. ಇವನು ಮೊದಲು ಮೇವಾಡದೊಳಗಿನ ದುರ್ಗ ಕೋಟೆಗಳನ್ನು ಕೈವಶ ಮಾಡಿಕೊಂಡು ಅವುಗಳೊಳಗಿನ ಬಹು ಘಾತಕವಾದ ವೈರಾಟವೆಂಬ ಕೋಟೆಯನ್ನು ನೆಲಸಮ ಮಾಡಿಸಿದನು ಲೋದೀ ವಂಶದ ಮಹಮ್ಮದನೆಂಬ ಬಾದಶಹನನ್ನು

ಸ್ತೋಲಿಸಿದನು. ಇವನು ಹೊಸ ಪ್ರದೇಶವನ್ನು ಗೆದ್ದು ಸ್ವರಾಜ್ಯದ ಮರ್ಯಾದೆಯನ್ನು ಬೆಳಿಸುವದರಿಂದ ಆಗುವ ಲಾಭಕ್ಕಿಂತ ಸ್ವರಾಜ್ಯದ ಧನಸಂಪತ್ತಿಯನ್ನು ನಿರಂತರವಾಗಿ ವರ್ಧಿಸುವಂತೆ ಯತ್ನಿಸುವದು ಹೆಚ್ಚು ಉಪಯುಕ್ತವಾದದ್ದೆಂದು ನಿಶ್ಚಯಿಸಿ, ತನ್ನ ರಾಜ್ಯದೊಳಗೆ ಎಲ್ಲೆಲ್ಲಿ ಲೋಹಗಳ ಖನಿಗಳು ಇರಬಹುದೆಂಬದನ್ನು ಶೋಧಿಸುವದಕ್ಕಾಗಿ ಭೂಗರ್ಭ ಶಾಸ್ತ್ರಜ್ಞರನ್ನು ದೇಶದ ತುಂಬಾ ಕಳಿಸಿದನು. ಅವರು ವಿಶೇಷ ಶ್ರಮ ಮಾಡಿ ಜಾವರಾ ಎಂಬಲ್ಲಿ ಬೆಳ್ಳಿಯೂ ತವರವೂ ಸಿಗುವ ಸಂಭವವು ವಿಶೇಷ ಉಂಟೆಂ ತಿಳಿಸಿದರು ಅರಸನು ಕೂಡಲೆ ಅಲ್ಲಿಯ ಖನಿಗಳನ್ನು ಅಗಿಯ ಹಚ್ಚಲು ಸ್ವಲ್ಪ ದಿವಸಗಳಲ್ಲಿಯೇ ಕಣಿಗಳಿಂದ ತೆಗೆದ ಬೆಳ್ಳಿ ತವರುಗಳ ರಾಶಿಗೆ ರಾಶಿಯು ಕಂಗೊಳಿಸಹತ್ತಿತು ಈ ಲೋಹ ಸಂಚಯವು ರಾಷ್ಟ್ರದ ಒಂದು ನಿರಂತರದ ಉತ್ಪನ್ನವಾಯಿತು. ಇವನು ದೇಶದಲ್ಲಿ ಕಲಾಕೌಶಲ್ಯದ ಅಭಿವರ್ಧನಕ್ಕಾಗಿ ಅನೇಕ ಉಪಾಯಗಳನ್ನು ಯೋಜಿಸಿದನು. ರಾಜ್ಯರಕ್ಷಣೆಕ್ಕೋಸ್ಕರ ಗಿರಿದುರ್ಗ ಪುರದುರ್ಗಗಳನ್ನು ಕಟ್ಟಿಸಿದ್ದಲ್ಲದೆ, ಪ್ರಜಾಹಿತಕರವಾದ ಅನೇಕ ಕೆರೆ ಬಾವಿಗಳನ್ನು ಅಗಿಸಿದನು. ಖನಿಯ ಉತ್ಪನ್ನದಿಂದ ಸಂಪತ್ತಿನ ಸಂಚಯವು ವಿಪುಲವಾಗಲು, ಅಲ್ಲಾಉದ್ದೀನನ ಹಾವಳಿಯಲ್ಲಿ ನಾಶ ಹೊಂದಿದ ರಾಜಗೃಹಗಳನ್ನು, ವಿಲಾಸ ಮಂದಿರಗಳನ್ನು ಮರಳಿ ಕಟ್ಟಿಸಿದನು. ಇವನು ಸ್ವತಃ ವಾಸ ಮಾಡಿದ ಅರಮನೆಯ ಕೆಲಭಾಗವು ಇಂದಿಗೂ ಗೋಚರವಾಗುತ್ತದೆ. ಇದನ್ನು ನೋಡಿದರೆ ಚಿತೋಡದೊಳಗಿನ ರತ್ನಮಂದಿರವೂ, ಪದ್ಮಿನಿಯ ಅರಮನೆಯೂ ಈ ಅರಮನೆಯ ಕಟ್ಟವಿಕೆಯನ್ನು ಹೋಲುತ್ತದೆಂದು ಸ್ಪಷ್ಟವಾಗುತ್ತದೆ. ಇವನು ಕಟ್ಟಿಸಿದ ಬ್ರಹ್ಮದೇವರ ಗುಡಿಯು ಇಂದಿಗೂ ಅಚ್ಚಳಿಯದೆ ನಿಲಿಸಿರುವದು.

ಲಖಾರಾಣಾನಿಗೆ ಸಂತತಿಯು ಹೆಚ್ಚು. ಅವರಲ್ಲಿ ಜ್ಯೇಷ್ಠ ಪುತ್ರನು ಚೋಂಡಾ ಎಂದೂ, ಕನಿಷ್ಠನ ಹೆಸರು ಮೋ

ಕಾಲವೆಂದೂ ಇದ್ದವು. ಇವನ ತರುವಾಯ ಮೋಕಲನೇ ಪಟ್ಟದ ಮೇಲೆ ಕುಳಿತನು. ಜೇಷ್ಠನನ್ನು ಬಿಟ್ಟು ಕನಿಷ್ಠನಿಗೆ ಪಟ್ಟವಾದದ್ದರ ಕಾರಣವನ್ನು ಮುಂದಿನ ಅಧ್ಯಾಯದಲ್ಲಿ ನಿರೂಪಿಸುವೆವು.

೫ನೆಯ ಅಧ್ಯಾಯ.

ಯಾವತ್ತು ಸುಧಾರಿಸಿದ ರಾಷ್ಟ್ರಗಳಲ್ಲಿ ಸ್ತ್ರೀಯರ ಮಾನಾಭಿಮಾನಗಳನ್ನು ಪುರುಷರು ಹೆಚ್ಚು ದಕ್ಷತೆಯಿಂದ ರಕ್ಷಿಸುವ ಕಾರ್ಯದಲ್ಲಿ ಸರ್ವಸ್ವವನ್ನು ಕಿಂಬಹುನಾ ತಮ್ಮ ಜೀವವನ್ನು ಸಹ ಕಳಕೊಳ್ಳುತ್ತಾರೆಂಬದು ಸರ್ವಶ್ರುತವು. ಅವರು ಯಾವಾಗಲೂ ತಮ್ಮ ಸ್ತ್ರೀಯರನ್ನು ಜರಬಿನಲ್ಲಿಟ್ಟುಕೊಂಡು ಅವರ ಅಂತರ್ಬಾಹ್ಯ ಸ್ಥಿತಿಯನ್ನು ಅನುಲಕ್ಷಿಸದೆ ಅವರನ್ನು ನಿಷ್ಠುರತೆಯಿಂದ ನಡಿಸಿಕೊಳ್ಳುವದೇ ವಿಶೇಷ ಮಹತ್ವದ್ದೆಂದು ಎಣಿಸುವರು. ಈ ಬಗೆಯ ಪುರುಷರ ತಿಳುವಳಿಕೆಯುಳ್ಳಂಥ ರಾಷ್ಟ್ರವೇ ಮೇಲಾದದ್ದೆಂದು ಎಣಿಸಲು, ರಜಪೂತರ ರಾಷ್ಟ್ರವು ಇಂಥ ರಾಷ್ಟ್ರಗಳ ಅಗ್ರಸ್ಥಾನದಲ್ಲಿ ನಿಲ್ಲುವದೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ರಜಪೂತರು ತಮ್ಮ ಸ್ತ್ರೀಯನ್ನು ಕಾಕು ದೃಷ್ಟಿಯಿಂದ ನೋಡುವಂಥವನನ್ನು ಕ್ಷಣಮಾತ್ರದಲ್ಲಿ ಯಮಸದನಕ್ಕಟ್ಟುವರು. ಸ್ತ್ರೀಯರು ಪರಪುರುಷನೊಡನೆ ಮಾತಾಡುವದನ್ನು ಕೂಡ ಸಹಿಸರು. ಸ್ತ್ರೀಯರ ಪಾತಿವ್ರತ್ಯದ ಬಗ್ಗೆ ಕಿಂಚಿತ್ ಸಂಶಯ ಬಂದರೂ ಅವರ ಕೋಪಾಗ್ನಿಯು ಪ್ರಜ್ವಲಿತವಾಗಿ ಅನೇಕ ಜನರನ್ನು ಆಹುತಿಗೊಳ್ಳುವದು. ಇಂಥ ಉದಾಹರಣೆಗಳು ರಜಪೂತರಲ್ಲಿ ಅನೇಕ ಉಂಟು.

ಹಿಂದಿನ ಅಧ್ಯಾಯದಲ್ಲಿ ಲಾಖಾರಾಣಾನ ತರುವಾಯ ಅವನ ಕಿರಿ ಮಗನಾದ ಮೋಕಲನು ಪಟ್ಟಕ್ಕೆ ಕುಳಿತನೆಂದೂ ಅವನ ಬಗ್ಗೆ ವಿಶೇಷ ಸಂಗತಿಯನ್ನು ಮುಂದಿನ ಅಧ್ಯಾಯದಲ್ಲಿ ನಿರೂಪಿಸುವೆವೆಂದೂ ಉಲ್ಲೇಖಿಸಿದ್ದು ವಾಚಕರ ಸ್ಮರಣದಲ್ಲಿರಬಹುದು. ಭರತ ಖಂಡದಲ್ಲಿ ತಂದೆಯ ತರುವಾಯ ಅವನ ಜೇಷ್ಠಪುತ್ರನೇ ರಾಜಪದಕ್ಕೆ ಬಾಧ್ಯನೆಂಬದು ಶಾ

ಸ್ತ್ರ ಸಮ್ಮತವೂ ಜನ ಸಮ್ಮತವೂ ಆಗಿರಲು, ಲಾಖಾರಾ ಣಾನ ಜೇಷ್ಠಪುತ್ರನು ಜೀವಂತನಿರುತ್ತ ಕನಿಷ್ಠನಿಗೆ ಪಟ್ಟ ವು ದೊರೆದದ್ದು ಆತ್ಯಾಶ್ಚರ್ಯಕರವಾದ ಸಂಗತಿಯೇ ಸರಿ. ಈ ಸಂಗತಿಯು ವರ್ತಿಸಿದ್ದಾದರೂ ಕೇವಲ ಅತ್ಯಲ್ಪ ಕಾರ ಣದಿಂದಲೇ. ಹ್ಯಾಗಂದರೆ—ಲಾಖಾರಾಣಾನ ವಯಸ್ಸು ಇಳಿತರಕ್ಕೆ ಬಂದಿತ್ತು. ವಯಸ್ಸಿಯದವರಾದ ಅವನ ಮಕ್ಕ ಳು ಸಹ ಹಡೆದಿದ್ದರು. ಈ ಸಂಧಿಯಲ್ಲಿ ಮಾರವಾಡದ ಅರಸನಾದ ರಣಮಲ್ಲನು ಮೇವಾಡದ ಯುವರಾಜನಾದ ಚೋಂಡಾನಿಗೆ ತನ್ನ ಮಗಳನ್ನು ಕೊಡಲೆಳಿಸಿ ರಾಣಾನ ಬಳಿಗೆ ಪೂರ್ಣಫಲದೊಂದಿಗೆ ಒಬ್ಬ ನಿಯೋಗಿಯನ್ನು ಕ ಳಿಸಿದನು. ಆ ನಿಯೋಗಿಯು ಬಂದ ಕಾಲದಲ್ಲಿ ಯುವರಾ ಜನಾದ ಚೋಂಡಾನು ಊರಲ್ಲಿದ್ದಿಲ್ಲ; ವೃದ್ಧ ರಾಣಾನು ಮಂತ್ರಿಮಂಡಲದೊಡನೆ ಓಲಗದಲ್ಲಿ ಕುಳಿತಿದ್ದನು. ರಾಣಾ ನು, ಬಂದ ನಿಯೋಗಿಯನ್ನು ಯಥೋಚಿತಸತ್ಕಾರದಿಂದ ಆದರಿಸಿ ಬಂದ ಕಾರ್ಯವನ್ನು ಕುರಿತು ಪ್ರಸ್ತಾಪಿಸಿದನು. ಆಗ ನಿಯೋಗಿಯು-ನಮ್ಮ ಮಹಾರಾಜರ ಕನ್ಯೆಯು ಉಪ ವರಳಾಗಿದ್ದದರಿಂದ ಆಕೆಯ ವಿವಾಹ ಪ್ರಸ್ತಾಪವನ್ನು ನಡಿ ಸುವದಕ್ಕಾಗಿ ಫಲ ಸಹಿತ ಪ್ರಾಪ್ತನಾಗಿದ್ದೇನೆ. ಎಂದು ನುಡಿ ದನು. ಈ ಮಾತಿನಲ್ಲಿ ಆ ಕನ್ಯೆಯನ್ನು ಇಂಥವನಿಗೇ ಅರ್ಪಿ ಸಬೇಕೆಂದು ಬಂದಿರುವೆನೆಂಬ ಅರ್ಥವು ಸ್ಪಷ್ಟವಾಗಿ ಹೊರ ಡಲಿಲ್ಲವಾದರೂ ರಾಣಾನು, ಈ ಅಸ್ಪಷ್ಟ ವಾಕ್ಯದ ಅರ್ಥವ ನ್ನು ಸರಿಯಾಗಿ ಭಾವಿಸಿ, ತನ್ನ ಮಗನಾದ ಚೋಂಡಾನಿಗೆ ತ ನ್ನ ಕನ್ನಿಕೆಯನ್ನರ್ಪಿಸುವದಕ್ಕೋಸ್ಕರವೇ ಮಾರವಾಡದ ಭೂಪನು ನಿಯೋಗಿಯನ್ನು ಕಳಿಸಿರುವನೆಂದು ನಿಶ್ಚಯಿಸಿದ ನು. ಆದರೂ ಅವನು ವಿನೋದದ ಸ್ವಭಾವದವನಿದ್ದದರಿಂದ ಮೀಸೆಯನ್ನು ಹುರಿ ಮಾಡುತ್ತ ನಮ್ಮಂಥ ದಿನ ಹೋದ ಮನುಷ್ಯನಿಗೆ ಯಾರು ತಮ್ಮ ಕನ್ನಿಕೆಯನ್ನು ಕೊಡಲಪೇ ಕ್ಷಿಸುವರು! ಒಳ್ಳೇದು, ಚೋಂಡಾನು ಊರಲ್ಲಿಲ್ಲ; ಅವನ

ಬಂದ ಬಳಿಕ ನೀವು ತಂದ ಪೂರ್ಣಫಲವನ್ನು ಸ್ವೀಕರಿಸ ವನು ಎಂದು ನುಡಿದನು. ರಾಣಾನ ವಿನೋದಯುಕ್ತ ಭಾಷಣವು ಸಭಿಕರನ್ನೆಲ್ಲ ನಗೆಗಡಲಲ್ಲಿ ಮುಳುಗಿಸಿತು ಸರಿ ಆದರೆ ಚೋಂಡಾನಿಗೆ ಮಾತ್ರ ಈ ಸರಸವು ವಿರಸವೆನಿಸಿ ತು. ಇವನು, ತಂದೆಯು ಅಪೇಕ್ಷಿಸಿದ ಕನ್ನಿಕೆಯು ತನಗೆ ಮಾತೃಸಮಾನವೆಂದು ಬಗೆದು ಮಾರವಾಡದ ಅರಸನ ವಿ ನಂತಿಯನ್ನು ಮನ್ನಿಸಲಿಲ್ಲ. ಮಂತ್ರಿಮಂಡಲದವರೂ ಸ್ವತಃ ರಾಣಾನೂ ನೀನು ನಿನ್ನ ತಪ್ಪು ತಿಳುವಳಿಕೆಯನ್ನು ಬಿಟ್ಟು ಆ ಕನ್ನಿಕೆಯನ್ನು ಪರಿಗ್ರಹಿಸು, ಎಂದು ಹೇಳಿದರೂ ಚೋಂ ಡಾನು ತಂದೆಯು ಮನಸೋತ ಕನ್ನಿಕೆಯನ್ನು ಮಗನು ಸ್ವೀಕರಿಸುವದು ಸರ್ವಾಬದ್ಧವಾದದ್ದು ಎಂದು ಖಂಡಿತವಾ ಗಿ ಹೇಳಲು; ರಾಣಾನು, ಮಗನೇ ಆದರಪೂರ್ವಕವಾಗಿ ಕೊಡಲೊಪ್ಪಿದ ಕನ್ನೆಯನ್ನು ಸ್ವೀಕರಿಸದೆ, ನಾನೇ ಅವ ಳ ಪಾಣಿಗ್ರಹಣವನ್ನು ಮಾಡಬೇಕೆಂದು ನೀನು ಹಟ ತೊಡುತ್ತೀ. ಆದರೆ ಈ ಕನ್ನೆಯಲ್ಲಿ ನನ್ನಿಂದ ಹು ಟ್ಟಿದ ಮಗನಿಗೆ ನಾನು ಪಟ್ಟವನ್ನು ಕಟ್ಟುವೆನು; ಇದಕ್ಕೆ ನಿನ್ನ ಒಪ್ಪಿಗೆಯುಂಟೋ, ತಟ್ಟನೆ ಹೇಳು, ಎಂದು ನುಡಿಯ ಲು; ಚೋಂಡಾನು ಕುಲಸ್ವಾಮಿಯಾದ ಏಕಲಿಂಗನನ್ನು ಸ್ಮರಿಸಿ ಹಾಗಾದ ಪಕ್ಷದಲ್ಲಿ ನಾನು ಮೇವಾಡದ ಪಟ್ಟಕ್ಕೆ ಎಂದೂ ಬಾಧ್ಯತೆಯನ್ನು ತೋರಿಸುವದಿಲ್ಲೆಂದು ಶಪಥ ಮಾ ಡಿದನು. ಆಗ ವಯಸ್ಕನಾದ ರಾಣಾನು ಮಾರವಾಡದ ರಾಜಪುತ್ರಿಯನ್ನು ಮದುವೆಯಾದನು ನೋಡಿರಿ! ರಜಪೂ ತರ ಸ್ತ್ರೀ ವಿಷಯಕವಾದ ತಿಳುವಳಿಕೆಯೂ ಅಭಿಮಾನವೂ ಎಷ್ಟು ಸೂಕ್ಷ್ಮವಾಗಿರುತ್ತವೆ!

THE RAJA OF TRAVANCOOR.

ತಿರುವಾಂಕೋಡದ ಮಹಾರಾಜರಾದ ರಾಮವರ್ಮ ದೇವರ ಚರಿತ್ರೆಯು.

ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ ।

स यत्प्रमाणं कुरुते लोकस्तदनुवर्तते ॥

ಹಿರಿಯರಾವುದನಾಚರಿಪರೋ ।
ನೆರವಿಯೆಲ್ಲವು ಮಾಳ್ಪುದದನಾ ।
ಹಿರಿಯರಂಗೀಕರಿಸಿದುದೆ ಲೋಕವು ಪ್ರವರ್ತಿಪುದು ।
(ಮಹಾಭಾರತ)

ಈ ಲೋಕದಲ್ಲಿ ಪ್ರತಿಷ್ಠಿತ ಜನರು ಯಾವ ಪ್ರಕಾರ ನಡೆಯುವರೋ ಅದರಂತೆ ಅನುಕರಣ ಮಾಡಲಿಕ್ಕೆ ಎಲ್ಲರೂ ಯತ್ನಿಸುತ್ತಿರುತ್ತಾರೆ. "ಯಥಾ ರಾಜಾ ತಥಾ ಪ್ರಜಾ" ಈ ಗಾದೆಯು ಮಾತಾದರೂ ಮೇಲಿನ ಅರ್ಥವನ್ನೇ ಹೇಳುತ್ತದೆ. ಶ್ರೇಷ್ಠತ್ವವನ್ನು ಹೊಂದಿದ ಮೇಲೆ ಮನುಷ್ಯನು ಮಾಡತಕ್ಕ ಕರ್ತವ್ಯ ಕರ್ಮಗಳೆಷ್ಟೋ ಇರುವವು. ಅವುಗಳಲ್ಲಿ ಸದಾಚರಣೆಯು ಮುಖ್ಯವಾದದ್ದು. ಯಾಕೆಂದರೆ ಪ್ರತಿಷ್ಠಿತ ಜನರನ್ನೇ ಎಲ್ಲರೂ ಅನುಕರಣ ಮಾಡಲಿಕ್ಕೆ ಯತ್ನಿಸುತ್ತಿರುವದರಿಂದ ಅವನ ಆಚರಣೆಯು ನಿಷ್ಕಲಂಕವಾದದ್ದಿರಲಿಕ್ಕೆಬೇಕು. ಇದಲ್ಲದೆ ಆತನನ್ನು ಹಿಂಬಾಲಿಸುವ ಜನರ ಅಪಯಶಯಶಗಳ ಜವಾಬದಾರಿಯು ಸಹ ಆ ಶ್ರೇಷ್ಠ ಮನುಷ್ಯನನ್ನೇ ಕೂಡಿರುತ್ತದೆ. ಈ ಮಹತ್ವವಾದ ನೀತಿತತ್ವವನ್ನು ಲಕ್ಷದಲ್ಲಿಟ್ಟುಕೊಂಡು ಜಗತ್ತಿನಲ್ಲಿ ಕೆಲವು ಮಹಾತ್ಮರು ಆಚರಿಸುತ್ತಾರೆ. ಅವರೊಳಗೆ ತ್ರಾವಣಕೋರದ ಮಹಾರಾಜರಾದ ರಾಮವರ್ಮರೆಂಬುವರು ಶ್ರೇಷ್ಠರೆನಿಸಿಕೊಳ್ಳುವರು. ಅವರ ವಿಷಯವಾಗಿ ಗೊತ್ತಿದ್ದ ಅಲ್ಪಸ್ವಲ್ಪ ಸಂಗತಿಗಳನ್ನು ಸಂಕ್ಷೇಪವಾಗಿ ಕೆಳಗೆ ವಿವರಿಸುತ್ತೇವೆ.

ಈ ಮಹಾರಾಜರು ಕ್ಷತ್ರಿಯರು. ಇವರ ವಂಶವು ಬಹು ಪುರಾತನಕಾಲದಿಂದ ನಡೆಯುತ್ತ ಬಂದದೆ. ಈ ಸಂಸ್ಥಾನದ ಪಟ್ಟಕ್ಕೆ ಬಾಧ್ಯಸ್ಥರಾಗತಕ್ಕವರು ದೌಹಿತ್ರ ಸಂತತಿಯವರು. ಅಂದರೆ ಒಬ್ಬ ಮಗ ಮತ್ತು ಒಬ್ಬ ಮಗಳು ಉಳ್ಳ ಅರಸನು ಮರಣಹೊಂದಿದರೆ, ಮಗನು ಪಟ್ಟಕ್ಕೆ ಬಾಧ್ಯಸ್ಥನಾಗದೆ ಮಗಳ ಮಗನೇ ಸಿಂಹಾಸನಾರೂ

ಥನಾಗುತ್ತಾನೆ. ಒಂದು ವೇಳೆ ಅರಸನಿಗೆ ಹೆಣ್ಣುಮಗಳಿರದಿದ್ದರೆ ಹೆಣ್ಣುಮಕ್ಕಳನ್ನು ದತ್ತಕ ತೆಗೆದುಕೊಳ್ಳುವ ಸಂಪ್ರದಾಯವುಂಟು. ಇಂಥ ಕನ್ಯೆಗೆ ತಂಬರಾಣ ಎಂದು ಅನ್ನುವರು. ಈಗಿನ ಮಹಾರಾಜರಾದ ರಾಮವರ್ಮ ಇವರು ಇ. ಸ. ೧೮೮೫ನೇ ವರ್ಷ ಸಿಂಹಾಸನಾರೂಢರಾದರು. ಇವರ ವಯಸ್ಸು ೪೭ ವರ್ಷ ಇವರ ಪೂರ್ವದಲ್ಲಿ ಇವರ ಸೋದರಮಾವನು ಅರಸನಿದ್ದನು. ಬಾಲ್ಯದಲ್ಲಿ ಇವರಿಗೆ ಸುಶಿಕ್ಷಣವು ದೊರೆತಿರುತ್ತದೆ. ಸ್ವಭಾಷೆಯಾದ ಮಲಿಯಾಳದಲ್ಲಿ ಇವರು ಪ್ರವೀಣರಿರುವರು. ಮತ್ತು ಹಿಂದುಸ್ಥಾನದಲ್ಲಿ ನಡೆಯತಕ್ಕ ಇತರಭಾಷೆಗಳಲ್ಲಿ ಹಿಂದೀ, ಮರಾಠಿ, ತಮಿಳ, ತೆಲಗು ಮುಂತಾದ ಭಾಷೆಗಳನ್ನು ಇವರು ಚನ್ನಾಗಿ ಅರಿತಿರುವರು. ಇಂಗ್ಲೀಷಭಾಷೆಯಲ್ಲಿ ಯಾದರೂ ಇವರಿಗೆ ಉತ್ತಮಗತಿಯುಂಟು. ಬಹುತರವಾಗಿ ಇವರ ಯಾವತ್ತೂ ಕಾಗದ ಪತ್ರಗಳ ವ್ಯವಹಾರವು ಇಂಗ್ಲೀಷದಲ್ಲಿಯೇ ನಡೆಯುತ್ತದೆ. ಇವರ ನಿಲುವಿಕೆ ಬಹಳ ಎತ್ತರವಿಲ್ಲ. ಅತಿಶಯ ಗಿಡ್ಡರೂ ಇಲ್ಲ. ಇವರ ಪೋಷಾಕು ಸಾದಾ ಇದ್ದು ಅಲಂಕಾರಕ್ಕೆ ಇವರು ಮೆಚ್ಚಿದವರಲ್ಲ. ಇವರ ಆಹಾರವು ಸಾಧಾರಣ ತರದ್ದು; ಯಾವ ಪದಾರ್ಥವನ್ನಾದರೂ ಮಿತಿಯಿಂದಲೇ ಸೇವಿಸುವರು. ಮದ್ಯಮಾಂಸಾದಿಗಳನ್ನಂತೂ ಇವರು ಮುಟ್ಟುವದೇ ಇಲ್ಲ. ಧರ್ಮಾಚರಣೆಯಲ್ಲಿ ಇವರು ಬಹಳ ನಿಷ್ಠಾವಂತರು. ಜಾತಿ ಧರ್ಮದ ಪ್ರಕಾರ ತಪ್ಪದೆ ನಡೆಯುವರು. ಈ ಸಂಬಂಧದಿಂದ ಇವರ ಮನಸ್ಸು ದೃಢವಾದದ್ದು. ಈಗಿನ ಬಾದಶಹರಾದ ೭ನೇ ಎಡ್ವರ್ಡರವರ ರಾಜ್ಯಾರೋಹಣ ಸಮಾರಂಭದಲ್ಲಿ ಇವರಿಗೆ ಆಗ್ರಹಪೂರ್ವಕವಾದ ಆಮಂತ್ರಣ ಪತ್ರವು ಬಂದಿದ್ದರೂ ಇವರು ವಿಲಾಯತಿಗೆ ಹೋಗಲಿಲ್ಲ. ಇದಕ್ಕೆ ಮುಖ್ಯಕಾರಣವೇನಂದರೆ ಇವರು ಪರದೇಶಗಮನವು ಮಹತ್ಪಾಪವೆಂದು ತಿಳಿಯುವರು. ಮತ್ತು ತಮ್ಮ ಪ್ರಜೆಗಳನ್ನು ಬಿಟ್ಟು ದೂರ ದೇಶಕ್ಕೆ ಹೋಗುವದು ಇವ

ರಿಗೆ ಸೇರುವದಿಲ್ಲ. ಅದರಂತೆ ಇವರ ಪ್ರಜೆಗಳಿಗಾದರೂ ಇವರ ವಿಯೋಗವನ್ನು ಸಹನಮಾಡುವದಾಗುವದಿಲ್ಲ.

ಮಹಾರಾಜರು ಸರ್ವದಾ ರಾಜವೈಭವದಲ್ಲಿಯೇ ಮಗ್ನ ರಾಗಿರುವದಿಲ್ಲ. ರಾಜಮಂದಿರವಾದರೂ ಸಾಧಾರಣತರ ದ್ದು ಇರುತ್ತದೆ. ಎಷ್ಟೋ ರಾಜಮಂದಿರಗಳಲ್ಲಿ ಸೇವಕರ ಹಾಗೂ ಪರಿಚಾರಕರ ಸುಳಿದಾಟವೂ ಓಡಾಟವೂ ಕಂಡು ಬರುವಂತೆ ಈ ರಾಜಮಂದಿರದಲ್ಲಿ ದೃಷ್ಟಿಗೆ ಬೀಳುವದಿ ಲ್ಲ. ಈ ರಾಜಮಂದಿರದಲ್ಲಿರತಕ್ಕ ಸಾಮಾನುಗಳು ನಿಯ ಮಿತ; ಆಳುಹೋಳುಗಳೂ ನಿಯಮಿತ; ಕೆಲಸಬೊಗಸೆ ಗಳೂ ನಿಯಮಿತವಾಗಿರುತ್ತದೆ. ಮತ್ತು ಘಡಿಯಾಳದಲ್ಲಿ ಯ ಚಕ್ರದ ಗತಿಯಂತೆ ಅರಮನೆಯೊಳಗಿನ ಯಾವತ್ತೂ ಕೆಲಸವು ವ್ಯವಸ್ಥಿತ ರೀತಿಯಿಂದ ಸಾಗಿಹೋಗುತ್ತದೆ. ಅರಮನೆಯಲ್ಲಿ ಎಲ್ಲಿ ನೋಡಿದರೂ ಸ್ವಚ್ಛತೆಯೂ, ಶಾಂತ ವೃತ್ತಿಯೂ ಕಂಡುಬರುವದು. ಈ ಪ್ರಕಾರದ ವ್ಯವಸ್ಥೆ ಯು ಪ್ರೆಸಿಡೆಂಟ ಕ್ರೂಗರ ಇವರ ಮನೆಯಲ್ಲಿಯೂ ಇರು ತ್ತಿತ್ತೆಂದು ಹೇಳುತ್ತಾರೆ.

ಮಹಾರಾಜರು ಪ್ರತಿದಿವಸ ಪ್ರಾತಃಕಾಲದ ನಾಲ್ಕೂವರೆ ಘಂಟೆಗೆ ಎದ್ದು ಮುಖಮಾರ್ಜನಾದಿ ಕರ್ಮಗಳನ್ನು ತೀರಿ ಸಿಕೊಂಡು ಆಯ್ದುವರೆ ಘಂಟೆಗೆ ಓಲಗದಲ್ಲಿ ಹೋಗಿ ಕೂ ಡ್ರುವರು. ಅಲ್ಲಿ ಏಳೂವರೆ ಹೊಡೆಯುವವರೆಗೆ ತಮ್ಮನ್ನು ಕಾಣಬೇಕೆಂದು ಇಚ್ಛಿಸುವವರಿಗೆ ಭೆಟ್ಟಿಯನ್ನು ಕೊಡು ವದೂ, ಟಪಾಲುಕೊಡುವದೂ, ಮತ್ತು ಪತ್ರದ ಉತ್ತರ ಗಳನ್ನು ಬರೆಯುವದೂ ಮುಂತಾದ ಕೆಲಸಗಳು ನಡೆಯು ವವು. ಆ ಮೇಲೆ ಚಳಿಗಾಲವಿರಲಿ, ಮಳೆಗಾಲವಿರಲಿ, ಬೇಸಿಗೆಯಿರಲಿ ತಪ್ಪದೆ ನದಿಯಲ್ಲಿಯೇ ಸ್ನಾನಮಾಡುವರು. ಬಳಿಕ ದೇವಪೂಜಾ ಮುಂತಾದ ನಿತ್ಯಕರ್ಮಗಳನ್ನು ತೀ ರಿಸುವರು. ಇತ್ಯಾದಿ ನಿತ್ಯ ವಿಧಾನಗಳನ್ನು ವಿಧಿಪೂರ್ವ ಕವಾಗಿ ಕುಟುಂಬದ ಜನರೆಲ್ಲರೂ ಮಾಡಿ ತೀರಿಸದ ಹೊ ರ್ತು ಯಾರೂ ಉಪಹಾರಾದಿಗಳನ್ನು ತೆಗೆದುಕೊಳ್ಳಕೂ

ಡೆದೆಂಬ ಪದ್ಧತಿಯು ಇರುವದು. ಉಪಹಾರವಾದ ಬಳಿಕ ಇವರ ಖಾಸಗೀ ಕಾರಭಾರಿಗಳು ಕೆಲಸಗಳನ್ನು ತೆಗೆದುಕೊಂಡು ಬರುವರು. ಅವರ ಎಲ್ಲಾ ಕಾಗದ ಪತ್ರಗಳನ್ನು ಮಹಾರಾಜರು ಸ್ವತಃ ಓದಿ ಇಲ್ಲವೆ ಕೇಳಿ, ಅಪ್ಪಣೆಗಳನ್ನು ಬರೆಯ ಹೇಳುವರು. ಆ ಅಪ್ಪಣೆಗಳಂತೆ ತಪ್ಪದೆ ವ್ಯವಸ್ಥೆ ನಡೆಯುವದು. ಆ ಮೇಲೆ ಮಹಾರಾಜರು ಸ್ವಲ್ಪ ವಿಶ್ರಾಂತಿಯನ್ನು ತೆಗೆದುಕೊಳ್ಳುವರು. ಮುಂದೆ ಎರಡು ತಾಸುಗಳಾದ ಮೇಲೆ ಇಂಗ್ರೇಜೀ ಮತ್ತು ದೇಶಭಾಷೆಯ ಮಾಸಿಕ ಪುಸ್ತಕಗಳನ್ನೂ, ವರ್ತಮಾನ ಪತ್ರಗಳನ್ನೂ ಓದುವರು, ಅದರಲ್ಲಿ ತಮ್ಮ ರಾಜ್ಯದ ವಿಷಯವಾಗಿ ಲೇಖಗಳು ಇದ್ದರೆ ಕೂಡಲೆ ಅವುಗಳನ್ನು ಆಯಾಖಾತೆಗಳಿಗೆ ನಿಯಮಿಸಲ್ಪಟ್ಟ ಅಧಿಕಾರಿಗಳಿಗೆ ತಿಳಿಸುವರು.

ಸಾಯಂಕಾಲದ ಎರಡು ಬಡೆದನಂತರ ಮಹಾರಾಜರು ಚಹಾಕುಡಿಯುವರು. ಮುಂದೆ ನಾಲ್ಕು ಬಡಿಯುವ ವರೆಗೆ ದರ್ಬಾರದ ಕೆಲಸಗಳನ್ನು ಸಾಗಿಸುವರು. ಆ ಮೇಲೆ ಗಾಡಿಯಲ್ಲಿ ಕುಳಿತು ಸಮುದ್ರದ ದಂಡೆಯ ಕಡೆಗಾಗಲಿ ಗುಡ್ಡದ ಮೇಲಾಗಲಿ ಅಡ್ಡಾಡಲಿಕ್ಕೆ ಹೋಗುವರು. ಅಲ್ಲಿಂದ ಆರು ವರೆ ಘಂಟೆಗೆ ಮನೆಗೆ ಬಂದು, ಸ್ನಾನ ಸಂಧ್ಯಾವಂದನೆ, ದೇವಪೂಜಾ ಮುಂತಾದ ನಿತ್ಯಕರ್ಮಗಳನ್ನು ತೀರಿಸಿಕೊಂಡು ಏಳು ಘಂಟೆಗೆ ಭೋಜನಮಾಡುವರು. ಭೋಜನವಾದ ಮೇಲೆ ಕೆಲವು ಹೊತ್ತು ಮನೆತನದ ಜನರ ಕೂಡ ವಿನೋದದ ಸಂಭಾಷಣೆಗಳಲ್ಲಿ ಕಾಲಕಳೆದು, ಉಳಿದ ಕೆಲವು ವೇಳೆಯನ್ನು ಓದುವದರಲ್ಲಿ ಕಳೆದು ಮಲಗಿಕೊಳ್ಳುವರು. ಇದು ಅವರ ದಿನಚರ್ಯವಾಗಿರುತ್ತದೆ.

ಮನುಷ್ಯನು ಸಣ್ಣವನಿರಲಿ, ದೊಡ್ಡವನಿರಲಿ, ಹಿಂದುವಿರಲಿ, ಯುರೋಪಿಯನ್ನನಿರಲಿ ಮಹಾರಾಜರ ಭೆಟ್ಟಿಯನ್ನು ತೆಗೆದುಕೊಳ್ಳಲಿಕ್ಕೆ ಅವನಿಗೆ ಏನೂ ನಿರ್ಬಂಧವಿಲ್ಲ. ಮಹಾರಾಜರು ಇವರ ಕೂಡ ಮನಸ್ಸು ಬಿಚ್ಚಿ ಮಾತಾಡಿ ಅವರ ಅಭಿಪ್ರಾಯಗಳನ್ನು ಕೇಳಿ ಉಪಾಯಗಳನ್ನು ಚಿಂತಿಸುವರು. ಮುಖ್ಯ ದಿವಾನರು ಮಹತ್ವದ ಕೆಲಸಗಳನ್ನು ತೆಗೆದುಕೊಂಡು ವಾರದಲ್ಲಿ ಎರಡಾವರ್ತಿ ಬರುವರು.

ಯಾವತ್ತೂ ಪ್ರಕರಣಗಳ ವಿಚಾರವನ್ನು ಶಾಂತ ರೀತಿಯಿಂದಲೂ ನಿಸ್ಪೃಹತೆಯಿಂದಲೂ ಮಾಡುವರು. ವ್ಯರ್ಥವಾಗಿ "ಮಹಾರಾಜ ಮಹಾರಾಜ" ಎಂದು ಲಾಂಗೂಲಚಾಲನ ಮಾಡತಕ್ಕಂಥವರನ್ನೂ, ಇಲ್ಲವೆ ಪ್ರಸಂಗ ನೋಡಿ ಕಾರ್ಯಸಾಧಿಸಿಕೊಳ್ಳತಕ್ಕಂಥವರನ್ನೂ ಇವರು ಎಷ್ಟುಮಾತ್ರವೂ ಸೇರುವದಿಲ್ಲ. ಬಹುತರವಾಗಿ ಇವರು ತಮ್ಮ ದೇಶಭಾಷೆಯಲ್ಲಿ ಅಂದರೆ ಮರಿಯಾಳೀ ಭಾಷೆಯಲ್ಲಿ ಮಾತಾಡುವರು. ಯಾವನಾದರೊಬ್ಬ ಈಗಿನ ಪಂಡಿತರು ಪ್ರಸಂಗಕ್ಕೆ ತಕ್ಕ ಶಬ್ದಗಳು ಸೂಚಿಸದಿದ್ದರೆ ಅಥವಾ ಮಾತಾಡುವದರಲ್ಲಿ ತತ್ತರಿಸಿದರೆ ಇಂಗ್ಲೀಷಭಾಷೆಯ ಅಭ್ಯಾಸದ ಚಟದಿಂದ ಸ್ವಭಾಷೆಯನ್ನು ಉಪೇಕ್ಷಿಸಿದ ಬಗ್ಗೆ ಮಹಾರಾಜರು ಅವನನ್ನು ವಾಕ್ಪ್ರಹಾರಗಳಿಂದ ತಿರಸ್ಕರಿಸದೆ ಎಂದೂ ಇರುವದಿಲ್ಲ. ಇಂಥವರು ಮಹಾರಾಜರ ಎದುರಿಗೆ ಮಾತಾಡಲು ಸಮರ್ಥರಾಗುವದಿಲ್ಲ. ಯಾಕೆಂದರೆ ಮಹಾರಾಜರಿಗೆ ಇಂಗ್ಲೀಷಭಾಷೆಯು ಚನ್ನಾಗಿ ಬರುವದಲ್ಲದೆ ಸ್ವಭಾಷೆಯಲ್ಲಿ ಪ್ರವೀಣರೆಂದು ಹೆಸರಾಗಿರುವರು.

ಮಹಾರಾಜರು ಪ್ರಸಂಗೋಪಾತ್ತಾಗಿ ಯುರೋಪಿಯನ್ನ ಜನರಿಗೆ ಮೇಜವಾನಿಗಳನ್ನು ಮಾಡುವರು. ಇವುಗಳ ವ್ಯವಸ್ಥೆಯು ಬಳ್ಳೇ ಅಚ್ಚುಕಟ್ಟಾಗಿರುವದು. ಮೇಜವಾನಿಯ ದಸೆಯಿಂದಲೇ ದೂರದೂರದ ದೇಶಗಳಿಂದ ಉಗೆಬಂಡಿ ಮುಂತಾದವುಗಳಿಂದ ಬೆಲೆಯುಳ್ಳ ಪದಾರ್ಥಗಳನ್ನು ತರಿಸುವರು. ಮತ್ತು ಮೇಜವಾನಿಯಲ್ಲಿ ಆಮಂತ್ರಿತ ಜನರು ಸಂತುಷ್ಟರಾಗುವದಕ್ಕೆ ಎಷ್ಟು ಖರ್ಚು ಹಿಡಿದರೂ ಖಚ್ಚುಮಾಡುವದಕ್ಕೆ ಇವರು ಹಿಂದು ಮುಂದೆ ನೋಡುವದಿಲ್ಲ. ಆದಾಗ್ಯೂ ಮಹಾರಾಜರು ತಮ್ಮ ಆಚಾರವಿಚಾರಗಳಲ್ಲಿ ಎಳ್ಳಷ್ಟಾದರೂ ಹೆಚ್ಚುಕಡಿಮೆಯಾಗಗೊಡುವದಿಲ್ಲ. ನಾಮದಾರ ಲಾರ್ಡಕರ್ಝನ್ ವೈಸರಾಯ ಇವರಿಗೆ ಉತ್ತಮತರದ ವ್ಯವಸ್ಥೆಯಿಂದ ಮೇಜವಾನಿಯನ್ನು ಮಾಡಿದರು. ಮೇಜವಾನಿಯನ್ನು ಮಾಡಿದಾಗ ಮಹಾರಾಜರು ಅವರ ಪಂಕ್ತಿಯಲ್ಲಿ ಆದರಸತ್ಕಾರಾರ್ಥವಾಗಿ ಹೋಗಿ ಕುಳಿತುಕೊಳ್ಳುವರೇ ಹೊರ್ತು ಅಲ್ಲಿ ಯಾವ ಪದಾರ್ಥಗಳನ್ನೂ ಮುಟ್ಟುವದಿಲ್ಲ. ಬಾದಶಹರವರ ಹುಟ್ಟಿದ ದಿವಸ ಇಲ್ಲವೆ ಬೇರೆ ಯಾವದಾದರೊಂದು ಉತ್ಸವದ ದಿವಸ ರೆಸಿ

ಡೆಂಟರು ಇವರನ್ನು ಆಗ್ರಹಪೂರ್ವಕವಾಗಿ ಭೋಜನಕ್ಕೆ ಕರೆಯುವರು. ಆಗ್ಗೆ ಮಹಾರಾಜರು ಕೇವಲ ಸನ್ಮಾನಾರ್ಥವಾಗಿ ಅವರ ಪಂಕ್ತಿಯಲ್ಲಿ ಕುಳಿತುಕೊಳ್ಳುವರು. ಅಲ್ಲಿ ಯಾವ ಪದಾರ್ಥಗಳನ್ನೂ ಕಣ್ಣೆತ್ತಿ ಸಹ ನೋಡುವದಿಲ್ಲ.

ಮಹಾರಾಜರು ಬಳ್ಳೇ ಕರ್ಮಠರವರು, ಪದ್ಮನಾಭನೆಂದು ಇವರ ಕುಲದೇವತೆಯ ಹೆಸರು, ಅವರಲ್ಲಿ ಇವರಿಗೆ ಸಂಪೂರ್ಣವಿಶ್ವಾಸವು, ಆ ದೇವರ ಆರಾಧನೆಯ ಕೆಲಸದಲ್ಲಿ ಇವರು ಎಳ್ಳಷ್ಟಾದರೂ ಹೆಚ್ಚು ಕಡಿಮೆಯಾಗಗೊಡುವದಿಲ್ಲ. ಇವರ ಇಚ್ಛೆಯಂತೆಯೇ ಎಲ್ಲ ಸಂಗತಿಗಳು ವರ್ತಿಸುತ್ತವೆಂದು ಮಹಾರಾಜರ ತಿಳುವಳಿಕೆಯುಂಟು. ಈ ದೇವರ ದರ್ಶನವನ್ನು ಮಹಾರಾಜರು ಪ್ರತಿದಿವಸ ತಪ್ಪದೆ ತೆಗೆದುಕೊಳ್ಳುವರು, ಆ ನಾಡಿನಲ್ಲಿ ವರ್ಷದಲ್ಲಿ ಎರಡು ಹಬ್ಬಗಳು ಮುಖ್ಯವಾದವುಗಳು. ಆಗ್ಗೆ ಆ ದೇವರ ಪೂಜೆಯು ಬಳ್ಳೇ ವೈಭವದಿಂದ ನಡೆಯುವದು. ಆಗಂತೂ ಮಹಾರಾಜರು ಬಹಳ ಸಾರೆ ಗುಡಿಗೆ ಹೋಗುತ್ತಿರುತ್ತಾರೆ. ಮತ್ತು ಉತ್ಸವದ ಕಾಲಕ್ಕೆ ಪಲ್ಲಕ್ಕಿಯ ಸಂಗಡ ಹರದಾರಿಯ ತನಕ ನಡೆಯುತ್ತ ಹೋಗುವರು. ಇದೇ ಪ್ರಕಾರ "ಬಗ್ರದೀಪ" ಎಂದು ವರ್ಷದಲ್ಲಿ ಮತ್ತೆ ಎರಡು ಹಬ್ಬಗಳು ಬರುವವು. ಇವು ಎಂಟೆಂಟು ದಿವಸಗಳ ವರೆಗೆ ನಡೆಯುವವು. ಆ ಕಾಲಕ್ಕೆ ಮಹಾರಾಜರು ಬಬ್ಬ ತಪಸ್ವಿಯಂತೆ ಊರಹೊರಗೆ ಕಟ್ಟಿದ ಮಠದಲ್ಲಿ ಏಕಾಂಗಿಯಾಗಿ ಇರುವರು. ದಸರೆಯ ಹಬ್ಬದಲ್ಲಿ ದೊಡ್ಡ ದೊಡ್ಡ ಪಂಡಿತರನ್ನು ಕರಿಸಿ ಸಭೆಯನ್ನು ನೆಂಸುವರು. ಅಲ್ಲಿ ನ್ಯಾಯ ವ್ಯಾಕರಣ ಮುಂತಾದ ಗಹನವಾದ ವಿಷಯಗಳ ಸಂಬಂಧದಿಂದ ಎಷ್ಟೋ ವಾದವಿವಾದಗಳು ನಡೆಯುವವು. ಮಹಾರಾಜರು ಬಳ್ಳೇ ಉತ್ಸುಕತೆಯಿಂದ ಅದನ್ನು ಕೇಳುತ್ತ ಕುಳಿತುಕೊಳ್ಳುವರು. ಮತ್ತು ವಿದ್ವಾಂಸರಿಗೆ ಅವರವರ ಯೋಗ್ಯತಾನುಸಾರವಾಗಿ ಸಂಭಾವನೆಯನ್ನು ಕೊಟ್ಟು ಅಪ್ಪಣೆಯನ್ನು ಕೊಡುವರು. ಹಾಡು ಬಾರಿಸುವವರಿಗೆ ಸಹ ಈ ಪ್ರಸಂಗದಲ್ಲಿ ಬಹಳ ಸನ್ಮಾನವಾಗುತ್ತಿರುತ್ತದೆ.

DEPARTMENTAL NOTICE.

ನೋಟೀಸುಗಳು.

ದಕ್ಷಿಣ ಭಾಗದೊಳಗೆ ಅಂದರೆ ಧಾರವಾಡ ಬೆಳಗಾವಿ ವಿಜಾಪೂರ ಕಾರವಾರ ರತ್ನಾಗಿರಿ ಕುಲಾಬಾ ಕೊಲ್ಹಾಪುರ ವೇ ಮೊದಲಾದ ದೇಶೀಯ ಸಂಸ್ಥಾನಗಳಲ್ಲಿ ಮುಲಕೀ ಪರೀಕ್ಷೆಗೆ ಕೂಡುವ ಯಾವತ್ತೂ ಉಮೇದವಾರರಿಗೆ ಸನ್ ೧೯೦೭—೦೮ನೇ ಇಸವಿಯಲ್ಲಾಗುವ ಪರೀಕ್ಷೆಗಾಗಿ ಕೆಳಗಿನ ಪುಸ್ತಕಗಳು ಆರಿಸಲ್ಪಟ್ಟಿರುತ್ತವೆ. ೧೯೦೬ನೇ ಇಸವಿಯ ಜುಲೈ ೧೬ನೇ ತಾರೀಖಿನ ಮುಂಬಯಿ ಗವರ್ನಮೆಂಟ ಗ್ಯಾಝೇಟಿನ ೮೩೩-೮೩೪ನೇ ಪುಟಗಳಲ್ಲಿ ಈ ಸಂಗತಿಯು ಪ್ರಸಿದ್ಧಿಸಲ್ಪಟ್ಟದೆ.

೨ ಬೆಳಗಾವಿ ವಿಜಾಪೂರ ಕಾರವಾರಗಳಲ್ಲಿ ಈ ಪರೀಕ್ಷೆಯು ಮಹಾರಾಷ್ಟ್ರ ಕನ್ನಡ ಇವೆರಡೂ ಭಾಷೆಗಳಲ್ಲಿ ನಡೆಯುವದು ಧಾರವಾಡದಲ್ಲಿ ಬರೇ ಕನ್ನಡ ಭಾಷೆಯಲ್ಲಿಯೂ ರತ್ನಾಗಿರಿ ಕುಲಾಬಾ ಕೊಲ್ಹಾಪುರಗಳಲ್ಲಿ ಬರೇ ಮಹಾರಾಷ್ಟ್ರ ಭಾಷೆಯಲ್ಲಿಯೂ ನಡೆಯುವದು.

೩ ಮಹಾರಾಷ್ಟ್ರ ಭಾಷೆಯಲ್ಲಿ ಪರೀಕ್ಷೆಗೆ ಕೂಡ್ರಲಪೇಕ್ಷಿಸುವ ಧಾರವಾಡ ಜಿಲ್ಲೆಯ ಉಮೇದವಾರರು ಮುಂಬಯಿ ಇಲಾಖೆಯ ದಕ್ಷಿಣ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ ಸಾ. ರವರ ಅಪ್ಪಣೆಯಿಂದ ಬೆಳಗಾವಿಯಲ್ಲಾಗುವ ಪರೀಕ್ಷೆಗೆ ಕೂಡ್ರಬಹುದು.

ಮಹಾರಾಷ್ಟ್ರ

೧ ವಾಚನಪುಸ್ತಕ – ೬ನೇಪುಸ್ತಕ ಹಳೇದುಪೂರಾ.

೨ ಕವಿತೆ-ಮರಾಠಿ ೬ನೇಪುಸ್ತಕದ ಮೊದಲಿನ ೩೦೦ ಪಂಕ್ತಿಗಳು ಅರ್ಥ ಸಹ ಬಾಯಿಪಾಠ ಅನ್ನತಕ್ಕದ್ದು.

ಕನ್ನಡ.

೧ ವಾಚನ—ಕನ್ನಡ ೬ನೇಪುಸ್ತಕದ ಕಡೇ ಇನ್ನೂರು ಪುಟಗಳು.

೨ ಕವಿತೆ—ಜೈಮಿನಿಯ ೩ನೇ ಸಂಧಿಯ ಆರಂಭದಿಂದ ೫೦೦ ಶ್ಲೋಕಗಳು ಅರ್ಥಸಹಿತ ಬಾಯಿಪಾಠ ಬರತಕ್ಕದ್ದು.

ಉರ್ದು

ಮೌಲವೀನಾಝೀರ ಅಹಮ್ಮದ ಎಂಬವರು ರಚಿಸಿದ ತೌಬತನ್‌ನಾಸೂಬ ಎಂಬ ಪುಸ್ತಕವು.

ಧಾರವಾಡ. | B. R. Sahasrabndhe,
ತಾ॥ ೨೨-೧೦-೦೬ | *Educational Inspector. S. D.*

ಸರ್ಟಿಫಿಕೇಟ ಸಮಾರಂಭವು.

ರಾವಸಾಹೇಬ ಕನ್ನಡ ಶಾಲಾಪತ್ರಕದ ಎಡಿಟರ ಧೊರೆಗಳವರ ಸನ್ನಿಧಿಗೆ—

ವಿ. ವಿ. ಕೆಳಗಿನ ನಾಲ್ಕು ಪಙ್ಕ್ತಿಗಳಿಗೆ ತಮ್ಮ ಸುಂದರವಾದ ಶಾಲಾಪತ್ರಕದ ಇದೇ ಅಂಕದೊಳಗೆ ಸ್ಥಳ ಕೊಡುವಿರೆಂದು ನಂಬಿದ್ದೇನೆ

ಈ ನವಂಬರ ತಿಂಗಳ ೩ನೆಯ ತಾರೀಖು ಬುಧವಾರ ದಿವಸ ಈವೂರ ಕನ್ನಡ ಶಾಲೆಯೊಳಗೆ ಇಲ್ಲಿಂದ ಮುಲ್ಕೀ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಅವರವರ ಸರ್ಟಿಫಿಕೇಟುಗಳನ್ನು ಕೊಡುವ ಸಮಾರಂಭವು ಬಹು ವಿಜೃಂಭಣೆಯಿಂದ ಜರುಗಿತು ಇದಕ್ಕಾಗಿ ಶಾಲಾಗೃಹವನ್ನು ಸುಶೋಭಿತವಮಾಡಿ ಕುರ್ಚಾಸನಗಳಿಂದ ಸಜ್ಜುಗೊಳಿಸಿದ್ದರು. ಮೊದಲೇ ಗೊತ್ತಾದ ಕಾರ್ಯಕ್ರಮದ ಮೇರೆಗೆ ಹೊತ್ತಿಗೆ ಸರಿಯಾಗಿ ಮಧ್ಯಾಹ್ನದ ೪ಗಂಟೆಗೆ ಊರೊಳಗಿನ ಶೆಟ್ಟಿ ಸಾವುಕಾರರೂ ವ್ಯಾಪಾರಸ್ಥರೂ ಸ್ಕೂಲ ಕಮಿಟಿಯವರೂ ಇನ್ನೂ ಬೇರೆ ಪ್ರಮುಖ ಗೃಹಸ್ಥರೂ ಬಂದು ಮಂದಿರವನ್ನಲಂಕರಿಸಿದರು ಕೂಡಲೆ ಕಾರ್ಯದಕ್ಷ ಹೆಡ್‌ಮಾಸ್ತರರಾದ ಕೃಷ್ಣಾಜಿ ಶಂಕರ ಮುಳಗುಂದ ಇವರು ಕಾರ್ಯಾರಂಭದಲ್ಲಿ ಜಗದೀಶನನ್ನು ಕೊಂಡಾಡಿ ಬಂದ ಜನರನ್ನು ಯೋಗ್ಯ ಸವಿ ನುಡಿಗಳಿಂದ ಸ್ವಲ್ಪದರಲ್ಲಿ ಸತ್ಕರಿಸಿದರು ನಂತರ ರಾ. ರಾ. ಗುರರಾವ ಸಾವನೂರ ವ ಶ್ರೀನಿವಾಸರಾವ ಕಬ್ಬೂರ ಇವರ ಸೂಚನಾನುಮೋದನಗಳಿಗನುಸರಿಸಿ ಸರಕಾರದವರಿಂದ ಸನ್ಮಾನಿತರಾಗಿ ಪೇನಶನ್ ಪಡೆದ ಕೂಸೋ ಮೂಡಲಗಿರಿ ಕುಲಕರ್ಣಿ ಇವರು ಅಧ್ಯ

ಕ್ಷಸ್ಥಾನವನ್ನು ಸ್ವೀಕರಿಸಿದರು ಆ ಮೇಲೆ ಮಿ. ಕೃಷ್ಣರಾವ ಹೆಡ್ ಮಾಸ್ತರ ಇವರು ಇಂದಿನ ಸಭೆಯ ಉದ್ದೇಶವನ್ನು ಸ್ವಲ್ಪದಲ್ಲಿ ಸಂಕ್ಷೇಪವಾಗಿ ಹೇಳಿದರು ಬಳಿಕ ೧ನೇ ಅ. ಮಾಸ್ತರರಾದ ಮಿ. ನವಲೂರ ಇವರು ಕಳೆದ ಎರಡು ವರ್ಷಗಳ ಶಾಲೆಯ ರಿಪೋರ್ಟನ್ನು ಓದಿದರು. ಅದರಿಂದ ಸನ್ ೧೯೦೪ ನೇ ಇಸವಿಯಲ್ಲಿ ಮುಲ್ಕಿ ಪರೀಕ್ಷೆಯಲ್ಲಿ ೩, ವಾರ್ಷಿಕಪರೀಕ್ಷೆಯಲ್ಲಿ ೩೩; ೧೯೦೫ ನೇ ಇಸವಿಯಲ್ಲಿ ಮುಲ್ಕಿ ಪರೀಕ್ಷೆಯಲ್ಲಿ ೩ ವಾರ್ಷಿಕಪರೀಕ್ಷೆಯಲ್ಲಿ ೯/೯ ಹುಡುಗರು ಪಾಸಾಗಿರುತ್ತಾರೆಂತಲೂ, ಈ ವರುಷ ಮುಲ್ಕೀಪರೀಕ್ಷೆಗೆ ಹೋದ ೧೦ ಹುಡುಗರಲ್ಲಿ ೯ ಹುಡುಗರು ಪಾಸಾಗಿರುವರೆಂತಲೂ ತಿಳಿಸಿದ್ದಲ್ಲದೆ ಧಾರವಾಡ ಸೆಂಟರಿಗೆ ಮೊದಲನೇ ಎರಡನೇ ನಂಬರ ಪಡೆದವರು ಈ ಶಾಲೆಯ ವಿದ್ಯಾರ್ಥಿಗಳೇ ಎಂದು ತಿಳಿಯ ಬಂತು. ಬಳಿಕ ಅಧ್ಯಕ್ಷರವರು ಹಿಂದಿನ ರಿಝುಲ್ಟುಗಳ ಮೇಲಿಂದಲೂ, ಈ ವರುಷದ ಮುಲ್ಕೀ ಪರೀಕ್ಷೆಯ ಪರಿಣಾಮದ ಮೇಲಿಂದಲೂ ನಮ್ಮ ಈ ಮಾಸ್ತರರು ಬಹು ಶ್ರಮ ತೆಗೆದುಕೊಂಡು ವಿದ್ಯಾರ್ಥಿಗಳಿಗೆ ಕಲಿಸುತ್ತಾರೆಂತಲೂ ಇವರ ಶಿಕ್ಷಣದಿಂದ ವಿದ್ಯಾರ್ಥಿಗಳಿಗೆ ನಿಜವಾದ ಕಲ್ಯಾಣವಾಗಿರುತ್ತದೆಂತಲೂ ಹೇಳಿ ಶಾಲೆಯ ಕೆಲಸಕ್ಕೆ ಏನಾದರೂ ಸಾಮಾನುಗಳ ಕೊರತೆ ಇದ್ದಲ್ಲಿ ಪೂರೈಸಿ ಕೊಡತಕ್ಕದ್ದೆಂತಲೂ ಸೂಚಿಸಿದರು. ಅಧ್ಯಕ್ಷರ ಸೂಚನೆಯ ಮೇರೆಗೆ ಗ್ಲೋಬು, ಗಡಿಯಾರ, ಝಾಗಟೆ, ಶಾಸ್ತ್ರೀಯ ಪ್ರಯೋಗಕ್ಕೆ ಅನುಕೂಲಿಸುವ ಹಲಕೆಲವು ಸಾಮಾನುಗಳ ಕೊರತೆಯುಂಟೆಂತಲೂ, ಆ ಕೊರತೆಯನ್ನು ದೂರ ಮಾಡುವದು ತಮ್ಮಂಥ ಉದಾರ ಸದ್ಗೃಹಸ್ಥರಿಗೆ ಭೂಷಣವೆಂತಲೂ ಮಿ. ಮುಳಗುಂದ ಇವರು ಸವಿನಯದಿಂದ ಹೇಳಿದರು. ತರುವಾಯ ರಾ. ಗುರಪ್ಪಾ ಅಣ್ಣಾ ಅಂಕಲಕೋಟೆ ವ ಮುರಿಗೆಪ್ಪಾ ಅಣ್ಣಾ ಚಿಕ್ಕೆರೂರ, ಮುಲಕಪ್ಪಾ ಅಣ್ಣಾ ಮಾಮಲೆಪಟ್ಟಣಶೆಟ್ಟಿ ಇವರು ಮಾಸ್ತರರ ಕೋರಿಕೆಯ ಪ್ರಕಾರ ಸಾಮಾನುಗಳನ್ನು ಪೂರೈಸಿ ಕೊಡಬೇಕೆಂತಲೂ, ಹಲಕೆಲವರು ದುಷ್ಕಾಲ ಮೂಲಕ ಸದ್ಯಕ್ಕೆ

ಅನುಕೂಲವಾಗಲಾರದೆಂತಲೂ ಹೇಳಿದರು. ಆ
ದರ ವಿಷಯವಾಗಿ ಹಲವರ ಭವತಿ ನಭವತಿಗಳು
ರ ರಾ. ಮಲಕಪ್ಪ ಅಣ್ಣಾ ಮಾಮಲೆಪಟ್ಟಣಶೆಟ್ಟಿ
೧೫೦ ರೂಪಾಯಿ ಬೆಲೆ ಬಾಳುವ ದೊಡ್ಡ ಗಡಿಯಾ
ರಾ. ಮುರಿಗೆಪ್ಪ ಅಣ್ಣಾ ಚಿಕ್ಕೇರೂರ ಇವರು ಸು
ದೊಡ್ಡ ರುಮಾಗಟೆಯನ್ನು ಕೊಡಲೊಪ್ಪಿಕೊಂಡಿ
ಉಳಿದವುಗಳ ಬಗ್ಗೆ ಉಳಿದ ಸಭ್ಯ ಗೃಹಸ್ಥರು ಅನ
ತೆಯ ಪ್ರಕಾರ ಸಹಾಯ ಮಾಡುವೆವೆಂದು ಒಪ್ಪಿಕೊಂಡಿದ್ದಾ
ರೆ. ಪರಿಣಾಮವೇನಾಗುತ್ತದೋ ನೋಡಬೇಕಾಗಿದೆ.

ಇಷ್ಟಾದ ಬಳಿಕ ಅಧ್ಯಕ್ಷರವರು ಪಾಸಾದ ೯ ವಿದ್ಯಾರ್ಥಿ
ಗಳಿಗೆ ಸರಟೀಫಿಕೇಟುಗಳನ್ನು ಕೊಟ್ಟು ಉಳಿದ ವಿದ್ಯಾರ್ಥಿಗ
ಳಿಗೆ ಮಿಠಾಯಿ ಚೂರಮರಿಯನ್ನು ಹಂಚಿದರು. ಬಳಿಕ
ಹೆಡ್‌ಮಾಸ್ತರರು ನಮ್ಮ ಮೇಲೆ ಬ್ರಿಟಿಶರ ರಾಜ್ಯವಾದದ್ದ
ರಿಂದ ಊರೂರಿಗೆ ಶಾಲೆಗಳಾಗಿ ಇಂಥ ಸಮಾರಂಭಗಳು ದೃ
ಷ್ಟಿಗೋಚರವಾಗಹತ್ತಿದವೆಂದು ಹೇಳಿ, ನಮ್ಮ ಮೇಲೆ ಇಂ
ಗ್ಲೀಷರ ರಾಜ್ಯಭಾರವು ಸ್ಥಿರವಾಗಿ ಇರಲೆಂತಲೂ ಶ್ರೀಮದೆ
ಡ್ವರ್ಡ ಧೊರೆಗಳವರು ಚಿರಾಯುವಾಗಲೆಂತಲೂ ಜಗಚ್ಚಾಲ
ಕನಾದ ಪರಮಾತ್ಮನನ್ನು ಬೇಡಿಕೊಂಡರು. ಕೊನೆಗೆ ಪ
ನ್ನೀರು ಪರಿಮಳ ದ್ರವ್ಯತಾಂಬೂಲ ಪುಷ್ಪಾದಿಗಳಿಂದ ಬಂದ
ಜನರನ್ನು ಸತ್ಕರಿಸಿ ಸಮಾರಂಭವನ್ನು ಸಾಂಗಗೊಳಿಸಿದರು.
ಈಗಿನ ಹೆ. ಮಾಸ್ತರರಾದ ಮಿ. ಕೃಷ್ಣರಾವ ಮುಳಗುಂದ
ಇವರು ಇಲ್ಲಿಗೆ ಬಂದು ನಾಲ್ಕುವರುಷಗಳಾಗುತ್ತ ಬಂದವು
ಈ ಅವಧಿಯಲ್ಲಿ ಶಾಲೆಯ ಉನ್ನತಿಯು ಎಲ್ಲ ರೀತಿಯಿಂದ
ಅಭಿವೃದ್ಧಿಯನ್ನು ಪಡೆಯುತ್ತ ನಡದದೆ. ಇದು ಅವರಿಗೂ
ಅವರ ಅ. ಜನರಿಗೂ ಬಹು ಭೂಷಣಕರವಾಗಿರುತ್ತದೆ.
ಅಯ್ಯಾ! ಪತ್ರಕರ್ತರೆ ಪತ್ರವಿಸ್ತಾರವಾಯಿತು. ಕ್ಷಮೆ
ಇರಲಿ. ಪ್ರಸಂಗಾನುಸಾರವಾಗಿ ಇನ್ನೊಮ್ಮೆ ಭೆಟ್ಟಿಗೆ ಬರು
ವೆನು. ಇತಿವಿನಂತಿ.

ಬಂಕಾಪುರ } ಸಹಿ ಮಲಕಪ್ಪಾ ಮಾಮಲೆ ಪಟ್ಟಣಶೆಟ್ಟಿ ಸ
ತಾ|| ೭-೧೧-೦೬ } ಮಾರಂಭಕ್ಕೆ ಹಾಜರಿದ್ದ ಒರ್ವಸಭ್ಯಗೃಹಸ್ಥ.

ಅನುಕೂಲವಾಗಲಾರದೆಂತಲೂ ಹೇಳಿದರು. ಆ ವೇ
ದರ ವಿಷಯವಾಗಿ ಹಲವರ ಭವತಿ ನಭವತಿಗಳು ಆ
ರ ರಾ. ಮಲಕಪ್ಪ ಅಣ್ಣಾ ಮಾಮಲೆಪಟ್ಟಣಶೆಟ್ಟಿ
೧೫ ರೂಪಾಯಿ ಬೆಲೆ ಬಾಳುವ ದೊಡ್ಡ ಗಡಿಯಾ
ರಾ. ಮುರಿಗೆಪ್ಪ ಅಣ್ಣಾ ಚಿಕ್ಕೇರೂರ ಇವರು ಸುನ
ದೊಡ್ಡ ರುಮಾಗಟೆಯನ್ನೂ ಕೊಡಲೊಪ್ಪಿಕೊಂಡಿ
ಉಳಿದವುಗಳ ಬಗ್ಗೆ ಉಳಿದ ಸಭ್ಯ ಗೃಹಸ್ಥರು ಅನ
ಹೆಯು ಪ್ರಕಾರ ಸಹಾಯ ಮಾಡುವೆವೆಂದು ಒಪ್ಪಿಕೊಂಡಿದ
ರೆ. ಪರಿಣಾಮವೇನಾಗುತ್ತದೊ ನೋಡಬೇಕಾಗಿದೆ.

ಇಷ್ಟಾದ ಬಳಿಕ ಅಧ್ಯಕ್ಷರವರು ಪಾಸಾದ ೯ ವಿದ್ಯಾರ್ಥಿ
ಗಳಿಗೆ ಸರಟೀಫಿಕೇಟುಗಳನ್ನು ಕೊಟ್ಟು ಉಳಿದ ವಿದ್ಯಾರ್ಥಿ
ಳಿಗೆ ಮಿಠಾಯಿ ಚುರಮುರಿಯನ್ನು ಹಂಚಿದರು. ಬಳಿ
ಹೆಡ್‌ಮಾಸ್ತರರು ನಮ್ಮ ಮೇಲೆ ಬ್ರಿಟಿಶರ ರಾಜ್ಯವಾದ
ರಿಂದ ಊರೂರಿಗೆ ಶಾಲೆಗಳಾಗಿ ಇಂಥ ಸಮಾರಂಭಗಳು
ಷ್ಟಿಗೋಚರವಾಗಹತ್ತಿದವೆಂದು ಹೇಳಿ, ನಮ್ಮ ಮೇಲೆ ಇ
ಗ್ಲೀಷರ ರಾಜ್ಯಭಾರವು ಸ್ಥಿರವಾಗಿ ಇರಲೆಂತಲೂ ಶ್ರೀಮ
ತ್ಸರ್ಕಾರ ಧೊರೆಗಳವರು ಚಿರಾಯುವಾಗಲೆಂತಲೂ ಜಗಚ್ಚಾ
ಕನಾದ ಪರಮಾತ್ಮನನ್ನು ಬೇಡಿಕೊಂಡರು. ಕೊನೆಗೆ
ನ್ನೀರು ಪರಿಮಳ ದ್ರವ್ಯತಾಂಬೂಲ ಪುಷ್ಪಾದಿಗಳಿಂದ ಬಂ
ಜನರನ್ನು ಸತ್ಕರಿಸಿ ಸಮಾರಂಭವನ್ನು ಸಾಂಗಗೊಳಿಸಿದರು
ಈಗಿನ ಹೆ. ಮಾಸ್ತರಾದ ಮಿ. ಕೃಷ್ಣರಾವ ಮುಳಗುಂ
ಇವರು ಇಲ್ಲಿಗೆ ಬಂದು ನಾಲ್ಕುವರುಷಗಳಾಗುತ್ತ ಬಂದ
ಈ ಅವಧಿಯಲ್ಲಿ ಶಾಲೆಯು ಉನ್ನತಿಯು ಎಲ್ಲ ರೀತಿಯಿಂ
ಅಭಿವೃದ್ಧಿಯನ್ನು ಪಡೆಯುತ್ತ ನಡೆದದೆ. ಇದು ಅವರಿಗ
ಅವರ ಜನರಿಗೂ ಬಹು ಭೂಷಣಕರವಾಗಿರುತ್ತ
ಅಯ್ಯಾ! ಪತ್ರಕರ್ತರೆ ಪತ್ರವಿಸ್ತಾರವಾಯಿತು. ಕ್ಷ
ಇರಲಿ. ಪ್ರಸಂಗಾನುಸಾರವಾಗಿ ಇನ್ನೊಮ್ಮೆ ಭೆಟ್ಟಿಗೆ ಬ
ವೆನು. ಇತಿವಿನಂತಿ.

ಬಂಕಾಪುರ } ಸಹಿ ಮಲಕಪ್ಪ ಮಾಮಲೆ ಪಟ್ಟಣಶೆಟ್ಟಿ
ತಾ॥ ೭-೧೧-೦೭ } ಸಮಾರಂಭಕ್ಕೆ ಹಾಜರಿದ್ದ ಓರ್ವಸಭ್ಯಗೃಹ